
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಡಿಸೆಂಬರ್ 22, 2010 ರೂ. 12/-

ಸಿನಿಮಾ ಪ್ರಶಸ್ತಿ 'ಹಂಚಿದ' ಭಾರ್ಗವ


ವಿಶ್ವೇಶ್ವರ ಭಟ್ ಡಿಸ್‌ಮಿಸ್



ಜಿಪಂ-ತಾಪಂ: ಮಂಡ್ಯ, ಉಡುಪಿ, ಧಾರವಾಡ



ಮಲ್ಲೇಶ್ವರಂ ಮರ್ಡರ್ಸ್ ಸುನಿಲ್ ಗ್ಯಾಂಗ್‌ನ ರಕ್ತದೋಕುಳಿ



ಸ್ವಸ್ತಿಕ್ ನಾಗರಾಜ್ ಟಿವಿ ನಟಿಯ ಕೊಲೆ ಯತ್ನ

ಪ್ರತಾಪ ಸಿಂಹನ ಸೈಟು ಹಗರಣ



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಠಗಳು ಒಡ್ಡುತ್ತಿರುವ ಅಪಾಯ

ಜಾತಿಯ ಕಬಂಧ ಬಾಹುಗಳು ಎಷ್ಟು ವಿಸ್ತಾರಕ್ಕೆ ಚಾಚುತ್ತಿವೆ. ದೊಡ್ಡ ದೊಡ್ಡ ಹುದ್ದೆಯಲ್ಲಿರುವ ಕೆಲವು ಕೆ.ಎ.ಎಸ್ ಮತ್ತು ಐ.ಎ.ಎಸ್ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಮಠಾಧೀಶರು ಗುಟ್ಟಾಗಿ ಸಭೆ ನಡೆಸುವುದು, ಎಳೆಯ ಮನಸ್ಸುಗಳನ್ನು ಜಾತಿಯ ಪಾಶಗಳಲ್ಲಿ ಬಿಗಿಯುವುದು ಇತ್ಯಾದಿ ವಿದ್ಯಮಾನಗಳು ಅತ್ಯಂತ ಅಪಾಯಕಾರಿ ಬೆಳವಣಿಗೆಗಳು. ವಿದ್ಯಾಸಂಸ್ಥೆಗಳಲ್ಲಿ ಜಾತೀಯತೆ, ಕಾಲೇಜುಗಳಲ್ಲಿ ಜಾತಿಗೇ ಮಾನ್ಯತೆ, ವಿಶ್ವವಿದ್ಯಾನಿಲಯದಲ್ಲಿ ಜಾತಿ ಹೆಸರಿನ ಯುವ ಸಂಘಟನೆಗಳು, ನೇಮಕಾತಿಯಲ್ಲಿ ಅರ್ಹತೆಗಿಂತ ಜಾತಿಗೇ ಹೆಚ್ಚಿನ ಮನ್ನಣೆ-ನಮ್ಮ ಪ್ರಜಾಪ್ರಭುತ್ವ ಯಾವ ದಿಕ್ಕಿನಲ್ಲಿ ಚಲಿಸುತ್ತಿದೆ?



ಇದೀ ಭಾರತದಲ್ಲಿಯೇ ಇತ್ತೀಚಿನ ವರ್ಷಗಳಲ್ಲಿ ನಡೆದ ಅತ್ಯಂತ ಲಜ್ಜೆಗೆಟ್ಟ ಪ್ರಕರಣ ಎಂದರೆ ಯಡಿಯೂರಪ್ಪನವರ ಕುರ್ಚಿ ಪ್ರಸಂಗ. ಇದನ್ನೊಂದು ಪ್ರಹಸನವೆಂದು ಜನ ನೋಡಿ ನಲಿಯಬಹುದಿತ್ತು, ಆದರೆ ಇದು ಲಜ್ಜೆಗೇಡಿತನ, ಭ್ರಷ್ಟಾಚಾರ, ನೈತಿಕ ಅಧಃಪತನ, ಜಾತಿರಾಜಕಾರಣ ಇತ್ಯಾದಿ ಅನೇಕ ಅಂಶಗಳನ್ನು ಒಳಗೊಂಡಿರುವುದರಿಂದ ಇದೀ ಕರ್ನಾಟಕವೇ ಮುಖ ತಗ್ಗಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಇನ್ನೇನಲ್ಲದಿದ್ದರೂ ಈ ಪ್ರಕರಣ ಬಿಜೆಪಿ, ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದ ಪೊಳ್ಳುಗಳನ್ನು ಮತ್ತೊಮ್ಮೆ ಬಯಲು ಮಾಡಿದೆ. ಹಾಗೆಯೇ ಕರ್ನಾಟಕದ ಮಠಾಧೀಶರ ಮುಖವಾಡಗಳನ್ನೂ ಕಿತ್ತೆಸೆದಿರುವುದು ಈ ಪ್ರಕರಣದ ಇನ್ನೊಂದು ವಿಶೇಷ. ಕೆಲವು ಮಠಗಳು ಬಹಿರಂಗವಾಗಿ ಯಡಿಯೂರಪ್ಪನವರ ಬೆಂಬಲಕ್ಕೆ ನಿಂತಿದ್ದರೆ ಮತ್ತೆ ಕೆಲವು ಮೌನವಾಗಿಯೇ ತಮ್ಮ ಬೆಂಬಲವನ್ನು ಸೂಚಿಸಿವೆ. ಯಾವ ಮಠಾಧೀಶನೂ ಯಡಿಯೂರಪ್ಪನವರು ಕುರ್ಚಿಯಿಂದ ಕೆಳಗಿಳಿಯಬೇಕು, ಅವರು ಮುಖ್ಯಮಂತ್ರಿಯಾಗಿ ಮುಂದುವರಿಯುವುದು ನ್ಯಾಯಯುತವಾದುದಲ್ಲ, ಸಮಾಜದ ಮೌಲ್ಯಗಳಿಗೆ ಪೆಟ್ಟುಕೊಡುತ್ತದೆ, ಸಮಾಜದ ಒಟ್ಟು ಹಿತದೃಷ್ಟಿಯಿಂದ ಅವರು ರಾಜೀನಾಮೆ ಕೊಡುವುದು ಒಳ್ಳೆಯದು ಎಂದು ಹೇಳುವ ನೈತಿಕ ಧೈರ್ಯವನ್ನು ತೋರಿಸಲಿಲ್ಲ. ಯಡಿಯೂರಪ್ಪನವರು ಸಾರ್ವಜನಿಕರ ಹಣವನ್ನು ಕಿಂಚಿತ್ತೂ ಕಾಳಜಿಯಿಲ್ಲದೆ ಮಠಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಬೇಕಾಬಿಟ್ಟಿಯಾಗಿ ಕೊಟ್ಟಿರುವುದೂ ಈ ಬೆಂಬಲದ ಹಿಂದೆ ಕೆಲಸ ಮಾಡಿದೆ, ಹೀಗಾಗಿಯೇ ಜಾತಿಯನ್ನು ಮೀರಿ ಕೆಲವು ಮಠಗಳು ಯಡಿಯೂರಪ್ಪನವರನ್ನು ಬೆಂಬಲಿಸಿವೆ ಎಂಬುದು ನಿಜ. ಜೊತೆಗೆ ಮಠಗಳು ರಾಜಕಾರಣದ ಜೊತೆಗೆ ಅನೇಕ ವರ್ಷಗಳಿಂದ ಒಳಗೊಳಗೇ ಕೈ ಮಿಲಾಯಿಸಿ, ಮಠರಾಜಕೀಯವನ್ನು ನಡೆಸುತ್ತ ಬಂದಿರುವುದನ್ನೂ ಈ ಪ್ರಕರಣದ ಹಿನ್ನೆಲೆಯಲ್ಲಿ ಗಮನಿಸಬಹುದು.

ಜಾತಿ, ಹಣ, ಅಧಿಕಾರ ಇವುಗಳ ಸುತ್ತ ಭಾರತದ ರಾಜಕಾರಣ ಸುತ್ತುತ್ತಿರುವಂತೆಯೇ ಈ ರಾಷ್ಟ್ರದ ಮಠಗಳು, ಮಠಾಧೀಶರು, ಗುರೂಜಿಗಳು, ದೇವಮಾನವರು, ಆಶ್ರಮಗಳು, ಧಾರ್ಮಿಕ ಸಂಸ್ಥೆಗಳು ಸುತ್ತುತ್ತಿರುವುದೂ ಈ ಮೂರು ಪ್ರಧಾನ ಅಂಶಗಳ ಸುತ್ತಲೇ. ಧರ್ಮ, ನೀತಿ, ಸಮಾಜಹಿತ ಇತ್ಯಾದಿ ಎಲ್ಲ ಮಾತುಗಳೇ ಹೊರತು ಇಲ್ಲಿ ಯಾವ 'ಧಾರ್ಮಿಕ' ಪುರುಷನಿಗೂ ಮೌಲ್ಯಗಳಾಗಿ ಉಳಿದಿಲ್ಲ. ಹಲವು ಹಗಲುವೇಷಗಳಂತೆ ಧರ್ಮವೂ ಒಂದು ವೇಷವೇ ಹೊರತು ಅದು ಯಾರಿಗೂ 'ಮುಕ್ತಿ' ಮಾರ್ಗವೂ ಅಲ್ಲ; ಪರಮಾರ್ಥವಲ್ಲ.

ಮಠಗಳು ಮತ್ತು ಧರ್ಮ ಸಂಸ್ಥಾನಗಳು ಎಂದು ಕರೆದುಕೊಳ್ಳುವ ಸ್ಥಾವರಗಳ ಬಗ್ಗೆ ನಮ್ಮ ಜನರಲ್ಲಿ ಭ್ರಮೆಗಳು ಇನ್ನೂ ಉಳಿದುಕೊಂಡಿವೆ. ಇದಕ್ಕೆ ಕಾರಣವೂ ಇಲ್ಲವೆಂದಲ್ಲ. ಅನೇಕ ಮಠಗಳು ವಿದ್ಯಾದಾನ, ಅನ್ನದಾನ, ಧರ್ಮ ಸಂಸ್ಥಾಪನಾ ಇತ್ಯಾದಿ ಮುಸುಕುಗಳನ್ನು ಹೊದ್ದಿವೆ. ವಿದ್ಯೆಯೆಂಬುದನ್ನು ಒಂದು ವ್ಯಾಪಾರೋದ್ಯಮವಾಗಿ ಮಾಡಿದವರು ಈ ಮಠಗಳ ಜನರೇ ಎಂಬುದನ್ನು ನಮ್ಮ ಜನತೆ ಅಷ್ಟಾಗಿ ಗಮನಕ್ಕೆ ತೆಗೆದುಕೊಂಡಿರುವಂತೆ ಕಾಣುವುದಿಲ್ಲ. ಅನ್ನದಾನ ಎಂಬ ಸೋಗಲಾಡಿತನದ ಹಿಂದೆ ಜಾತಿ ವ್ಯವಸ್ಥೆಯೂ, ಸರ್ಕಾರದ ಹಲವು ಯೋಜನೆಗಳನ್ನು ಪಡೆದುಕೊಳ್ಳುವ ಹುನ್ನಾರವೂ ಅಡಗಿದೆ ಎಂಬುದೂ ಹಲವರಿಗೆ ತಿಳಿದಿಲ್ಲ. ಮಾಧ್ಯಮಗಳು ಕೂಡಾ ಇಂಥ ಮುಸುಕನ್ನು ಸರಿಸಲು ಹೆಚ್ಚಿನ ಉತ್ಸಾಹವನ್ನು ತೋರಿಸುವುದಿಲ್ಲ. ರಾಜಕಾರಣಿಗಳ ವಿರುದ್ಧ ಹರಿದಾಡುವ ಮಾಧ್ಯಮಗಳು ಮಠಗಳ ವಿಚಾರದಲ್ಲಿ ಯಾಕೆ ಅಷ್ಟೊಂದು ಕ್ರಿಯಾಶೀಲವಾಗಿಲ್ಲ ಎಂಬುದು ಕೂಡಾ ಅಧ್ಯಯನಯೋಗ್ಯವೇ. ಕೆಲವು ಮಠಗಳು ತಾವು ಪ್ರಗತಿಪರ ಸಂಸ್ಥೆಗಳೆಂದು ತೋರಿಸಿಕೊಳ್ಳುವುದಕ್ಕಾಗಿ ಅನೇಕ ಸಣ್ಣಪುಟ್ಟ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿವೆ. ಕೆಲವು ಮಠಗಳು 'ರಾಷ್ಟ್ರಮಟ್ಟದ' ಪ್ರಶಸ್ತಿಗಳನ್ನು ಸಮಾಜದ ಗಣ್ಯರಿಗೆ ಕೊಡುತ್ತಿವೆ. ಕೆಲವು 'ಸರ್ವಧರ್ಮ' ಸಮ್ಮೇಳನಗಳನ್ನು ನಡೆಸುತ್ತಿವೆ. ಕೆಲವು ಮಠಗಳು ಕ್ರಾಂತಿಕಾರಕ ನಾಟಕಗಳನ್ನು ಆಡಿಸುತ್ತ ರೆಪರ್ಟರಿಗಳನ್ನು ನಡೆಸುತ್ತಿವೆ. ಸಂಗೀತ, ಸಾಹಿತ್ಯ, ಕಲೆ, ಧರ್ಮಗಳ ಪೋಷಕರು, ಸಂರಕ್ಷಕರು ತಾವೇ ಎಂಬ ಪೋಸನ್ನು ಕೊಡುತ್ತಿವೆ. ಮನುಷ್ಯರೆಲ್ಲರನ್ನೂ ಸಮಾನವಾಗಿ ಕಾಣುವ, ಜಾತಿಯನ್ನು ಮೀರಿ ಮಾನವತೆಯನ್ನು ತೋರುವ ಕನಿಷ್ಠ ಕರ್ತವ್ಯವನ್ನೂ ಈ ಮಠಗಳು ತೋರಿಸುತ್ತಿಲ್ಲ.

ನಿಜಕ್ಕೂ, ಧರ್ಮದಲ್ಲಿ ನಂಬಿಕೆ ಇಟ್ಟ ಒಬ್ಬ ಮಠಾಧೀಶನಿಗೆ ಸಮಾಜದ ಜೊತೆ ನಿಕಟಸಂಪರ್ಕವಿರುತ್ತದೆಯೇ ಹೊರತು ರಾಜಕಾರಣಿಗಳ ಜೊತೆಯಲ್ಲಿ ಅಲ್ಲ. ಸಮಾಜದ ಹಿತಕ್ಕೆ ಧಕ್ಕೆ ತರುವ ರಾಜಕಾರಣಿಗಳ ವಿರುದ್ಧ ಇಂಥ ಮಠಾಧೀಶರು ಜನರ ಪ್ರತಿನಿಧಿಗಳಂತೆ ವರ್ತಿಸುತ್ತ ಬಂಡೇಳಬೇಕು. ಆದರೆ ನಮ್ಮ ಮಠಗಳು ಹೀಗೆ ಬಂಡೆದ್ದ ಉದಾಹರಣೆಗಳೇ ಇಲ್ಲ. ಜಾತಿಯನ್ನೇ ಪ್ರಧಾನ ಅಸ್ತ್ರವಾಗಿ ಬಳಸುತ್ತ ರಾಜಕಾರಣಿಗಳ ಮೇಲೆ ಹಿಡಿತ ಸಾಧಿಸಲು, ಆ ಮೂಲಕ ತಮಗೆ ಮತ್ತು ತಮ್ಮ ಮಠಗಳಿಗೆ ಬೇಕಾದ ಹಣಕಾಸು, ಭೂಮಿ, ಡೊನೇಷನ್ ತರುವ ಕಾಲೇಜುಗಳು, ಜಾತಿಯನ್ನು ಬಲ ಪಡಿಸುವ ಸವಲತ್ತುಗಳು ಇತ್ಯಾದಿ ಪಡೆಯುವುದಕ್ಕಾಗಿಯೇ ಸದಾ ಶ್ರಮಿಸುತ್ತ ಬಂದಿವೆ. ಇದು ಒಂದು ದುರಂತವಾದರೆ, ಮಠಗಳ ಬಗ್ಗೆ ಅಪಾರ ಗೌರವವನ್ನು ಮತ್ತು 'ಭಕ್ತಿ'ಯನ್ನು ಇಟ್ಟುಕೊಂಡು, ಜಾತಿವ್ಯವಸ್ಥೆಯನ್ನು ಜನ ಗಟ್ಟಿಗೊಳಿಸುತ್ತಿರುವುದು ಇನ್ನೊಂದು ದುರಂತ.

ವಿಶೇಷ ಲೇಖನ

• ಜಿ.ಪಿ.ಬಸವರಾಜು

ಜಾತಿಯನ್ನು ಮೀರಿದ ಮಾನವ ಧರ್ಮ ತಮ್ಮದು ಎಂದು ವೇದಿಕೆಗಳಲ್ಲಿ ಘೋಷಿಸಿಕೊಂಡರೂ ಮಠಗಳು ಎಂದೂ ಜಾತಿಯನ್ನು ಬಿಟ್ಟಿಲ್ಲ. ಚುನಾವಣೆಯ ಸಂದರ್ಭದಲ್ಲಂತೂ ಮಠಗಳು ಜಾತಿಯ ಓಟ್ ಬ್ಯಾಂಕ್‌ಗಳಾಗಿ ವರ್ತಿಸಿವೆ. ತಮ್ಮ ಜಾತಿಯ ಹುರಿಯಾಳುಗಳಿಗೆ ಚುನಾವಣೆಯ ನಿಧಿಯನ್ನೂ ಕೂಡಿಸಿ ಅವರ ಗೆಲುವಿಗೆ ಶ್ರಮಿಸಿವೆ. ಕೆಲವು ಧರ್ಮಕೇಂದ್ರಗಳು ಯಾರೇ ಅಧಿಕಾರಕ್ಕೆ ಬಂದರೂ ತಮ್ಮ ಸಾರ್ವಭೌಮತೆಗೆ ಧಕ್ಕೆಯಾಗಬಾರದೆಂಬ ಉದ್ದೇಶದಿಂದ ಎಲ್ಲ ಪಕ್ಷಗಳ ಅಭ್ಯರ್ಥಿಗಳಿಗೂ ತಮ್ಮ ಕೈಲಾದಷ್ಟು ಹಣಕೊಟ್ಟು ಎಲ್ಲರನ್ನೂ ಚೆನ್ನಾಗಿಟ್ಟುಕೊಳ್ಳಲು ನೋಡುತ್ತವೆ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಅಲ್ಲಿ ತಮ್ಮ ಜಾತಿಯವನನ್ನು ಹುಡುಕಿ ಅವನನ್ನ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಸಂಗತಿ ಹೊಸದೇನೂ ಅಲ್ಲ. ವಿದ್ಯೆಯನ್ನು ತಳವರ್ಗಗಳ ಜನರಿಗೆ ತಲುಪುವಂತೆ ಮಾಡಿದ ಕೀರ್ತಿ ಕೆಲವು ಮಠಗಳಿಗೆ ಅನೇಕ ದಶಕಗಳ ಹಿಂದೆ ಸಂದಿರುವುದು ನಿಜವಾದರೂ, ಇವತ್ತು ವಿದ್ಯೆಯನ್ನು ಬಹುದೊಡ್ಡ ವ್ಯಾಪಾರವಾಗಿ ಮಾಡಿದ, ಅದನ್ನೊಂದು ಹೀನದಂಧೆಯಾಗಿ ಪರಿವರ್ತಿಸಿದ ಕೀರ್ತಿಯೂ ನಮ್ಮಲ್ಲಿ ಮಠಗಳಿಗೇ ಸಲ್ಲುತ್ತದೆ ಎಂಬುದು ವಾಸ್ತವ.

ಮೊನ್ನೆ ಯಡಿಯೂರಪ್ಪನವರ ಸರ್ಕಾರ ನೀಡಿದ ರಾಜ್ಯೋತ್ಸವ ಪ್ರಶಸ್ತಿಗಳಲ್ಲಿ ಎಷ್ಟು ಜನ ಮಠಾಧೀಶರ ಕೈವಾಡವಿದೆ ಎಂಬುದು ಗುಟ್ಟಿನ ಸಂಗತಿಯೇನಲ್ಲ. ಕೆಲವು ಪ್ರಶಸ್ತಿ 'ವಿಜೇತರು' ತಮಗೆ ಪ್ರಶಸ್ತಿ ದೊರಕಿಸಿಕೊಟ್ಟವರೇ ಸ್ವಾಮೀಜಿ ಎಂದು ಬಹಿರಂಗಪಡಿಸಿದ್ದಾರೆ. ಹೀಗೆ ಸಾರ್ವಜನಿಕವಾಗಿ ಹೇಳದಿದ್ದರೂ ಒಳ ಸಂಗತಿಗಳನ್ನು ಬಲ್ಲವರಿಗೆ ಮತ್ತು ಪ್ರತಿಯೊಂದು ಸರ್ಕಾರದ ಕಾರ್ಯವೈಖರಿಯನ್ನು ಗಮನಿಸಿದವರಿಗೆ ಪ್ರಶಸ್ತಿಗಳು ಮಾತ್ರವಲ್ಲ, ಸರ್ಕಾರದ ಅನೇಕ ಕಾರ್ಯಗಳಲ್ಲಿ ಮಠಗಳ ಮತ್ತು 'ಧರ್ಮಸಂಸ್ಥೆಗಳ' ಕೈವಾಡವಿರುವುದು ಸ್ಪಷ್ಟವಾಗುತ್ತದೆ. ಹುದ್ದೆಗಳ ನೇಮಕ, ಯೋಜನೆಗಳ ಅನುಷ್ಠಾನ ಇತ್ಯಾದಿ ಅನೇಕ ವಿಚಾರಗಳಲ್ಲೂ ಕೆಲವು ಮಠಾಧೀಶರು ಭಾಗವಹಿಸುತ್ತ, ಸರ್ಕಾರದ ಮೇಲೆ ತಮ್ಮ ನಿಯಂತ್ರಣ ಇರಿಸಿಕೊಂಡಿರುವುದು ಕೂಡಾ ಅನೇಕ ದಶಕಗಳಿಂದ ನಡೆದುಬಂದಿದೆ. ತಮ್ಮ ಜಾತಿಯವನು ಮುಖ್ಯಮಂತ್ರಿಯಾದ ಕೂಡಲೇ ಆ ಜಾತಿಯ ಮಠಾಧೀಶರಿಗೆ ರೆಕ್ಕೆಗಳು ಮೂಡಿಬಿಡುತ್ತವೆ. ಕುಲಪತಿಗಳ ಆಯ್ಕೆಯಲ್ಲಿಯೂ ಹಣ ಮತ್ತು ಜಾತಿ ಪ್ರಭಾವ, ಮಠಗಳ ಕ್ರಿಯಾಶೀಲತೆ ಇರುವುದೂ ಕೂಡಾ ಇವತ್ತು ಬಹಿರಂಗ ಚರ್ಚೆಯ ವಿಷಯವೇ ಆಗಿದೆ.

ಜಾತಿಯ ಕಬಂಧ ಬಾಹುಗಳು ಎಷ್ಟು ವಿಸ್ತಾರಕ್ಕೆ ಚಾಚುತ್ತಿವೆ. ದೊಡ್ಡ ದೊಡ್ಡ ಹುದ್ದೆಯಲ್ಲಿರುವ ಕೆಲವು ಕೆ.ಎ.ಎಸ್ ಮತ್ತು ಐ.ಎ.ಎಸ್ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಮಠಾಧೀಶರು ಗುಟ್ಟಾಗಿ ಸಭೆ ನಡೆಸುವುದು, ಎಳೆಯ ಮನಸ್ಸುಗಳನ್ನು ಜಾತಿಯ ಪಾಶಗಳಲ್ಲಿ ಬಿಗಿಯುವುದು ಇತ್ಯಾದಿ ವಿದ್ಯಮಾನಗಳು ಅತ್ಯಂತ ಅಪಾಯಕಾರಿ ಬೆಳವಣಿಗೆಗಳು. ವಿದ್ಯಾಸಂಸ್ಥೆಗಳಲ್ಲಿ ಜಾತೀಯತೆ, ಕಾಲೇಜುಗಳಲ್ಲಿ ಜಾತಿಗೇ ಮಾನ್ಯತೆ, ವಿಶ್ವವಿದ್ಯಾನಿಲಯದಲ್ಲಿ ಜಾತಿ ಹೆಸರಿನ ಯುವ ಸಂಘಟನೆಗಳು, ನೇಮಕಾತಿಯಲ್ಲಿ ಅರ್ಹತೆಗಿಂತ ಜಾತಿಗೇ ಹೆಚ್ಚಿನ ಮನ್ನಣೆ-ನಮ್ಮ ಪ್ರಜಾಪ್ರಭುತ್ವ ಯಾವ ದಿಕ್ಕಿನಲ್ಲಿ ಚಲಿಸುತ್ತಿದೆ?


ದಲಿತರಿಗೆ, ಹಿಂದುಳಿದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಸಂವಿಧಾನಾತ್ಮಕ ರಕ್ಷಣೆಯಿದೆ ಎಂಬುದೊಂದೇ ಸಮಾಧಾನ. ಪ್ರಬಲ ಜಾತಿಗಳ ಮೇಲಾಟದ ರಾಜಕೀಯದಲ್ಲಿ ದಲಿತರಾಗಲಿ, ಹಿಂದುಳಿದವರಾಗಲಿ ಅಥವಾ ಅಲ್ಪಸಂಖ್ಯಾತರಾಗಲಿ ಹೆಚ್ಚು ವಿಶ್ವಾಸದಿಂದ ಮತ್ತು ಆತ್ಮಸ್ಥೈರ್ಯದಿಂದ ರಾಜಕೀಯದಲ್ಲಿ ಭಾಗವಹಿಸುವುದು ಸಾಧ್ಯವೇ? ಹೀಗಾಗಿಯೇ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಮೇಲಿನ ಈ ಮೂರೂ ವರ್ಗದ ಜನ ದಾಳಗಳಾಗಿ ಬಳಕೆಯಾಗುತ್ತಿದ್ದಾರೆಯೇ ಹೊರತು ಅವರೇ ಪ್ರಮುಖ ಹುರಿಯಾಳುಗಳಾಗಿ ರಾಜಕೀಯವನ್ನು ಮುನ್ನಡೆಸಲು ಸಾಧ್ಯವಾಗುತ್ತಿಲ್ಲ. ಯಾವ ಮಠಗಳೂ ಇಂಥ ಪ್ರಮುಖ ಪ್ರಶ್ನೆಯನ್ನು ಎತ್ತಿ ಸಾರ್ವಜನಿಕ ಗಮನವನ್ನು ಸೆಳೆಯುತ್ತಿಲ್ಲ ಎಂಬುದು ಮಠಗಳ ಜಾತೀಯತೆಯ ಚೌಕಟ್ಟನ್ನು ತೋರಿಸುವ ಇನ್ನೊಂದು ಅಂಶವಾಗುತ್ತದೆ. ನಾವು ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತೇವೆ ಎನ್ನುವವರು, ಹರಿಜನ ಕಾಲೋನಿಗಳಲ್ಲಿ ಪಾದಯಾತ್ರೆ ಮಾಡುವವರು, ನಮ್ಮಲ್ಲಿ ಸಹಪಂಕ್ತಿ ಭೋಜನವಿದೆ ಎಂಬ ಸುಳ್ಳುಗಳನ್ನು ಬಿತ್ತುವ ಮಠಗಳು ಇಂಥ ಪ್ರಮುಖ ಪ್ರಶ್ನೆಗಳನ್ನು ಎಂದೂ ಎತ್ತಿಲ್ಲ; ಬೇರೆಯವರು ಎತ್ತುವುದೂ ಬೇಕಿಲ್ಲ. ಆಕಸ್ಮಿಕವಾಗಿ ವೇದಿಕೆಗಳಲ್ಲಿ ಹೇಳಿದರೂ ಅವರ ಅಂತರಂಗದ ಮಾತು ಅದಾಗಿರುವುದಿಲ್ಲ. ಆದರೂ ಕೂಡಲ ಸಂಗಮನ ಅಂತರಂಗಬಹಿರಂಗ ವಚನಗಳನ್ನು ಹೆಜ್ಜೆಹೆಜ್ಜೆಗೂ ಉದ್ಧರಿಸುವ ಮಠಾಧೀಶರಿಗೆ ನಮ್ಮಲ್ಲಿ ಬರವಿಲ್ಲ. ಇಂಥವರಿಗೆ ವಿದ್ವತ್ತು ಬೇರೆ, ಬದುಕು ಬೇರೆ. ವ್ಯವಹಾರ ಬೇರೆ; ಧರ್ಮ ಬೇರೆ. ಬೇರೇ ಇಲ್ಲದವರಿಗೆ ನೆಲವೇನು, ಕಾಂಕ್ರೀಟೇನು, ಆಕಾಶವೇನು, ಭೂಮಿಯೇನು?

ಈ ಕಾರಣಕ್ಕಾಗಿಯೋ ಏನೋ ಪ್ರತಿಯೊಂದು ಜಾತಿಯೂ ತಮಗೊಬ್ಬ ಸ್ವಾಮಿ ಬೇಕು, ಮಠ ಬೇಕು ಎಂದು ಹೇಳುತ್ತಿವೆ. ಪ್ರಬಲ ಜಾತಿಗಳ ಮಠಾಧೀಶರ ಪ್ರಭಾವವನ್ನು ಕಂಡ ಈ ಜಾತಿಗಳಿಗೆ ತಮಗೂ ಒಂದು ಮಠವಿದ್ದರೆ ತಾವು ರಾಜಕಾರಣಿಗಳ ಮೇಲೆ ನಿಯಂತ್ರಣ ಇಟ್ಟುಕೊಳ್ಳಬಹುದು ಎಂದು ಆಶಿಸಿರಬಹುದು. ಆದರೆ ಇಂಥ ಆಸರೆ ನಿಜಕ್ಕೂ ಒಂದು ಜನಸಮುದಾಯದ ಮುನ್ನಡೆಗೆ ಕಂಟಕವಾಗುತ್ತದೆ ಎಂಬುದನ್ನು ಮನಗಾಣಬೇಕು. ಇಲ್ಲವಾದರೆ ಜಾತ್ಯತೀತವಾದ ನಮ್ಮ ಪ್ರಜಾಪ್ರಭುತ್ವದಲ್ಲಿ ಮತ್ತೆ ನಾವು ಜಾತಿಗಳನ್ನು ಬಲಿಷ್ಠಗೊಳಿಸುತ್ತೇವೆ. ಜಾತಿ ವ್ಯವಸ್ಥೆ ಬಲಿಷ್ಠವಾಗಿದ್ದ ವ್ಯವಸ್ಥೆ, ಯಾರನ್ನು ತುಳಿಯಿತು ಮತ್ತು ಎಷ್ಟು ಅವಮಾನವೀಯವಾಗಿ ತುಳಿಯಿತು ಎಂಬುದನ್ನು ಭಾರತದ ಐದು ಸಾವಿರ ವರ್ಷಗಳ ಚರಿತ್ರೆಯೇ ತೋರಿಸುತ್ತದೆ.

ಬುದ್ಧನನ್ನು ಭಾರತದಿಂದ ಓಡಿಸಿದ ಮುಖ್ಯ ಕಾರಣಗಳಲ್ಲಿ ಒಂದು ಬುದ್ಧ ವರ್ಣ ವ್ಯವಸ್ಥೆಯನ್ನು ವಿರೋಧಿಸಿದ್ದು ಮತ್ತು ಮನುಷ್ಯರ ಸಮಾನತೆಯನ್ನು ಆಶಿಸಿದ್ದು. ಇದನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಸರಿಯಾಗಿಯೇ ಗುರುತಿಸಿದ್ದರು. ಇದನ್ನು ನಾವೀಗ ಅರ್ಥಮಾಡಿಕೊಂಡು ಮಠ ವ್ಯವಸ್ಥೆಯನ್ನು ವಿರೋಧಿಸಬೇಕು. ಇದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ಇರುವ ಮುಖ್ಯವಾದ ಮಾರ್ಗ.

ಜಾತಿಗೊಂದು ಮಠವಿರಬೇಕೆಂಬ ಮಾರ್ಗದಲ್ಲಿ ನಡೆದರೆ ಅದು ನಮ್ಮನ್ನು ಪುರಾತನವಾದ, ಶೋಷಿತ ವ್ಯವಸ್ಥೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ಅದೆಲ್ಲದರಿಂದ ಬಿಡಿಸಿಕೊಂಡು ಬಂದಿರುವ ನಾವು ಮತ್ತೆ ಅಲ್ಲಿಗೇ ಹೋಗುವುದು ಎಷ್ಟು ಸರಿ ಎಂಬುದನ್ನು ಚಿಂತಿಸಬೇಕಾಗಿದೆ. ವಿಶೇಷವಾಗಿ ದಲಿತರು ಮತ್ತು ಹಿಂದುಳಿದವರು ಈ ಮಠಗಳ ಅಪಾಯವನ್ನು ಅರಿಯಬೇಕಾಗಿದೆ.

ಪೇಜಾವರರ ಸ್ವಾಮಿಯ 'ಹಗರಣ'



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಕಳೆದ ಅಕ್ಟೋಬರ್ ತಿಂಗಳ 20 ರಂದು ಉಡುಪಿಯಲ್ಲಿರುವ ಕೃಷ್ಣ ದೇವಸ್ಥಾನವನ್ನು ಯಡಿಯೂರಪ್ಪನ ಹಿಂದೂತ್ವವಾದಿ ಸರ್ಕಾರ ಕದ್ದುಮುಚ್ಚಿ ಅಷ್ಟ ಮಠಗಳಿಗೆ ಒಪ್ಪಿಸಿದ್ದು ಈಗ ಎಲ್ಲರಿಗೂ ಗೊತ್ತಿದೆ. ಆದರೆ ಯಡಿಯೂರಪ್ಪನ ಸರ್ಕಾರದ ಈ ಕ್ರಿಯೆಯ ಹಿಂದೆ ಪೇಜಾವರ ಮಠಧೀಶ ಶ್ರೀ ವಿಶ್ವೇಶ ತೀರ್ಥರು ನಡೆಸಿರುವ ಪಿತೂರಿ ಮತ್ತು ಕುತಂತ್ರಗಳಲ್ಲಿ ಹಲವನ್ನು ಇತ್ತೀಚೆಗೆ ವಕೀಲ ಲಕ್ಕವಳ್ಳಿ ಮಂಜುನಾಥ್ ಮತ್ತು ಓಟ್‌ಲುಕ್ ಪತ್ರಿಕೆಯ ಸುಗತಾ ಶ್ರೀನಿವಾಸರಾಜು ಬಹಿರಂಗಪಡಿಸಿದ್ದಾರೆ.

ಈ ಕುತಂತ್ರಗಳ ವಿವರಣೆಗೆ ಹೋಗುವ ಮುನ್ನ ಒಂದೆರಡು ಸರಳ ವಿಚಾರಗಳನ್ನು ಸ್ಪಷ್ಟಪಡಿಸಬೇಕಿದೆ. ಮೊದಲನೆಯದಾಗಿ ಹದಿಮೂರನೆ ಶತಮಾನದಲ್ಲಿ ಮಧ್ವಚಾರ್ಯರು ಉಡುಪಿಯ ಹತ್ತಿರದ ಗ್ರಾಮಗಳಲ್ಲಿ ಸ್ಥಾಪಿಸಿದ್ದು ಕೇವಲ ಎಂಟು ಮಠಗಳನ್ನು. ಅವುಗಳೆಂದರೆ ಪಾಲಿಮಾರು, ಅದಮಾರು, ಕೃಷ್ಣಪುರ, ಪುತ್ತಿಗೆ, ಶಿರೂರು, ಸೋದೆ, ಕಣಿಯೂರು ಮತ್ತು ಪೇಜಾವರ ಮಠಗಳು. ಅಂದರೆ ಅದೇ ಉಡುಪಿಯಲ್ಲಿರುವ ಕೃಷ್ಣ ದೇವಸ್ಥಾನ ಒಂದು ದೇಗುಲ ಎಂದೂ, ಅದನ್ನು ಮಧ್ವಚಾರ್ಯರು ಮಠವಾಗಿ ಸ್ಥಾಪಿಸಲಿಲ್ಲವೆಂದೂ ಸ್ಪಷ್ಟವಾಗುತ್ತದೆ.


ಎರಡನೆಯದಾಗಿ, 1936 ರಲ್ಲಿ ಈ ದೇವಸ್ಥಾನವನ್ನು ಬ್ರಾಹ್ಮಣೇತರರು ಪ್ರವೇಶಿಸಬಾರದೆಂಬ ಉದ್ದೇಶದಿಂದ ಇದು ದೇವಸ್ಥಾನವಲ್ಲ ಬದಲಾಗಿ ಒಂದು ಮಠ ಎಂದು ಘೋಷಿಸಬೇಕೆಂದು ಆಗಿನ ಪರ್ಯಾಯ ಪೀಠಾಧೀಶರು ಬ್ರಿಟಿಷ್ ಅಧಿಪತ್ಯದ ಮದ್ರಾಸ್ ಪ್ರಾಂತ್ಯ ಸರ್ಕಾರದ ಹಿಂದೂ ಧಾರ್ಮಿಕ ದತ್ತಿಗಳ ಮಂಡಳಿಯನ್ನು ಕೋರಿದ್ದರು. ಆಗಿನ ಕಾಲದಲ್ಲಿ ಆ ಮಂಡಳಿಯಲ್ಲಿ ಮೇಲು ಜಾತಿಯವರೇ ಇದ್ದರು ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಸಹಜವಾಗಿಯೇ ಆ ಮಂಡಳಿಯ 1937 ರಲ್ಲಿ "ಇದು ದೇವಸ್ಥಾನವಲ್ಲ, ಬದಲಾಗಿ ಮಠ" ಎಂಬ ಆದೇಶವನ್ನು ನೀಡಿತ್ತು.

ಈ ಆದೇಶವನ್ನು ಪ್ರಶ್ನಿಸಿ ದೇವಸ್ಥಾನದ ಭಕ್ತರೊಬ್ಬರು ಮದ್ರಾಸ್ ಪ್ರಾಂತ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು. ಆಗಿನ ಸರ್ಕಾರದ ಧಾರ್ಮಿಕ ದತ್ತಿ ಮಂಡಳಿಯು 1948 ರಲ್ಲಿ "ಇದೊಂದು ದೇವಸ್ಥಾನ" ಎಂದು ತೀರ್ಪು ನೀಡಿತ್ತು. ಆನಂತರ ಮಂಗಳೂರಿನಲ್ಲಿದ್ದ ದಕ್ಷಿಣ ಕನ್ನಡ ಉಪ-ನ್ಯಾಯಾಲಯವೂ 1948 ರಲ್ಲಿ "ಉಡುಪಿ ಶ್ರೀಕೃಷ್ಣ ದೇವಸ್ಥಾನವು ಒಂದು ಮಠವಲ್ಲ, ಅದು ಒಂದು ದೇವಸ್ಥಾನ" ಎಂದು ಹೇಳಿತ್ತು.

ಇದನ್ನು ಪ್ರಶ್ನಿಸಿ ಅಷ್ಟಮಠಾಧೀಶರು ಮದ್ರಾಸ್ ಹೈಕೋರ್ಟಿನಲ್ಲಿ ದಾವೆ ಹೂಡಿದರು. ಆ ನ್ಯಾಯಾಲಯವೂ 1954 ರಲ್ಲಿ ಇದೊಂದು 'ದೇವಸ್ಥಾನ' ಎಂದೇ ಆದೇಶಿಸಿತ್ತು. ಕೊನೆಗೆ ಈ ವಿವಾದ ಸುಪ್ರೀಂಕೋರ್ಟ್ ಮೆಟ್ಟಿಲನ್ನೂ ಏರಿತು. ಸುಪ್ರೀಂಕೋರ್ಟಿನ ಏಳು ನ್ಯಾಯಾಧೀಶರಿದ್ದ ಪೀಠವು 1961ರಲ್ಲಿ 'ಸದರಿ ಕೃಷ್ಣ ದೇವಸ್ಥಾನವು ಅಷ್ಟ ಮಠಾಧೀಶರಿಗಾಗಿಯೇ ಖಾಸಗಿ ಪೂಜಾ ಕಾರ್ಯಕ್ಕೆ ನಿರ್ಮಿಸಿದ ದೇವಸ್ಥಾನವಲ್ಲ ಹಾಗೂ ಸದರಿ ಶ್ರೀಕೃಷ್ಣ ದೇವಸ್ಥಾನ ಒಂದು ಮಠವೂ ಅಲ್ಲ, ಮಠಕ್ಕೆ ಹೊಂದಿಕೊಂಡಿರುವ ದೇವಸ್ಥಾನವೂ ಅಲ್ಲ" ಎಂದೇ ತೀರ್ಪು ನೀಡಿತ್ತು.

ಅಂದರೆ 1937 ರಲ್ಲಿ ಹಿಂದೂ ಧಾರ್ಮಿಕ ದತ್ತಿಗಳ ಮಂಡಳಿಯ ಹೊರತಾಗಿ ಈ ದೇಶದ ಎಲ್ಲಾ ಹಂತದ ನ್ಯಾಯಾಲಯಗಳು ಉಡುಪಿಯ ಕೃಷ್ಣ ದೇವಸ್ಥಾನವು ಸಾರ್ವಜನಿಕರಿಗೆ ಸೇರಿದ್ದೇ ಹೊರತು ಅಷ್ಟಮಠಗಳಿಗೆ ಸೇರಿದ್ದ ಮಠವಲ್ಲ ಎಂದೇ ಪದೇಪದೇ ಆದೇಶಿಸುತ್ತಾ ಬಂದಿದೆ.

ಆದರೆ ಹಿಂದೂತ್ವವಾದಿಗಳಿಗೂ, ಅವರ ಬೆನ್ನೆಲುಬಾಗಿ ನಿಂತಿರುವ ಹಲವು ಮಠಾಧೀಶರಿಗೂ ನಮ್ಮ ನ್ಯಾಯಾಲಯಗಳ ಬಗ್ಗೆ ಕಿಂಚಿತ್ತೂ ಗೌರವ, ವಿಶ್ವಾಸವಿಲ್ಲ. ಆದ್ದರಿಂದ ಅವರು ನ್ಯಾಯಾಲಯದ ಆದೇಶಗಳನ್ನು ತಮ್ಮ ಹಿತಾಸಕ್ತಿಗಾಗಿ ತಿರುಚುತ್ತಾ ಬಂದಿದ್ದಾರೆ. ಅಂತಹ ಪಿತೂರಿ ಇವತ್ತಿನ ತನಕ ಕೃಷ್ಣ ದೇವಸ್ಥಾನದ ಸುತ್ತ ನಡೆದುಕೊಂಡು ಬಂದಿದ್ದರ ಪರಿಣಾಮವಾಗಿ ಮೊನ್ನೆ ಇದೇ ಕೃಷ್ಣ ದೇವಸ್ಥಾನವನ್ನು ಯಡಿಯೂರಪ್ಪನ ಸರ್ಕಾರ ಅಷ್ಟ ಮಠಗಳ ಮುಡಿಗೆ ಅರ್ಪಿಸಿದೆ.



ಅಪಾರ ಭಕ್ತ ಸಮೂಹವನ್ನು ಹೊಂದಿರುವ, ಬ್ರಾಹ್ಮಣೇತರರ ಭಕ್ತಿ ಕೇಂದ್ರವಾಗಿರುವ, ವರ್ಷಕ್ಕೆ ಕನಿಷ್ಠ ಮೂರು ಕೋಟಿ ರೂಪಾಯಿಗಳ ಆದಾಯವನ್ನು ಕಾಣುವ ಕೃಷ್ಣ ದೇವಸ್ಥಾನವನ್ನು ಅಷ್ಟ ಮಠಗಳಿಗೆ ನೀಡಿದ್ದರ ಹಿಂದೆ ಪೇಜಾವರ ಮಠದ ಯತಿ ವಿಶ್ವೇಶತೀರ್ಥರ 'ಅಪಾರ' ಶ್ರಮ ಮತ್ತು ತಂತ್ರಗಳೂ ಅಡಗಿವೆ. ಅದಕ್ಕೆ ಉದಾಹರಣೆಯಾಗಿ ಪೇಜಾವರರು 2008 ರ ಆಗಸ್ಟ್ 20 ರಂದು ಯಡ್ಡಿಯೂರಪ್ಪನಿಗೆ ಬರೆದ ಪತ್ರವನ್ನೇ ನೋಡಿ:

"ನಮ್ಮ ಪರಮ ಪ್ರಿಯರೂ, ನಮ್ಮ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳೂ ಆದ ಶ್ರೀ ಯಡಿಯೂರಪ್ಪನವರಿಗೆ ಮಾಡುವ ಸಪ್ರೇಮ ನಾರಾಯಣ ಸ್ಮರಣೆಗಳು.

ಶ್ರೀ ಗೋಕರ್ಣ ಕ್ಷೇತ್ರದ ಮಹಾಬಲೇಶ್ವರ ದೇವಸ್ಥಾನದ ಆಡಳಿತವನ್ನು ಶ್ರೀರಾಮಚಂದ್ರಪುರ ಮಠಕ್ಕೆ ನೀಡಿದ್ದನ್ನು ನಾವು ಸ್ವಾಗತಿಸುತ್ತೇವೆ. ನಮಗೆ ಅದರಿಂದ ಸಂತೋಷವಾಗಿದೆ.

ಆದರೆ ನಾವು ಹಲವಾರು ಬಾರಿ ಒತ್ತಾಯಿಸಿ ಹೇಳಿದರೂ ಉಡುಪಿ ಶ್ರೀಕೃಷ್ಣ ಮಠವನ್ನು D.Notify ಮಾಡದ ಬಗ್ಗೆ ನಮಗೆಲ್ಲ ತುಂಬಾ ಆಶ್ಚರ್ಯವೂ ಬೇಸರವೂ ಆಗಿದೆ. ಗೋಕರ್ಣ ದೇವಸ್ಥಾನವು ಮುಜರಾಯಿ ಇಲಾಖೆಯ ಸ್ವಾಧೀನದಲ್ಲಿಯೇ ಇತ್ತು. ಆದರೆ ಶ್ರೀಕೃಷ್ಣ ಮಠವು ಅಷ್ಟಮಠಗಳ ಅಧೀನದಲ್ಲಿಯೇ ಮೊದಲಿನಿಂದಲೂ ಇದೆ. ಇಲ್ಲಿ ಯಾವ ವಿವಾದಕ್ಕೂ ಎಡೆಯಿಲ್ಲ. ಯಾರೋ ಒಬ್ಬ ಕೆಳಮಟ್ಟದ ಅಧಿಕಾರಿಯ ತಪ್ಪಿನಿಂದ ಇತ್ತೀಚೆಗೆ Notify ಸಂಸ್ಥೆಗಳಲ್ಲಿ ಇದನ್ನು ಸೇರಿಸಿದೆ. ಇದನ್ನು ಸರಿಪಡಿಸಲು ಯಾವ ಕಾನೂನಿನ ತೊಡಕೂ ಇಲ್ಲ. ಗೋಕರ್ಣದ ದೇವಸ್ಥಾನಕ್ಕಿಂತಲೂ ಇದು ಸುಲಭದಲ್ಲಿ ಯಾವ ಸದ್ದುಗದ್ದಲವಿಲ್ಲದೆ ಆಗುವ ಕೆಲಸ. ಆದರೂ ನೀವು ಈ ಬಗ್ಗೆ ತೀವ್ರ ಕ್ರಮ ಕೈಗೊಳ್ಳದಿದ್ದ ಬಗ್ಗೆ ನಮಗೆ ಬೇಸರವಾಗಿದೆ. ನೀವು ನಮ್ಮ ಅಭಿಮಾನ ಪಾತ್ರರಾಗಿದ್ದು ಮೊದಲಿನಿಂದಲೂ ನಿಮಗೆ ನಾವು ಬೆಂಬಲ ನೀಡಿದ್ದೇವೆ. ಆದರೂ ನಮ್ಮ ಈ ಚಿಕ್ಕ ಹಾಗೂ ಸುಲಭದ ಮತ್ತು ಕಾನೂನಿನ ತೊಡಕಿಲ್ಲದ ಕೆಲಸವನ್ನು ನೀವು ಯಾಕೆ ಮಾಡುತ್ತಿಲ್ಲವೆಂದು ನಮಗೆ ಆಶ್ಚರ್ಯವಾಗಿದೆ. ನಮ್ಮ ವಿಶೇಷ ಅಭಿಮಾನಿಗಳಾದ ನೀವು ಕೂಡಲೇ ಶ್ರೀಕೃಷ್ಣಮಠವನ್ನು D.Notify ಮಾಡಿಸಿ ನಮ್ಮನ್ನೆಲ್ಲ ಸಂತೋಷಗೊಳಿಸುವಿರಾಗಿ ನಂಬಿದ್ದೇವೆ. ಈ ತಿಂಗಳ 23 ಮತ್ತು 24 ರಂದು ಜರುಗಲಿರುವ ಶ್ರೀಕೃಷ್ಣ ಜನ್ಮಾಷ್ಟಮೀ ಉತ್ಸವದ ಒಳಗೆ ಈ ಕೆಲಸವನ್ನು ಅವಶ್ಯ ಮಾಡುವಿರಾಗಿ ನಂಬಿದ್ದೇವೆ.

ಇತಿ ನಾರಾಯಣಸ್ಮರಣೆಗಳೊಂದಿಗೆ

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು

ಶ್ರೀ ಪೇಜಾವರ ಅಧೋಕ್ಷಜ ಮಠ

ಉಡುಪಿ

ಪೇಜಾವರರ ಪತ್ರದ ಮೇಲೆ ಯಡಿಯೂರಪ್ಪ 'ಸ.ಕಾ. ಕಂದಾಯ ಇಲಾಖೆ (ಮುಜರಾಯಿ), ಕೂಡಲೇ ಮುಂದಿನ ಕ್ರಮಕ್ಕಾಗಿ ಕಡತ ಮಂಡಿಸಿ, ಬಿಎಸ್' ಎಂದು ಬರೆದು ಕಳುಹಿಸಿದ್ದಾರೆ. ಅಂದೇ ಆಗ ಗೃಹ ಸಚಿವರೂ ಆಗಿದ್ದ ಮತ್ತೊರ್ವ ಚಡ್ಡಿ ನಾಯಕ ವಿ.ಎಸ್. ಆಚಾರ್ಯ ಯಡಿಯೂರಪ್ಪನಿಗೆ ಪತ್ರ ಬರೆದು ಕೃಷ್ಣ ದೇವಸ್ಥಾನವನ್ನು ಅಷ್ಟ ಮಠಗಳಿಗೆ ಆದಷ್ಟು ಬೇಗ ನೀಡಬೇಕೆಂದು ಒತ್ತಾಯಿಸುತ್ತಾರೆ ಆ ಪತ್ರ ಹೀಗಿದೆ:

"ಸನ್ಮಾನ್ಯ ಮುಖ್ಯಮಂತ್ರಿಗಳೇ,

ಶ್ರೀ ಶ್ರೀ ಪೇಜಾವರ ಮಠಾಧೀಶರು ತಮಗೆ ಕಳಿಸಿರುವ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ. ಉಡುಪಿಯ ಶ್ರೀ ಕೃಷ್ಣ ಮಠವನ್ನು ಕರ್ನಾಟಕ ಹಿಂದೂ ಧಾರ್ಮಿಕ ದತ್ತಿ ಕಾಯ್ದೆ 1997ರ ಅಡಿಯಲ್ಲಿ ತಪ್ಪು ಕಲ್ಪನೆಯಿಂದ ಘೋಷಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದು ಸಂಬಂಧಿಸಿದ ಅಧಿಕಾರಿಗಳ ಅಜ್ಞಾನದಿಂದ ಆಗಿರುವ ಕೆಲಸವೆಂದು ಹೇಳಲು ವಿಷಾದಿಸುತ್ತೇನೆ.

ಈ ಘೋಷಿತ ಪಟ್ಟಿಯಿಂದ (Notifed list) ಶ್ರೀ ಕೃಷ್ಣ ಮಠವನ್ನು ಕೈ ಬಿಡಬೇಕೆಂದು ಶ್ರೀ ಶ್ರೀ ಪೇಜಾವರ ಸ್ವಾಮಿಗಳು ಅನೇಕ ಬಾರಿ ಮನವಿ ಮಾಡಿದಾಗ್ಯೂ ಇನ್ನೂ ಸಹ ಅದನ್ನು "ಡಿ ನೋಟಿಫೈ" ಮಾಡಿರುವುದಿಲ್ಲ. ಆಗಿರುವ ತಪ್ಪನ್ನು ಸರಿಪಡಿಸಲು ಕೂಡಲೇ ಮುಜರಾಯಿ ಇಲಾಖೆಯಿಂದ ಕ್ರಮ ಕೈಗೊಳ್ಳಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಉಡುಪಿಯ ಶ್ರೀ ಕೃಷ್ಣ ಮಠವನ್ನು ಘೋಷಿತ ಸಂಸ್ಥೆಗಳ ಪಟ್ಟಿಯಿಂದ ಕೂಡಲೇ ಕೈ ಬಿಡಲು (ಡಿ ನೋಟಿಫೈ ಮಾಡಲು) ಆದೇಶಿಸಬೇಕಾಗಿ ವಿನಂತಿಸುತ್ತೇನೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ

(ಡಾ. ವಿ.ಎಸ್. ಆಚಾರ್ಯ)

ಆದರೆ ಇದು ಅಷ್ಟು ಸುಲಭವಾಗಿ ಮಾಡಿ ಮುಗಿಸುವಂತಹ ಕೆಲಸವಾಗಿರಲಿಲ್ಲ. ಏಕೆಂದರೆ ಪೇಜಾವರರಿಗೆ ಯಡಿಯೂರಪ್ಪ ಪರಮ ಪ್ರಿಯರಾಗಿದ್ದರೂ ಅವರು ಈ ದೇವಸ್ಥಾನವನ್ನು ತಮ್ಮ ಸ್ವಂತ ಆಸ್ತಿಯಂತೆ ನಿಂತ ಹೆಜ್ಜೆಯಲ್ಲೇ ಹಸ್ತಾಂತರಿಸುವಂತಿರಲಿಲ್ಲ. ಅದಕ್ಕೆ ಅವರು ದೊಡ್ಡ 'ಕಡತ'ವನ್ನೇ ಸಿದ್ಧಗೊಳಿಸಬೇಕಿತ್ತು. ಅದು ಕಳೆದ ಎರಡು ವರ್ಷಗಳಿಂದ ನಡೆಯುತ್ತಲೇ ಬಂದಿತ್ತು. ಆದರೆ ತಮ್ಮ 'ವಿನಂತಿ'ಯನ್ನು ಈಡೇರಿಸುವಲ್ಲಿ ಸರ್ಕಾರ ತುಂಬ ತಡ ಮಾಡುತ್ತಿದೆ ಎಂದು ಭಾವಿಸಿದ ಪೇಜಾವರರು ಮುಖ್ಯಮಂತ್ರಿ ಮತ್ತು ಸರ್ಕಾರದಲ್ಲಿರುವ ಇತರರಿಗೆ ಪತ್ರ ಬರೆದು ಅವರ ಮೇಲೆ ಒತ್ತಡ ತರುತ್ತಲೇ ಇದ್ದರು.

ಅಂತಹದ್ದೊಂದು ಪತ್ರವನ್ನು ಪೇಜಾವರರು ಇದೇ 2010 ರ ಆಗಸ್ಟ್ 20 ರಂದು ವಿ.ಎಸ್. ಆಚಾರ್ಯರಿಗೆ ಬರೆದರು. ಆ ಪತ್ರದಲ್ಲಿ ಕೃಷ್ಣ ಮಠಕ್ಕೆ ಸಂಬಂಧಿಸಿದ ಭಾಗ ಇಂತಿದೆ.

ನಮ್ಮ ಪರಮಪ್ರಿಯರೂ ನಮ್ಮ ರಾಜ್ಯದ ಗೃಹಮಂತ್ರಿಗಳೂ ಆದ ಶ್ರೀ ಡಾ. ವಿ.ಎಸ್. ಆಚಾರ್ಯ ಇವರಿಗೆ ಮಾಡುವ ಸಪ್ರೇಮ ನಾರಾಯಣಸ್ಮರಣೆಗಳು.

ಕೃಷ್ಣ ಮಠವನ್ನು ಡಿ-ನೋಟಿಫೈ ಮಾಡುವ ವಿಚಾರ ಯಡಿಯೂರಪ್ಪನವರಿಗೆ ಈ ವಿಷಯ ಏನೂ ಗೊತ್ತಿಲ್ಲ. ಅವರು ಈ ವಿಷಯದಲ್ಲಿ ಕೃಷ್ಣಮಠಕ್ಕೆ ಅನುಕೂಲ ಮಾಡಲು ಸಿದ್ಧರಿದ್ದಾರೆ. ಸುರೇಶ್ ಕುಮಾರರಿಗೂ ಏನೂ ಗೊತ್ತಿಲ್ಲ. ಅವರೂ ನಮಗೆ ಅನುಕೂಲವಾಗಿದ್ದಾರೆ. ಇದು ಈಗ ಪೂರ್ತಿ ನಿಮ್ಮ ಕೈಯಲ್ಲಿ ಇದೆ. ಮುಜರಾಯಿ ಮಂತ್ರಿಗಳಾಗಿ ನೀವು ಕೃಷ್ಣಮಠವನ್ನು ಡಿ-ನೋಟಿಫೈ ಮಾಡಿದರೆ ಅಷ್ಟಮಠಗಳೂ ಉಡುಪಿಯ ಜನರೂ ನಿಮ್ಮನ್ನು ನಿರಂತರವಾಗಿ ಸ್ಮರಿಸುವಂತೆ ಆಗುತ್ತದೆ. ಈಗ ಪೂರ್ತಿ ಅನುಕೂಲವಾದ ಸಮಯವಾಗಿದೆ. ಮುಖ್ಯಮಂತ್ರಿಗಳ ಬೆಂಬಲ ಇದೆ. ಯಾರ ವಿರೋಧವೂ ಇಲ್ಲ. ಆದುದರಿಂದ ಚಿರಸ್ಮರಣೀಯವಾದ ಈ ಕಾರ್ಯವನ್ನು ಕೂಡಲೇ ಮಾಡಿ ಎಲ್ಲಾ ಅಷ್ಟಮಠಾಧೀಶರನ್ನೂ ಸಂತೋಷಪಡಿಸಿ ಶ್ರೀಕೃಷ್ಣನ ಅನುಗ್ರಹಕ್ಕೂ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ಇತಿ ಸಪ್ರೇಮ ನಾರಾಯಣಸ್ಮರಣೆಗಳು


ಈ ಪತ್ರವನ್ನು ಆಚಾರ್ಯರು ಯಡಿಯೂರಪ್ಪನಿಗೆ ಕಳುಹಿಸಿದಾಗ ಯಡ್ಡಿ ಇದರ ಮೇಲೆ 'ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವುದು, ಬಿಎಸ್' ಎಂದು ಬರೆದು ಪೇಜಾವರರ ಇಚ್ಛೆಯನ್ನು ಕಡೆಗೂ ಕಳೆದ ಅಕ್ಟೋಬರ್ ತಿಂಗಳಲ್ಲಿ ಈಡೇರಿಸಿದರು.


ಕಾನೂನು ಇಲಾಖೆಯ ಅಭಿಪ್ರಾಯಗಳ ವಿರುದ್ಧ ಈ ವಿವಾದಕ್ಕೆ ಸಂಬಂಧಿಸಿದಂತೆ ಈಗಲೂ ನ್ಯಾಯಾಲಯದಲ್ಲಿ ದಾವೆಗಳ ವಿಚಾರಣೆ ನಡೆಯುತ್ತಿದ್ದರೂ, ಈ ದೇಶದ ಸರ್ವೋಚ್ಚ ನ್ಯಾಯಾಲಯ ನೀಡಿದ್ದ ತೀರ್ಪನ್ನೂ ಧಿಕ್ಕರಿಸಿ ಸಾರ್ವಜನಿಕರ ಸ್ವತ್ತಾದ, ಹಲವಾರು ಜಾತಿ ಮತ್ತು ವರ್ಗಗಳ ಭಕ್ತಿ ಕೇಂದ್ರವಾದ ಕೃಷ್ಣ ದೇವಸ್ಥಾನವನ್ನು ಮಾಧ್ವ ಜಾತಿಗೆ ಸೀಮಿತವಾಗಿರುವ ಅಷ್ಟ ಮಠಗಳಿಗೆ ಯಡಿಯೂರಪ್ಪನ ಸರ್ಕಾರ ಧಾರೆ ಎರೆದಿದೆ.


ಇಂತಹ ಉಪಕರಾವನ್ನು ಮಾಡಿದ ಯಡಿಯೂರಪ್ಪನ ವಿರುದ್ಧ ದಾಖಲೆ ಸಮೇತ ಭ್ರಷ್ಟಾಚಾರದ ಆರೋಪಗಳು ಭುಗಿಲೆದ್ದಾಗ ಪೇಜಾವರ ಸ್ವಾಮಿಗಳು ಆತನ ಪರ ದನಿ ಎತ್ತದೆ ಅದು ಹೇಗೆ ಸುಮ್ಮನಿರುತ್ತಾರೆ ಹೇಳಿ?!

ಕಾನೂನುಬಾಹಿರವಾಗಿ ರೈತರ ಮತ್ತು ಸರ್ಕಾರದ ಭೂಮಿಯನ್ನು ತನ್ನವರಿಗೆ ಹಸ್ತಾಂತರಿಸಿ ಸಿಕ್ಕಿಬಿದ್ದು ಎಲ್ಲರಿಂದ ಉಗಿಸಿಕೊಳ್ಳುತ್ತಿರುವ ಯಡಿಯೂರಪ್ಪ ಮತ್ತಾತನ ಸರ್ಕಾರ ಈಗ ಸುಪ್ರೀಂಕೋರ್ಟಿನ ತೀರ್ಪನ್ನು ತಿರಸ್ಕರಿಸಿ ಸಾರ್ವಜನಿಕ ದೇವಸ್ಥಾನವನ್ನು ಅಷ್ಟಮಠಗಳಿಗೆ ಅಕ್ರಮವಾಗಿ ನೀಡಿದೆ.

ಈ ಮೂಲಕ ಸ್ವಾಮಿ ಕಾರ್ಯವೇ ಸ್ವಕಾರ್ಯ ಎಂಬ ಮಾತಿಗೆ ಯಡಿಯೂರಪ್ಪ ಮತ್ತು ಪೇಜಾವರ ಸ್ವಾಮಿಗಳು ಹೊಸ ಸಂಕೇತಗಳಾಗಿದ್ದಾರೆ. ●








ಪೇಜಾವರರು ಬರೆದ ಎರಡು ಪತ್ರಗಳ ಪ್ರತಿಗಳು....

ತಲೆತಿರುಕ ಮುಖ್ಯಮಂತ್ರಿಯ ಶತ್ರು ಸಂಹಾರ ಹೋಮ ನರಬಲಿ ಯತ್ನ!



ಈ ಶತ್ರು ಸಂಹಾರ ಹೋಮ ನೇರವಾಗಿ ದೇವೇಗೌಡ ಮತ್ತವರ ಕುಟುಂಬದವರನ್ನೇ ಗುರಿಯಾಗಿಸಿಕೊಂಡು ನಡೆಸಿರುವ ಒಂದು ವಾಮಾಚಾರವಾಗಿತ್ತು, ಮಾಟ ಮಂತ್ರ ಮಾಡಿಸಿ ಅದರಿಂದ ದೊರಕಿತೆನ್ನಲಾದ 'ಶಕ್ತಿ'ಯನ್ನು ಬಳಸಿ ದೇವೇಗೌಡ ಫ್ಯಾಮಿಲಿಯನ್ನು ಮಟ್ಟಹಾಕಲು ಯತ್ನಿಸಿದ್ದಾರೆ ಯಡ್ಡಿ.



ಮುಖ್ಯಮಂತ್ರಿ ಯಡಿಯೂರಪ್ಪನ ತಲೆ ಪೂರಾ ಕೆಟ್ಟುಹೋದಂತಿದೆ.

ಕಳ್ಳತನ, ಹಗಲುದರೋಡೆಯಲ್ಲಿ ಬ್ಯುಸಿಯಾಗಿ ಹೋಗಿರುವ ಯಡ್ಡಿಗೆ ಈಗ ಶತ್ರು ಸಂಹಾರ ಮಾಡಿ ತನ್ನ ಕುರ್ಚಿ ಉಳಿಸಿಕೊಳ್ಳಬೇಕೆಂಬ ಕಿರಾತಕ ಯೋಚನೆ ಬಂದುಬಿಟ್ಟಿದೆ.

ಅದಕ್ಕಾಗಿ ಮೊನ್ನೆ ಡಿಸೆಂಬರ್ 4ರಂದು ತಮಿಳುನಾಡಿನ ತಿರುಚೆಂಡೂರಿನ ಮುರುಗನ್ ದೇವಸ್ಥಾನದಲ್ಲಿ ಶತ್ರು ಸಂಹಾರ ಹೋಮವೊಂದನ್ನು ಯಡ್ಡಿ ಮಾಡಿಸಿದ್ದಾರೆ.

ಶುದ್ಧ ವಾಮಾಚಾರ ಇದು.

ಇದಕ್ಕೂ ಮೊದಲು ಅಂದರೆ ಕಳೆದ ಜುಲೈ ತಿಂಗಳಿನಲ್ಲಿ ಶಿವಮೊಗ್ಗದ ಯಡ್ಡಿ ಫ್ಯಾಮಿಲಿಗೆ ಸೇರಿರುವ ಪಿಇಎಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಬರಿದಾಗಿದ್ದ ಹೋಮ ಕುಂಡವೊಂದು ಕಂಡುಬಂದಿತ್ತು, ಯಡ್ಡಿಯ ಅಧಿಕಾರ ರಕ್ಷಣೆಗಾಗಿ ನರಬಲಿ ಕೊಡುವ ದುಷ್ಟ ಪ್ರಯತ್ನವೊಂದು ಅವತ್ತು ಅಲ್ಲಿ ನಡೆದಿತ್ತೆನ್ನುವ ರೂಮರುಗಳಿವೆ. ತಮಿಳು ಅಥವಾ ಲಂಬಾಣಿ ಕುಟುಂಬದ .ಬಡ ಮಹಿಳೆಯೊಬ್ಬಳನ್ನು ಬಲಿಪಶುವಾಗಿ ಬಳಸಲು ಯತ್ನಿಸಿ ಸ್ವಲ್ಪದರಲ್ಲಿ ಆಕೆ ಪಾರಾದ ಬಗ್ಗೆಯೂ ಸುದ್ದಿಗಳಿವೆ. (ವಿವರಗಳಿಗೆ ಬಾಕ್ಸ್ ನೋಡಿ).

ಮಾಟ-ಕೌಂಟರ್ ಮಾಟ

ಯಡ್ಡಿಯ ಶತ್ರು ಸಂಹಾರ ಹೋಮ ತಿರುಚೆಂಡೂ ರಿನಲ್ಲಿ ಕಳೆದ ನವೆಂಬರ್ 20ರಂದೇ ಶುರುವಾಗಿತ್ತು, ಹದಿನೈದು ದಿನಗಳ ಕಾಲ ನಡೆಯುವ ಅಖಂಡ ವಾಮಾಚಾರವದು. ಈ ಸಂಹಾರಹೋಮ ನಡೆಯುತ್ತಿರುವಾಗ ಪುರೋಹಿತ ಯಾನೆ ಮಾಟಗಾರ ಬೆಳಗಿ ನಿಂದ ಸಂಜೆಯವರೆಗೂ ಏನನ್ನೂ ತಿನ್ನುವುದಿಲ್ಲ, ಹನಿ ನೀರನ್ನೂ ಕುಡಿಯುವಂತಿಲ್ಲ, ಹೀಗೆ ಈ ವಾಮಾಚಾರ ಸಾಗುತ್ತಾ ಕೊನೆಯ ಹಂತಕ್ಕೆ ಬಂದಾಗಲೇ ಯಡ್ಡಿಯು ದೇವೇಗೌಡರ ಆಸ್ತಿ ತನಿಖೆಗೆ ಹುಕುಂ ನೀಡಿದ್ದು!

ಗೌಡರ ಕುಟುಂಬದವರು ಅಕ್ರಮ ಜಮೀನು ಹೊಂದಿದ್ದಾರೆ, ಸೈಟು ಹಂಚಿದ್ದಾರೆ ಎಂಬಿತ್ಯಾದಿ ಆರೋಪಗಳನ್ನು ಹೇಳುತ್ತಾ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ನೀಡಿದರು ಯಡ್ಡಿ.

ಅಂದರೆ,

ಈ ಶತ್ರು ಸಂಹಾರ ಹೋಮ ನೇರವಾಗಿ ದೇವೇಗೌಡ ಮತ್ತವರ ಕುಟುಂಬದವರನ್ನೇ ಗುರಿಯಾಗಿಸಿಕೊಂಡು ನಡೆಸಿರುವ ಒಂದು ವಾಮಾಚಾರವಾಗಿತ್ತು, ಒಂದು ಕಡೆ ಮಾಟ ಮಂತ್ರ ಮಾಡಿಸಿ ಅದರಿಂದ ದೊರಕಿತೆನ್ನಲಾದ 'ಶಕ್ತಿ'ಯನ್ನು ಬಳಸಿ ದೇವೇಗೌಡ ಫ್ಯಾಮಿಲಿಯನ್ನು ಮಟ್ಟಹಾಕಲು ಯತ್ನಿಸಿದ್ದಾರೆ ಯಡ್ಡಿ.

ಈ ಘನಕಾರ್ಯಕ್ಕೆ ಯಡ್ಡಿ ತಿರುಚೆಂಡೂರಿನ ಮುರುಗನ್ ದೇವಸ್ಥಾನವನ್ನೇ ಯಾಕೆ ಆರಿಸಿಕೊಂಡರೆಂಬುದಕ್ಕೆ ವಿವರಣೆಯಿದೆ.

2007ರ ಮಾರ್ಚ್ 10ರಿಂದ 26ರಂದು ಇದೇ ದೇವಳದಲ್ಲಿ ಮಾನ್ಯ ದೇವೇಗೌಡರು ತಾವೂ ಒಂದು ಶತ್ರು ಸಂಹಾರ ಹೋಮ ಮಾಡಿಸಿದ್ದರು. ಅದರಿಂದಾಗಿಯೇ ತಾನು ಅನೇಕ ಕಷ್ಟಗಳಿಗೆ ಸಿಲುಕಿ ಸಿಎಂ ಕುರ್ಚಿ ಗೇರುವ ಅವಕಾಶದಿಂದ ವಂಚಿತನಾದೆ ನೆಂಬ ಕುರುಡು ನಂಬಿಕೆ ಯಡ್ಡಿಗಿತ್ತು.

ಹಾಗಾಗಿ ದೇವೇಗೌಡರು ಎಲ್ಲಿ ತನ್ನ ವಿರುದ್ಧ ಹೋಮ ಮಾಡಿಸಿದ್ದರೋ ಅದೇ ಸ್ಥಳ ದಲ್ಲೇ ಗೌಡರ ವಿರುದ್ಧ ಹೋಮ ಮಾಡಿಸಲು ಯಡ್ಡಿ ತೀರ್ಮಾನಿಸಿಕೊಂಡರು. ಗೌಡರ ಮಾಟಕ್ಕೆ ಯಡ್ಡಿಯ ಕೌಂಟರ್ ಮಾಟದ ಕತೆಯ ಹಿನ್ನೆಲೆಯಿದು.



ಮುರುಗನ್ ದೇವತೆಗೆ ಸುಪಾರಿ

ಚೆನ್ನೈನಿಂದ 560 ಕಿಲೋಮೀಟರ್ ದೂರದಲ್ಲಿರುವ ತಿರುಚೆಂಡೂರ್ ತನ್ನ ದೈವಶಕ್ತಿಗೆ ಪ್ರಖ್ಯಾತಿ ಹಾಗೂ ಕುಖ್ಯಾತಿ ಎರಡನ್ನೂ ಹೊಂದಿದೆ. ಇದೇ ಥರದ ಮುರುಗನ್ ಅಲಿಯಾಸ್ ಸುಬ್ರಮಣ್ಯ ದೇವಳಗಳು ಪಳನಿ, ತಿರುಪ್ಪರಂಗನಂ, ಪಳಯುದಕ್, ಜೋಳೈ, ತಿರುತ್ತಣಿ ಹಾಗೂ ಸ್ವಾಮಿಮಲೈಗಳಲ್ಲೂ ಇದೆ. ಆದರೆ ತಿರುಚೆಂಡೂರ್‌ನ ಮುರುಗನ್ .ದೇವರೇ ಜಾಸ್ತಿ ಫೇಮಸ್. ಇರುವ ಆರು ಕೇಂದ್ರಗಳಲ್ಲಿ ಶತ್ರು ಸಂಹಾರದ ಸುಪಾರಿ ತೆರೆದುಕೊಳ್ಳುವುದು ತಿರುಚೆಂಡೂರ್‌ನ ಮುರುಗನ್ ಒಬ್ಬನೆ. ಅಲ್ಲಿ ಶತ್ರು ಸಂಹಾರ ಸ್ವಾಮಿಯ ಮೂರ್ತಿಯೂ ಇದೆ. ಸುಬ್ರಮಣ್ಯ ಸ್ವಾಮಿ ಎಂದು ಕರೆದುಕೊಳ್ಳುವ ಮುಖ್ಯ ಅರ್ಚಕನಿದ್ದಾನೆ. ಈತನ ಗ್ಯಾಂಗ್‌ನಲ್ಲಿ ಡಜನ್‌ಗಟ್ಟಲೆ ಪುರೋಹಿತರಿದ್ದಾರೆ. ಸಾಮಾನ್ಯವಾಗಿ ಸಾತ್ವಿಕ ಅರ್ಚಕನೊಬ್ಬ ಶತ್ರು ಸಂಹಾ[ರ] ಹೋಮವನ್ನಾಗಲಿ ಅಥವಾ ವಾಮಾಚಾರ ವನ್ನಾಗ[ಲಿ] ಮಾಡಲು ಒಪ್ಪುವುದಿಲ್ಲ, ಆದರೆ ತಿರುಚೆಂಡೂರ್‌ನಲ್ಲಿ ಎರ[ಡು] ಕ್ಯಾಟಗರಿಯ ದೇವರ ದಲ್ಲಾಳಿಗಳಿದ್ದಾರೆ. ಹೋಮಹವನ[ಗಳ] ಡೀಲು ಕುದುರಿಸುವ ಬ್ರೋಕರುಗಳಿಗೂ ಕಡಿಮೆ ಯಿ[ಲ್ಲ].

ನೀವು ನಂಬುತ್ತೀರೋ ಇಲ್ಲವೊ. ಒಂದು ಶತ್ರು ಸಂಹಾರ ಯಾಗ[ಕ್ಕೆ] ಬರೋಬ್ಬರಿ 50 ಲ[ಕ್ಷ] ರೂಪಾಯಿ ಚಾರ್ಜ್ ಮಾಡುತ್ತಾರೆ ಈ ಪೈಶಾಚಿ[ಕ] ಪುರೋಹಿತರು ಹೋಮ ನಡೆಸುವ ದಿನ ಕಠಿಣ ವ್ರ[ತ] ಚಾಲನೆ, ಪೂಜೆ ಇತ್ಯಾ[ದಿ] ನಡೆಸಿಯೂ ನಡೆಸುತ್ತಾರೆ.

ಈ ಸಂಹಾ[ರ] ಹೋಮದ ಹೈಲೈಟ್ ಅಂದರೆ ಕನ್ಯಾಸ್ತ್ರಿಯೊಬ್ಬಾಕೆ ಪೂಜೆಯಲ್ಲಿ ಭಾಗವಹಿಸಬೇಕ[ು] ಅಂಥ ಶುದ್ಧ ಕನ್ಯೆಯನ್ನು ಈ ಸುಪಾರಿ ಏಜೆಂಟರೆ ಹುಡು[ಕಿ] ತಂದು ನಿಲ್ಲಿಸುತ್ತಾರೆ. ಹೋಮ ಮುಗಿದ ನಂತರ ಆ ಹುಡುಗಿಯರ ಕೈಗೆ ಕೊಂಚ ಕಾಸು ನೀಡಿ ಕಳಚಿಕೊಳ್ಳುತ್ತಾರೆ.

ಕೊನೆಯ ದಿನ ಹೋಮಕುಂಡಕ್ಕೆ ತುಪ್ಪ, ರೇಷ್ಮೆ ಸೀರೆ, ತೆಂಗಿನಕಾಯಿ ಹಾಳುಮುಳನ್ನೆಲ್ಲಾ ಸುರಿದು ಸುಟ್ಟು ಬೂದಿ ಮಾಡಲಾಗುತ್ತದೆ. ಸಂಹಾರ ಹೋಮ ಮಾಡಿಸಿದ ವ್ಯಕ್ತಿಗೆ ಆದರ ಬೂದಿಯ ಪಾರ್ಸೆಲ್ ನಂತರ ತಲುಪುತ್ತದೆ. ಆತ ಅದನ್ನೇ ಹಲವು ದಿನ ಹಣೆಗೆ ಧರಿಸಿ ಓಡಾಡಬೇಕು!

ಇಷ್ಟೆಲ್ಲ ಅಸಹ್ಯ ವಾಮಾಚಾರವನ್ನು 50 ಲಕ್ಷ ರೂಪಾಯಿ ಖರ್ಚಿನಲ್ಲಿ ಮಾಡಿರುವ ಯಡ್ಡಿ ಈಗ ಸಂಹಾರ ಹೋಮದ ಬೂದಿಮಿಶ್ರಿತ ಪುಡಿಯನ್ನು ಹಣೆಗೆ ಬಳಿದು ಓಡಾಡುತ್ತಿದ್ದಾರೆ.


ಆದರಿಂದ ಶತ್ರುಗಳ ಪಿತೂರಿ ಫಲಿಸದೆ, ತನ್ನ ಕೌಂಟರ್ ಮಾಟ ಪ್ರಭಾವ ಬೀರಿ ಶತ್ರು ನಾಶವಾಗುತ್ತಾನೆ ಎಂದು ಯಡ್ಡಿ ಕಾಯುತ್ತಿದ್ದಾರೆ. ತನ್ನನ್ನು ವಿರೋಧಿಸುವವರು, ಬೈಯ್ದುಕೊಳ್ಳುವವರೆಲ್ಲಾ ಹೀಗೆ ನಾಶವಾಗಿ ಹೋಗಲಿ ಎಂದು ಮುರುಗನ್ ದೇವರಿಗೆ 50 ಲಕ್ಷದ ಸುಪಾರಿ ಕೊಟ್ಟು ಬಂದಿರುವ ಯಡ್ಡಿಗೆ ಹೋಮದ ಫಲಿತಾಂಶದ ಬಗ್ಗೆ ಪೂರ್ತಿ ನಂಬಿಕೆ ಬರಲಿಲ್ಲವೇನೋ. ಹಾಗಾಗಿ ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿಗೆ 50 ಕೋಟಿ ರೂಪಾಯಿ ದಕ್ಷಿಣೆಯನ್ನು ತಲುಪಿಸಿದ್ದಾರೆ.

ಈ ಯಡ್ಡಿ ತಲೆತಿರುಕನಷ್ಟೇ ಅಲ್ಲ, ಇಡೀ ಕರ್ನಾಟಕ ರಾಜ್ಯದ ಮೊದಲ ದರ್ಜೆ ಅವಿವೇಕಿ ಅಲ್ಲವೆ?

• ಪಾರ್ವತೀಶ

ರೇವಣ್ಣನ ರಗಳೆ

ದೇವೇಗೌಡರು ತಮ್ಮ ಸುಪುತ್ರ ಎಚ್.ಡಿ. ರೇವಣ್ಣನ ಬಾಯಿಗೆ ಅರ್ಜೆಂಟಾಗಿ ಒಂದು ಬೀಗ ಹಾಕಿಸದೆ ಹೋದರೆ ಜೆಡಿಎಸ್ ಪಕ್ಷದ ಮಾನಮರ್ಯಾದೆಗಳು ಉಳಿಯುವುದು ಕಷ್ಟ.



ಒಂದು ಕಡೆ ಯಡ್ಡಿ ತಲೆ ಕೆಟ್ಟವನಂತೆ ಶತ್ರು ಸಂಹಾರಕ್ಕಾಗಿ ಹೋಮ ಮಾಡಿಸುವುದರಲ್ಲಿ ಬ್ಯುಸಿಯಾಗಿದ್ದರೆ ಮತ್ತೊಂದೆಡೆ ಯಡ್ಡಿಯ ಮುಠ್ಠಾಳತನದ ಲೆವೆಲ್‌ನಲ್ಲೇ ರೇವಣ್ಣನೂ ವರ್ತಿಸುತ್ತಿದ್ದಾರೆ. ಕಳೆದ ನವೆಂಬರ್ ತಿಂಗಳು ಪೂರ್ತಿ "ನೋಡ್ತಾ ಇರಿ, ಕರೇ ಅಮಾವಾಸೆ ಆತ್ರ ಬತ್ತಾ ಅದೆ, ಯಡಿಯೂರಪ್ಪನ ಅಧಿಕಾರ ಓಯ್ತದೆ" ಅಂತೆಲ್ಲಾ ರೇವಣ್ಣ ಬಡಬಡಿಸಿದ್ದರು. ಅಂದರೆ ರೇವಣ್ಣನೂ ಇದೇ ಮಾಟ ಮಂತ್ರದ ಗಿರಾಕಿ ಅಂತಾಯಿತು. ಆದರೆ ಕರೇ ಅಮಾವಾಸೆ ಆದ ಮೇಲೂ ಯಡ್ಡಿಯ ಅಧಿಕಾರ ಹೋಗಲಿಲ್ಲ, ಪೆದ್ದಂಭಟ್ಟ ರೇವಣ್ಣ ಈಗ 'ಮುಂದಿನ ಸೂರ್ಯಗ್ರಹಣ ಆಗೋದ್ರೊಳಗೆ ಯಡ್ಡಿ ಹೋಗ್ತಾರೆ' ಅನ್ನುತ್ತಿದ್ದಾರೆ.

ತನ್ನ ಮಾತು ಕೇಳಿ ಜನ ನಗಬಹುದು ಎನ್ನುವ ಡೌಟೂ ರೇವಣ್ಣನಿಗಿಲ್ಲ, ಜನತಾದಳದವರಲ್ಲಿ ಯಾರಾದರೂ ವಿವೇಕಿಗಳಿದ್ದರೆ ಈ ರೇವಣ್ಣನ ಬಾಯಿಗೆ ಒಂದು ಬಾಳೆಹಣ್ಣು ತುರುಕಿ ಸುಮ್ಮನಾಗಿಸಬಾರದಾ! ಅದು ಮಂತ್ರಿಸಿದ ಬಾಳೆಹಣ್ಣಾದರೂ ಪರವಾಗಿಲ್ಲ!

ಶಿವಮೊಗ್ಗದಲ್ಲಿ ನರಬಲಿ ಕೊಡುವ ಯತ್ನ ಆಯಿತೆ?



ಶಿವಮೊಗ್ಗದ ಬಿಜೆಪಿಗಳ ಆಂತರಿಕ ವಲಯದಲ್ಲಿ ಹಾಗೂ ಕೆಲ ಪೊಲೀಸ್ ಉನ್ನತಾಧಿಕಾರಿಗಳ ಬಾಯಲ್ಲಿ ಒಂದು ಕೌತುಕದ ಸಂಗತಿ ಹರಿದಾಡುತ್ತಿದೆ.

ಯಡ್ಡಿಯ ಅಧಿಕಾರ ಉಳಿಸಲು ನರಬಲಿ ನೀಡುವ ಒಂದು ವಿಫಲ ಪ್ರಯತ್ನವೂ ಆಯಿತೆನ್ನುವ ಸಂಗತಿ ಅದು. ಬಿಜೆಪಿಯಲ್ಲೇ ಇರುವ ಮುಖ್ಯ ವ್ಯಕ್ತಿಯೊಬ್ಬರು 'ಲಂಕೇಶ್'ಗೆ ಎರಡು ವಾರಗಳ ಹಿಂದೆಯೇ ಈ ವಿಚಾರ ತಿಳಿಸಿದ್ದರು. ಪತ್ರಿಕೆಯ ತಂಡ ಇದರ ಕುರಿತ ಹೆಚ್ಚಿನ ಖಚಿತ ಮಾಹಿತಿ ಹಾಗೂ ವಿವರ ಸಂಗ್ರಹಿಸುತ್ತಿದ್ದಾಗಲೇ ಮೊನ್ನೆ ಡಿಸೆಂಬರ್ 13 ರಂದು ಮಾಜಿ ಸಿಎಂ ಕುಮಾರಸ್ವಾಮಿ ಪತ್ರಿಕಾಗೋಷ್ಠಿ ನಡೆಸಿ ಇದೇ ನರಬಲಿ ವಿಚಾರವನ್ನು ಪ್ರಸ್ತಾಪಿಸಿ ಯಡ್ಡಿ ವಿರುದ್ಧ ಆರೋಪ ಮಾಡಿದ್ದಾರೆ.

ಹಾಗಾದರೆ ಈ ವಿಚಾರ ನಿಜವೆ? ಲಂಕೇಶ್‌ಗೆ ಇದುವರೆಗೂ ಲಭ್ಯವಾಗಿರುವ ಕೆಲ ಸಂಗತಿಗಳನ್ನು ಓದುಗರಿಗೆ ನೀಡಿದೆ.

2010 ಜುಲೈ ತಿಂಗಳಿನಲ್ಲಿ ನಡೆಯಿತು ಎನ್ನಲಾದ ಘಟನೆ ಇದು.



ಶಿವಮೊಗ್ಗೆಯಲ್ಲಿರುವ ಯಡ್ಡಿ ಹಾಗೂ ದೊರೆಸ್ವಾಮಿ ನಾಯ್ಡು ಮಾಲೀಕತ್ವದ ಪಿಇಎಸ್ ಶಿಕ್ಷಣ ಸಂಸ್ಥೆಯ ಕಾಂಪೌಂಡಿನೊಳಗೆ ಜುಲೈ ತಿಂಗಳ ಮೊದಲ ವಾರದಲ್ಲಿ ಒಂದು ಬರಿದಾಗಿದ್ದ ಹೋಮಕುಂಡ ಅನೇಕರಿಗೆ ಕಂಡಿತ್ತು, ಎಂತದ್ದೋ ಪೂಜೆ ಹೋಮಕ್ಕಾಗಿ ನಿರ್ಮಿಸಿದ್ದರು ಎನ್ನುವ ಸಮಜಾಯಿಷಿಯನ್ನು ಸಂಬಂಧಿಸಿದವರು ಕೊಟ್ಟರು. ಆದರೆ ಅದಾದ ಮೂರ್ನಾಲ್ಕು ದಿನದಲ್ಲೇ ಅದೇ ಶಿವಮೊಗ್ಗ ಟೌನಿನ ಪೊಲೀಸ್ ಠಾಣೆಯೊಂದರಲ್ಲಿ ಲಂಬಾಣಿ ದಂಪತಿಗಳಿಬ್ಬರ ವಿರುದ್ಧ ಪೊಲೀಸರು ದೂರೊಂದನ್ನು ದಾಖಲಿಸಿಕೊಂಡರು. ಶಾಂತಿಭಂಗ ಮಾಟ ಇತ್ಯಾದಿ ಆರೋಪಗಳ ಪ್ರಕರಣ ಅದಾಗಿತ್ತು.

ಅಸಲಿಗೆ ತೆರೆಮರೆಯಲ್ಲಿ ನಡೆದದ್ದೇನೆಂದರೆ ಅತ್ಯಂತ ಬಡತನವಿದ್ದ ಒಂದು ಲಂಬಾಣಿ ಕುಟುಂಬದ ಗಂಡ-ಹೆಂಡತಿಯನ್ನು ಹಣ ಕೊಡುವ ಆಮಿಷವೊಡ್ಡಿ ಆ ಹೋಮದಲ್ಲಿ ಪಾಲ್ಗೊಳ್ಳುವಂತೆ ಕರೆತರಲಾಗಿತ್ತಂತೆ. ಅವತ್ತು ರಾತ್ರಿ ಹೋಮ ಶುರುವಾದ ಮೇಲೆ ಆ ಲಂಬಾಣಿ ಮಹಿಳೆಯನ್ನು ಹೋಮಕುಂಡದ ಬಳಿಗೆ ಕರೆತಂದು ಎಂಥದ್ದೋ ಪೂಜೆಗಳು ಶುರುವಾದವು. ರಾತ್ರಿ ಬಲಿಯುತ್ತಿದ್ದಂತೆ ಭಯ ಹುಟ್ಟಿಸುವಂತೆ ಬದಲಾಗುತ್ತಿದ್ದ ವಾಮಾಚಾರದಂತೆ ಕಾಣುತ್ತಿದ್ದ ಸೀನ್‌ಗಳನ್ನು ನೋಡಿ ಆ ಮಹಿಳೆಯ ಗಂಡ ಹೆದರಿ ಹೋಗಿದ್ದಾನೆ. ಜೊತೆಗೆ ಆ ಹೆಂಗಸು ಗಲಾಟೆ ಶುರು ಮಾಡಿದ್ದಾಳೆ. ಕೊನೆಗೆ ಇದು ಆಗುವ ಕೆಲಸವಲ್ಲ ಎನಿಸಿ ವಾಮಾಚಾರಿಗಳು ಪೂಜೆ ಅರ್ಧಕ್ಕೆ ನಿಲ್ಲಿಸುತ್ತಿದ್ದಂತೆ ಆ ಬಡ ದಂಪತಿಗಳು ಜಾಗ ಬಿಟ್ಟು ಓಡಿಹೋಗಿದ್ದಾರೆ.

ಸುಮಾರು 45-50 ವಯಸ್ಸಿನವರಾದ ಆ ದಂಪತಿಗಳು ಮುಂದೇನಾಗುವುದೋ ಎಂದು ಹೆದರಿ ಶಿವಮೊಗ್ಗೆಯ ಪೊಲೀಸ್ ಠಾಣೆಯೊಂದಕ್ಕೆ ಹೋಗಿದ್ದಾರೆ. ಆದರೆ ವಿವರಗಳನ್ನೆಲ್ಲಾ ಕೇಳಿಕೊಂಡ ಇನ್ಸ್‌ಪೆಕ್ಟರ್ ಯಾರ್‍ಯಾರೊಂದಿಗೋ ಮಾತನಾಡಿ ಕೊನೆಗೆ ಆ ಬಡ ದಂಪತಿಗಳ ಮೇಲೇ ಶಾಂತಿಭಂಗ ಹಾಗೂ ಮಾಟಮಂತ್ರ ನಡೆಸಿದ ಆರೋಪ ಹೊರಿಸಿ ಕೇಸ್ ಹಾಕಿಬಿಟ್ಟ.

ಈ ವಿಚಾರ ಅಲ್ಲಲ್ಲಿ ಸೋರಿಕೆಯಾಗಿ ಒಂದಿಬ್ಬರು ಪತ್ರಕರ್ತರು ಠಾಣೆಗೆ ಹೋಗಿ ವಿಚಾರಿಸಿದಾಗ ಪೊಲೀಸರು ಹಾರಿಕೆಯ ಉತ್ತರ ಕೊಟ್ಟಿದ್ದಾರೆ.

ಹಾಗಾದರೆ ಶಿವಮೊಗ್ಗದಲ್ಲಿ 2010 ರ ಜುಲೈ ಮೊದಲ ವಾರದಲ್ಲಿ ನಿಜವಾಗಲೂ ನಡೆದದ್ದೇನು?


ಆ ಬಡಪಾಯಿ ದಂಪತಿಗಳು ಪತ್ತೆಯಾದರೆ ಮಾತ್ರ ಖಚಿತ ಉತ್ತರ ಸಿಕ್ಕೀತು.

ಗಣಿಕಳ್ಳ ಸ್ವಸ್ತಿಕ್ ನಾಗರಾಜ್


ಟಿವಿ ನಟಿಯ ಕೊಲೆಯತ್ನ

ಬಳ್ಳಾರಿಯ ಅಕ್ರಮ ಗಣಿಗಾರಿಕೆಯ ದುಡ್ಡು ಕರ್ನಾಟಕ ರಾಜ್ಯ ರಾಜಕಾರಣವನ್ನು ಹಾಳು ಮಾಡುತ್ತಿರುವುದು ಒಂದು ಕಥೆಯಾದರೆ ಮತ್ತೊಂದೆಡೆ ಈ ಗಣಿಕಳ್ಳರ ತೆವಲಿಗೆ ಅಮಾಯಕ ಹುಡುಗಿಯರೂ ಬಲಿಯಾಗುತ್ತಿದ್ದಾರೆ.

ಬೇಲೇಕೇರಿ ಬಂದರಿನಿಂದ ಲಕ್ಷಾಂತರ ಟನ್ ಕಬ್ಬಿಣದ ಅದಿರನ್ನು ಕದ್ದು ಸಾಗಿಸಿದ ಆರೋಪ ಹೊತ್ತಿರುವ ಹಾಲಿ, ಲೋಕಾಯುಕ್ತ ಪೊಲೀಸರು ಹುಡುಕುತ್ತಿರುವ ಹೊಸ ಪೇಟೆಯ ಗಣಿ ದಂಧೆಕೋರ ಸ್ವಸ್ತಿಕ್ ನಾಗರಾಜ್ ಅಂಥದ್ದೊಂದು ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದಾನೆ.



ಸ್ವಸ್ತಿಕ ನಾಗರಾಜ್



ಕಾರದಪುಡಿ ಮಹೇಶ

ಯುವತಿಯೊಬ್ಬಳಿಗೆ ಮದುವೆಯಾಗುವುದಾಗಿ ನಂಬಿಸಿ ವಂಚಿಸಿದ ಹಾಗೂ ಆಕೆಯ ಮನೆಗೆ ಗೂಂಡಾಗಳೊಂದಿಗೆ ನುಗ್ಗಿ ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿರುವ ಕೇಸ್ ಒಂದು ಬೆಂಗಳೂರಿನ ಗಿರಿನಗರ ಪೊಲೀಸ್ ಠಾಣೆಯಲ್ಲಿ ಡಿಸೆಂಬರ್ 8ರಂದು ರಿಜಿಸ್ಟರ್ ಆಗಿದೆ.

ಸ್ವಸ್ತಿಕ್ ನಾಗರಾಜನೇ ಈ ಪ್ರಕರಣದ ಪ್ರಮುಖ ಆರೋಪಿ!

ಈ ಸ್ವಸ್ತಿಕ್ ನಾಗರಾಜನಿಗೆ ಈಗಾಗಲೇ ಮದುವೆಯಾಗಿದೆ. ಹೊಸಪೇಟೆಯಲ್ಲಿ ನಂದಿನಿ ಎಂಬ ಪತ್ನಿಯೂ ಇದ್ದಾರೆ. ಇಬ್ಬರು ಮಕ್ಕಳೂ ಇದ್ದಾರೆ. ಆದರೂ ಈ ನಾಗರಾಜ ಬೆಂಗಳೂರುತನಕ ಬಂದು ಸವಿತಾ (ಹೆಸರು ಬದಲಿಸಿದೆ)ಎನ್ನುವ ಹುಡುಗಿಗೇಕೆ ಮದುವೆಯಾಗುವುದಾಗಿ ನಂಬಿಸಿದ. ಆರೆಂಟು ತಿಂಗಳಿಂದಲೂ ಆಕೆಯೊಂದಿಗೆ ಓಡಾಡಿ, ಮನೆ ಮಾಡಿಕೊಂಡು ಜೊತೆಗೇ ಇದ್ದು ಈಗ ಆಕೆಗೆ ಕೈಕೊಟ್ಟು ಕೊಲೆ ಮಾಡಲು ಯಾಕೆ ಯತ್ನಿಸಿದ ಎಂದು ಹುಡುಕುತ್ತಾ ಹೊರಟರೆ ಅನೇಕ ಅಸಹ್ಯಕಾರಿ ಸಂಗತಿಗಳು ಪತ್ತೆಯಾಗುತ್ತವೆ.


ಟಿವಿ ಸೀರಿಯಲ್‌ಗಳಲ್ಲಿ ನಟಿಸುವ ಕೆಲ ಹೆಂಗಸರು ನಟನೆಯನ್ನು ಪಾರ್ಟ್‌ಟೈಂ ಕೆಲಸ ಮಾಡಿಕೊಂಡು ವೇಶ್ಯಾವಾಟಿಕೆಯನ್ನೇ ಫುಲ್‌ಟೈಂ ಕಸುಬು ಮಾಡಿಕೊಂಡಿರುವ ದಂಧೆ ಹೊರಬರುತ್ತದೆ. ಈ ದಂಧೆಗೆ ಹೊಸಬರನ್ನು, ಅಮಾಯಕ ಹುಡುಗಿಯರನ್ನು ಕರೆತಂದು ಶ್ರೀಮಂತ ಕುಳಗಳ 'ಕಾಮ ಯಜ್ಞ'ಕ್ಕೆ ಬಲಿಕೊಡುತ್ತಿರುವ ಟಿವಿ ಆಂಟಿಯರ ಬಯೋಡೇಟಾಗಳೂ ಗೊತ್ತಾಗುತ್ತದೆ.

ಟಿವಿ ನಟಿಯರಾದ ನವ್ಯ ಹಾಗೂ ವಿಮಲಾ, ಮಂಜುಳಾ ಆಂಟಿ ಮುಂತಾದವರು ಈ ದಂಧೆಯ ಕಿಂಗ್‌ಪಿನ್‌ಗಳಾಗಿದ್ದು ವಿಜಯ್ ಹಾಗೂ ವಿನಯ್ ಎಂಬ ಅಡ್ಡಕಸುಬಿಗಳೇ ಬ್ರೋಕರ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ.

ಇದೊಂದು ಸ್ಯಾಂಪಲ್ ಮಾತ್ರ. ಹಾಗೇ ತಲಾಶ್ ಮಾಡುತ್ತಾ ಹೋದರೆ ಈ ಟಿವಿ ಆಂಟಿಯರು ಮತ್ತವರ ಬ್ರೋಕರ್‌ಗಳು ಅವರ ನೆಟ್‌ವರ್ಕ್‌ನ ಪಟ್ಟಿ ದೊಡ್ಡದಾಗುತ್ತಾ ಹೋಗುತ್ತವೆ. ಐಟಿಬಿಟಿ ಕಂಪೆನಿಗಳಂತೆಯೇ ಇವರ ಬ್ಯುಸಿನೆಸ್‌ನ ಭರಾಟೆಯೂ ಲಾಭದಾಯಕವಾಗಿ ಬೆಳೆಯುತ್ತಿವೆ.



ಬ್ರೋಕರ್ ವಿಜಯ್ ಮತ್ತು ವಾಳಿಗ ಬಳಸಿದ ಕಾರು...



ಎಫ್.ಐ.ಆರ್. ಅನುಸೂಚಿ

F.I.R. Contents (Attach seprate sheet if necessary)

ನಾಗರಾಜನ ವಿರುದ್ಧ ಪೊಲೀಸರ ಎಫ್‌ಐಆರ್...

ನಟಿ ನವ್ಯ ದಂಧೆ ಅಸಹ್ಯ!

ನಟಿ ರಕ್ಷಿತಾ ಸುವರ್ಣ ಚಾನೆಲ್‌ನಲ್ಲಿ ನಡೆಸಿಕೊಟ್ಟ ಸ್ವಯಂವರ ಪ್ರೋಗ್ರಾಂನಲ್ಲಿ ಭಾಗವಹಿಸಿದ್ದ ನಟಿ ನವ್ಯ ಬೆಂಗಳೂರಿನ ರಸಿಕ ಶಿಖಾಮಣಿಗಳ ವಲಯದಲ್ಲಿ ವರ್ಲ್ಡ್ ಫೇಮಸ್. 'ಎರಡನೇ ಮದುವೆ' ಇತ್ಯಾದಿ ಸಿನಿಮಾಗಳಲ್ಲಿ ನಟಿಸಿರುವ ಈಕೆ ಹಾಲಿ ಉದಯ ಟಿವಿಯ 'ಲಕುಮಿ' ಸೀರಿಯಲ್‌ನ ಹೀರೋಯಿನ್.

ಬಹಳ ಮುಖ್ಯವಾಗಿ ಗಣಿಕಳ್ಳ ಸ್ವಸ್ತಿಕ್ ನಾಗರಾಜನ ಗೆಣೇಕಾರ್ತಿ ಇವಳು. ಈಗ ಸ್ವಸ್ತಿಕ್ ನಾಗರಾಜನ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿರುವ ಸವಿತಾ ಸಹ ಒಂದೆರಡು ಟಿವಿ ಸೀರಿಯಲ್‌ಗಳಲ್ಲಿ ನಟಿಸಿದ್ದಾಳೆ. ಒಳ್ಳೆಯ ಅವಕಾಶಕ್ಕಾಗಿ ಎದುರು ನೋಡುತ್ತಿದ್ದ ಸವಿತಾಳಿಗೆ ಆಕಸ್ಮಾತ್ತಾಗಿ ನವ್ಯಳ ಪರಿಚಯವಾಗಿದೆ. ಒಮ್ಮೆ ಮಣಿಪಾಲ್ ಸೆಂಟರ್ ಬಳಿ ಇರುವ ಡೈಮಂಡ್ ಡಿಸ್ಟ್ರಿಕ್ಟ್‌ನಲ್ಲಿರುವ ತನ್ನ ಅಪಾರ್ಟ್‌ಮೆಂಟ್‌ಗೆ ಸವಿತಾಳನ್ನು ಕರೆದುಕೊಂಡು ಹೋದಳು ನವ್ಯ.


ಸವಿತಾ ಮನಸ್ಸು ಮಾಡಿದರೆ ಹೇಗೇಗೆ ಎಷ್ಟೆಷ್ಟು ಹಣ ದೊರೆಯಬಹುದೆಂಬ ಧರ್ಮಬೋಧನೆಯನ್ನೂ ಮಾಡಿದ್ದಾಳೆ. ಆದರೆ ಆಗಷ್ಟೇ ಬೆಂಗಳೂರಿಗೆ ಬಂದಿದ್ದ ಅಮಾಯಕ ಬಾಲೆ ಸವಿತಾ ನವ್ಯಳ ಮಾತನ್ನು ಒಪ್ಪದೇ ಹೋದಾಗ 'ಹೋಗಲಿ ಬಿಡು, ನಾಳೆ ಸ್ವಸ್ತಿಕ್ ನಾಗರಾಜ್ ಬರ್‍ತಾರೆ ತುಂಬಾ ಒಳ್ಳೆಯವರು, ನೀನು ಅವರನ್ನು ಒಂದ್ಸಾರಿ ಮಾತಾಡ್ಸು' ಎಂದು ಪುಸಲಾಯಿಸಿದ್ದಾಳೆ.



ನಟಿ ನವ್ಯ

ನಾಗರಾಜ ಬಂದ, ನೋಡಿದ, ನಂಬಿಸಿದ

ನವ್ಯ ಹೇಳಿದಂತೆಯೇ ಸ್ವಸ್ತಿಕ್ ನಾಗರಾಜ್ ಫ್ಲಾಟಿಗೆ ಬಂದ. ಸವಿತಾಳ ಪರಿಚಯ ಮಾಡಿಕೊಂಡ ನಂತರ 'ನೀನು ಇಲ್ಲಿರಬೇಡ. ಈ ಜಾಗ ಸರಿಯಿಲ್ಲ' ಎಂದು ಸವಿತಾಳಿಗೆ ಪ್ರತ್ಯೇಕ ಮನೆಯನ್ನೇ ಮಾಡಿಕೊಟ್ಟ. ಬನಶಂಕರಿಯ ಚನ್ನಮ್ಮನಕೆರೆ ಲೇಔಟ್‌ನಲ್ಲಿದ್ದ ಬಾಡಿಗೆ ಮನೆಯಲ್ಲಿ ಹೀಗೆ ಸ್ವಸ್ತಿಕ್ ನಾಗರಾಜ್ ಹಾಗೂ ಸವಿತಾಳ ಸಂಸಾರ ಶುರುವಾಯಿತು. ಆದರೆ ಕೆಲವೇ ದಿನಗಳಲ್ಲಿ ಸವಿತಾಗೆ ನಾಗರಾಜನಿಗೆ ಈಗಾಗಲೇ ಮದುವೆಯಾಗಿರುವ ಸಂಗತಿ ತಿಳಿಯಿತು. ಆದರೂ ನಾಗರಾಜ 'ನಾನು ನಿನ್ನನ್ನೂ ಮದುವೆಯಾಗುತ್ತೇನೆ' ಎಂದು ನಂಬಿಸಿದ್ದಾನೆ.



ಇನ್ಸ್‌ಪೆಕ್ಟರ್ ಬಸವೇಶ್

ಈ ಜೋಡಿ ಕಳೆದ ಆರೆಂಟು ತಿಂಗಳಲ್ಲಿ ದೆಹಲಿ, ಗೋವಾ, ಬಾಂಬೆ ಎಂದು ಜೊತೆಯಾಗೇ ಸುತ್ತಾಡಿದ್ದಾರೆ. ಸವಿತಾರನ್ನು ಅನೇಕ ಸಾರಿ ಹೊಸಪೇಟೆಯ ಮಲ್ಲಿಗೆ ಹೋಟೆಲ್‌ಗೆ ನಾಗರಾಜ್ ಕರೆಸಿಕೊಂಡಿದ್ದಾನೆ. ನಾಗರಾಜ್ ಸವಿತಾ ಗೋವಾ-ದೆಹಲಿಗೆ ಹೋದಾಗ ಹೊಸಪೇಟೆಯ ಇನ್ನೊಬ್ಬ ಗಣಿಕಳ್ಳ ಖಾರಪುಡಿ ಮಹೇಶನೂ ಮತ್ತವನ ಹೊಸ ಗೆಣೇಕಾರ್ತಿ ನಫೀಸಾಳ ಜೊತೆಯಲ್ಲಿ ಹೋಗಿದ್ದಾರೆ.

ಹೀಗಿದ್ದಾಗ ನಾಗರಾಜ ಇತ್ತೀಚೆಗೆ ತನ್ನ ವರಸೆಯನ್ನು ಬದಲಾಯಿಸಿದ್ದಾನೆ. 'ನಾನು ನಿನ್ನ ಮದುವೆ ಆಗಲ್ಲ, ಬೇಕಾದ್ರೆ ದುಡ್ಡು ಕೊಡ್ತೀನಿ, ಎಲ್ಲಾ ಸೆಟ್ಲ್ ಮಾಡಿಕೊಳ್ಳೋಣ' ಎನ್ನಲು ಶುರುಮಾಡಿದ.

ಸವಿತಾ ಇದಕ್ಕೊಪ್ಪಲಿಲ್ಲ, ಸಿಟ್ಟಿಗೆದ್ದ ನಾಗರಾಜ ಕಳೆದ ಹದಿನೈದು ದಿನಗಳಿಂದ ಸವಿತಾಳನ್ನು ಹೆದರಿಸಲು ಗೂಂಡಾಗಳನ್ನು ಮನೆಗೆ ನುಗ್ಗಿಸಿ ಬೆದರಿಸಲು ಶುರು ಮಾಡಿದ್ದ. ಬ್ರೋಕರ್ ವಿನಯನೂ ಮಧ್ಯೆ ತಲೆಹಾಕಿ ಸವಿತಾಳನ್ನು ನಾಗರಾಜನ ಅನುಕೂಲಕ್ಕೆ ತಕ್ಕಂತೆ ಪಳಗಿಸುವ ಪ್ರಯತ್ನ ನಡೆಸುತ್ತಿದ್ದ. ಈ ಗಲಾಟೆ ಡಿಸೆಂಬರ್ 8ರಂದು ಪರಾಕಾಷ್ಠೆಗೆ ಹೋಯಿತು. ಸ್ವಸ್ತಿಕ್ ನಾಗರಾಜ ಖುದ್ದಾಗಿ ರಾಕೇಶ, ಗುಪ್ತ, ಗೋವಿಂದ ರಾಜು ಹಾಗೂ ಇನ್ನೂ ಮೂವರು ಗೂಂಡಾಗಳೊಂದಿಗೆ ಸವಿತಾಳ ಮನೆಗೆ ನುಗ್ಗಿದ್ದಾನೆ. ಸವಿತಾ ಹಾಗೂ ಆಕೆಯ ತಂದೆ-ತಾಯಿ ಮೇಲೆ ಹಲ್ಲೆ ನಡೆಸಿ ತನ್ನ ಮೊಬೈಲ್, ಕೆಲವೊಂದು ಬಟ್ಟೆಬರೆ, ಕಾಗದಪತ್ರಗಳನ್ನು ಹುಡುಕಿ ಎತ್ತಿಕೊಂಡು ಓಡಿಹೋಗಿದ್ದಾನೆ.

ಪ್ರಾಣಭಯದಿಂದ ಹೆದರಿ ಹೋದ ಸವಿತಾ ಗಿರಿನಗರ ಸ್ಟೇಷನ್‌ಗೆ ಹೋಗಿ ನಾಗರಾಜನ ವಿರುದ್ಧ ಕಂಪ್ಲೇಂಟ್ ಮಾಡಿದ್ದಾಳೆ. ಇನ್ಸ್‌ಪೆಕ್ಟರ್ ಓಬಳೇಶ್ ಐಪಿಸಿ ಸೆಕ್ಷನ್ 143, 147, 323, 420, 506 ...... 149 ನಡಿ ಪ್ರಕರಣ ದಾಖಲಿಸಿದ್ದಾರೆ.

ಸದ್ಯಕ್ಕೆ ಸ್ವಸ್ತಿಕ್ ನಾಗರಾಜ್ ತಲೆಮರೆಸಿಕೊಂಡು ಓಡಿಹೋಗಿದ್ದಾನೆ.

ಎಂಬತ್ತು ಬಾರಿಸಿದ ಪೇಜಾವರರಿಗೆ ಪ್ರಣಾಮಗಳು!

ಉಡುಪಿ ಪೇಜಾವರ ಮಠದ ವಿಶ್ವೇಶತೀರ್ಥರು ಧರ್ಮ ರಾಜಕಾರಣ ಮಾಡುತ್ತಲೇ ಎಂಬತ್ತು ವರ್ಷ ತುಂಬಿಸಿಬಿಟ್ಟ ಸುದ್ದಿ ತಿಳಿಯುತ್ತಿದ್ದಂತೆ ಅವರಿಗೆ ಅಭಿನಂದಿಸಬೇಕೆನಿಸಿತಲ್ಲಾ, ಫೋನ್ ಮಾಡಿದರೆ ರಿಂಗಾಯ್ತು. ರಿಂಗ್ ಟೋನ್: "ಹರೇ ಕೃಷ್ಣ ಹರೇ ರಾಮ, ಜೈ ಹನುಮಾನ್ ಹರಹರ ಮಹದೇವ್...."

ಥೂತ್ತೇರಿ

ಯಾಹೂ

"ಹಲೋ ಯಾರೂ?"

"ಸ್ವಾಮೀಜಿ, ನಾನು ಯಾಹು, ಪತ್ರಕರ್ತ."

"ಒಳ್ಳೆಯದು, ಫೋನು ಮಾಡಿದ್ದು ಯಂತಕ್ಕೆ?"

"ತಾವು ಎಂಟು ದಶಕ ಬಾರಿಸಿ, ನವ ದಶಕದ ಆರಂಭಕ್ಕೆ ಕಾಲಿಟ್ಟರಂತೆ. ಅದಕ್ಕೆ ಅಭಿನಂದನೆ ಹೇಳೋದಕ್ಕೆ ಫೋನ್ ಮಾಡಿದೆ ಸ್ವಾಮೀಜಿ."

"ನಿಮ್ಮ ಅಭಿಮಾನಕ್ಕೆ, ನಾನು ಆಭಾರಿಯಾಗಿದ್ದೇನೆ. ನಿಮ್ಮಂತವರ ಬೆಂಬಲವಿದ್ದರೆ ನನ್ನ ಬದುಕಿನ ಕಡೆ ದಿನದವರೆಗೂ ಹೋರಾಟ ಮಾಡ್ತೇನೆ."

"ಯಾರ ವಿರುದ್ಧ ಹೋರಾಟ ಮಾಡ್ತಿರಿ ಸ್ವಾಮೀಜಿ."

"ಅಸ್ಪೃಶ್ಯತೆ ವಿರುದ್ಧ."

"ಅಂದರೆ ಅಂಬೇಡ್ಕರ್ ತರ ಹೋರಾಟನ ಸ್ವಾಮೀಜಿ?"

"ಅಂತ ಹೋರಾಟ ಅಲ್ಲ, ಅಸ್ಪೃಶ್ಯತೆಗೆ ತುತ್ತಾಗಿರುವ ಜನಕ್ಕೆ ವೈಷ್ಣವ ದೀಕ್ಷೆ ಕೊಡುವುದರ ಮುಖಾಂತರ ಅಸ್ಪೃಶ್ಯತೆ ತೊಡೆದು ಹಾಕ್ತೇನೆ."

"ಇದೇನು ಸ್ವಾಮೀಜಿ ಇಂತ ತಮಾಷೆ ಮಾಡ್ತಿರಿ?"

"ತಮಾಷೆಯಲ್ಲ ಇದು. ಅಸ್ಪೃಶ್ಯತೆ ನಿವಾರಣೆ ವಿಷಯದಲ್ಲಿ ನಾನು ತೆಕ್ಕೊಂಡು ಕಾರ್ಯಕ್ರಮ ಯಶಸ್ವಿಯಾಗುತ್ತಿರುವ ವಿಷಯ ಹೇಳಿದ್ದು."

"ಇಡೀ ಕರ್ನಾಟಕದಲ್ಲಿ ಇರೋ ಒಂದು ಹಿಂದು ಸ್ವಾಮಿಗಳಿಗೇ ಇಲ್ಲದ ಉಸಾಬರಿ ನಿಮಗೇಕೆ?"

"ನಾನು ಸಣ್ಣವನಿದ್ದಾಗ ಕಾಲು ಜಾರಿ ನದಿಯಲ್ಲಿ ಬಿದ್ದೆ. ಅದನ್ನು ನೋಡಿದ ಒಬ್ಬ ದಲಿತರವನು. ನನ್ನನ್ನು ಹಿಡಿದು ಮೇಲೆತ್ತಿ ದಡಕ್ಕೆ ತರಲಾಗದೆ ಊರವರನ್ನು ಕರೆತಂದ."

"ಅವುನು ಎತ್ತಕ್ಕಾಗದಷ್ಟು ದಪ್ಪಾಗಿದ್ರ ನೀವು?"

"ಅವನು ಎತ್ತಲಾಗದಷ್ಟು ಘೋರ ಇರಲಿಲ್ಲ ನಾನು, ಸಪೂರವಾಗಿದ್ದೆ, ಆದರೆ ಆತ ಅಸ್ಪೃಶ್ಯ, ನಾನು ಅಸ್ಪೃಶ್ಯತೆ ಆಚರಿಸುವವರ ಮನೆಯ ಮಾಣಿ. ಹಾಗಾಗಿ ಆತ ನನ್ನನ್ನು ಮುಟ್ಟಲು ಹೆದರಿ ಓಡಿಹೋದ. ಇನ್ನು ನನ್ನ ಕತೆ ಮುಗಿಯಿತು ಎಂದು ಭಾವಿಸುವಷ್ಟರಲ್ಲಿ ಆತ ಮೇಲುಜಾತಿಯವರನ್ನು ಕರೆತಂದು ನನ್ನನ್ನು ಬದುಕಿಸಿದ. ಅವನೇನಾದರೂ ಆ ಕೆಲಸ ಮಾಡಿದಿದ್ದರೆ ಹಿಂದೂ ಧರ್ಮದ ಅಸ್ಪೃಶ್ಯತೆ ತೊಡೆದು ಹಾಕಲು ಯಾರೂ ಇಲ್ಲದಂತಹ ಸ್ಥಿತಿ ಬರುತ್ತಿತ್ತು."

"ನಿಜ ಸ್ವಾಮೀಜಿ, ನೀವು ಬದುಕಿ ಬಂದು ಸ್ವಾಮಿಯಾಗಿ ಕೈಗೊಂಡ ಕ್ರಾಂತಿಕಾರಿ ಕಾರ್ಯದಿಂದ ಈ ಧರ್ಮವನ್ನು ಆವರಿಸಿದ್ದ ಅಸ್ಪೃಶ್ಯತೆ ಹಿಮದಂತೆ ಕರಗಿ ಹೋಗ್ತಾ ಇದೆ."

"ಆದರೆ ನನ್ನ ವಿರೋಧಿಗಳು ಇದನ್ನು ಒಪ್ಪುತ್ತಿಲ್ಲ, ನನ್ನ ಕಾರ್ಯಾಚರಣೆಯೆಲ್ಲವೂ ರಾಜಕೀಯ ದೀಕ್ಷೆಯಂತೆ ಕಾಣುತ್ತಿದೆಯಂತೆ. ದಲಿತರ ಓಟುಗಳನ್ನು ಬಿಜೆಪಿಗೆ ಕೊಡಿಸುವ ಹುನ್ನಾರವಂತೆ. ಇಂತವರ ಮಾವನಿಂದ ಬೇಸರವಾಗಿದೆ."

"ನಿಜ ಸ್ವಾಮೀಜಿ, ಬೇಸರವಾಗಲ್ವ? ನೀವು ಬಿಜೆಪಿಯ ಅರೆಬರೆ ಕಾರ್ಯಕರ್ತ ಅಲ್ಲವೇ ಅಲ್ಲ, ಒಬ್ಬ ಪೂರ್ಣಾವಧಿ ಕಾರ್ಯಕರ್ತ. ಬಾಬರಿ ಮಸೀದಿ ಬೀಳೋ ಜಾಗದಲ್ಲಿ ನಿಂತುಕೊಂಡು ಭಜರಂಗಿಗಳನ್ನು ಪ್ರೋತ್ಸಾಹಿಸಿದ್ರಿ. ಮಸೀದಿ ಬಿದ್ದ ಜಾಗದಲ್ಲಿ ದಶರಥನ ಆಸ್ಥಾನದಲ್ಲಿದ್ದ ಸಾಮಗ್ರಿ ಸಿಕ್ಕಿದ್ದೊ ಅಂದ್ರಿ. ಅದಕ್ಕಿಂತ ಮೊದಲು ನಡೆದ ಇಟ್ಟಿಗೆ, ಜ್ಯೋತಿ, ಪಾದುಕೆ ಯಾತ್ರೇಲಿ ಸಕ್ರಿಯವಾಗಿ ಭಾಗವಹಿಸಿ, ಇಡೀ ದೇಶವನ್ನೆ ಸುತ್ತಿದ್ರಿ. ಉಮಾಭಾರತಿ ಪಾರ್ಟಿ ಬಿಟ್ಟು ಹೋಗದಂಗೆ ತಡಿಯಕ್ಕೆ ಹೋರಾಡಿದ್ರಿ. ಎಡಿಯೂರಪ್ಪನ ಸರಕಾರ ಬಿದ್ದೆಹೋಯ್ತು ಅನ್ನುವಾಗ ದೆಹಲಿಗೆ ಹೋಗಿ ಲಾಬಿ ಮಾಡಿ ಉಳಿಸಿಕೊಂಡ್ರಿ. ಇಂತ ಕಾರ್ಯಾಚರಣೆ ನೋಡಿದ್ರೆ ಮಧು, ಕೈತವ, ದಾನವರಂತೆ ಕಾಣೋ ಆ ಈಶ್ವರಪ್ಪ, ಗದ್ದರಿನೂ ನಾಚಿಕೊಬೇಕು."

"ನೀವು ಈ ರೀತಿ ಕಟಕಿಯಾಡುವುದು ಬೇಡ. ಇದಕ್ಕಾ ನೀವು ಫೋನು ಮಾಡಿದ್ದು?"

"ಅದಕ್ಕಲ್ಲ ಸ್ವಾಮಿ, ನಾನೊಬ್ಬ ದಲಿತ. ನನಗೆ ಹೆಣ್ಣು ಕೊಟ್ಟು ಮದುವೆ ಮಾಡಿ ಕ್ರಿಶ್ಚಿಯನ್ ಧರ್ಮಕ್ಕೆ ಎಳೆಯೋದಕ್ಕೆ ನೋಡ್ತಾಯಿದಾರೆ. ಅದಕ್ಕೆ ವೈಷ್ಣವ ದೀಕ್ಷೆ ಬೇಕಾಗಿತ್ತು."

"ಹಾಗಾದರೆ ದೀಕ್ಷೆ ಹೇಳ್ತೆನೆ. ನಾನು ಹೇಳಿದಂತೆ ನೀವೂ ಹೇಳಿ."

"ಆಯ್ತು ಸ್ವಾಮಿ, ಹೇಳಿ."

"ಹರೇ ರಾಮ ಹರೇ ಕೃಷ್ಣ"

"ಹೇಳಿದೆ ಸ್ವಾಮಿ."

"ಜೈ ಹನುಮಾನ್."

"ಜೈ ಹನುಮಂತ."

"ನಾನು ಹೇಳಿಕೊಟ್ಟಂತೆ ಹೇಳಿ."

"ಆಯ್ತು, ಜೈ ಹನುಮಾನ್."


"ಹರ ಹರ ಮಹದೇವ್."

"ಹರ ಹರ ಮಹದೇವ್."

"ನೀವು ಈ ಕಡೆ ಬಂದರೆ ಮುದ್ರಾಧಾರಣೆ ಮಾಡಿಸಿಕೊಂಡು ಹೋಗಿ ಇವರೆ."

"ಮುದ್ರಾಧಾರಣೆ ಮಾಡಿಸಿಕೊಂಡ್ರೆ ಏನಾಗತ್ತೆ ಸ್ವಾಮೀಜಿ?"

"ನಿಮಗೆ ಅಂಟಿರುವ ಅಸ್ಪೃಶ್ಯತೆ ನಿವಾರಣೆ ಆಗ್ತದೆ."



"ಸ್ವಾಮೀಜಿ, ಒಂದು ವಿನಂತಿ."

"ಏನು ಹೇಳಿ?"

"ಈ ಅಸ್ಪೃಶ್ಯತೆ ವಿಷಯದಲ್ಲಿ ನನ್ನ ತಪ್ಪು ಏನೂ ಇಲ್ಲ, ಆದ್ರೂ ನಿಮ್ಮವರ ಅಮಾನುಷವಾದ ಮಡಿಮೈಲಿಗೆ ದೆಸೆಯಿಂದ ಇನ್ನೂ ಉಳಿದು ಬದುಕಿ ಬಂದಿದ್ದೀವಿ. ಯಾರ ತಲೆಲಿ ಅಸ್ಪೃಶ್ಯತೆಯ ಮಲ ತುಂಬಿದೆಯೋ ಅದನ್ನ ತೆಗೆದು ಮೆದುಳು ಜೋಡಿಸೊ ಕಾರ್ಯ ಮಾಡಿ. ಈ ಕೆಲಸನ ಮೊದಲು ನಿಮ್ಮ ಮಾಧ್ವರಿಗೆ ಮಾಡಿ. ಆಮೇಲೆ ಉಳಿದ ಮೇಲುಜಾತಿ ಜನಕ್ಕೆ ಮಾಡಿ. ಯಾವ ತರ ಅಂದ್ರೆ, 'ಸೀತಾರಾಮು' ಸಿನುಮದಲ್ಲಿ ಸುಂದರಕೃಷ್ಣ ಅರಸ್ ಮಂಜುಳನ ಮೆದುಳು ತಗದು ಶಂಕರ್‌ನಾಗ್ ಮೆದುಳು ಜೋಡುಸ್ತನೆ. ಆನಂತರ ಕೆಟ್ಟ ಜನಗಳ ಸಂಹಾರ ಆಗುತ್ತೆ ಗೊತ್ತಾಯ್ತ ನಾನು ಹೇಳ್ತಾಯಿರೋದು?"

"ಹೇಳಿ."

"ಅಸ್ಪೃಶ್ಯರು ಕುವೆಂಪು ಹೇಳಿರೊ ವಿಶ್ವಮಾನವರಂಗೆ ಬದುಕ್ತಾ ಅವ್ರೆ. ಅವರುನ್ಯಾಕೋಗಿ ಬ್ರಹ್ಮನ ಹೊಕ್ಕಳದಿಂದ ಮೂಡಿಬಂದ ಕಮಲದ ಚಿನ್ನೆ ಕ್ಯಾನ್‌ವಾಸ್ ಮಾಡಬೇಡಿ. ನಿಮ್ಮ ಎಡೂರಪ್ಪನ ನರಕಸದೃಶ ಸರ್ಕಾರದಿಂದ ಬದುಗಡೆ ಪಡೆಯೋದಕ್ಕೆ ಯಾವುದಾದ್ರು ಕಾರ್ಯಕ್ರಮ ಇದ್ರೆ ಹಾಯ್ಕೋಳಿ, ಗೊತ್ತಾಯ್ತ?"

"ಕೇಳಿಸ್ತಯಿಲ್ಲ, ಜೋರಾಗಿ ಮಾತನಾಡಿ."


"ಥೂತ್ತೇರಿ!!!"

ಉಡುಪಿ ಗ್ರಾಮ ರಾಜ್ಯ ರಗಳೆ


ಟಿಕೆಟ್‌ಗಾಗಿ ತರಹೇವಾರಿ ತರಲೆ-ಟ್ಯಾಕ್ಟೀಸ್ ಶುರು


ಉಡುಪಿ ಜಿಲ್ಲೆಯ ಗ್ರಾಮ ರಾಜ್ಯ ಅಖಾಡ ಮೆಲ್ಲಗೆ ಹದಗೊಳ್ಳುತ್ತಿದೆ. ಹಠಾತ್ ಬಂದೆರಗಿದ ಜಿಪಂ-ತಾಪಂ ಚುನಾವಣೆ ದೊಡ್ಡ ಪುಢಾರಿಗಳು ಮತ್ತವರ ಟಿಕೆಟ್ ಆಕಾಂಕ್ಷಿ ಹಿಂಬಾಲಕರನ್ನು ಒಟ್ಟೊಟ್ಟಿಗೆ ಬೆಚ್ಚಿ ಬೀಳಿಸಿದೆ! ಮೀಸಲಾತಿ ಗೊಂದಲ, ಕೋರ್ಟ್ ಕಟ್ಟೆಯೇರಿದ್ದ ರಿಸರ್ವೇಷನ್ ರಗಳೆ, ಭ್ರಷ್ಟ ಬಿಜೆಪಿ ಸರ್ಕಾರದ ಹೊಯ್ದಾಟದಿಂದಾಗಿ ಜಿಪಂ-ತಾಪಂ ಚುನಾವಣೆ ನಡೆಯುತ್ತದೋ, ಇಲ್ಲವೋ ಎಂಬ ಕನ್‌ಫ್ಯೂಸನ್‌ನಲ್ಲಿದ್ದ ಅಷ್ಟೂ ಪಕ್ಷದ ಪರಾಕ್ರಮಿಗಳೀಗ ಅವಸರವಸರವಾಗಿ ಬಗೆಬಗೆಯ ವೇಷ ಕಟ್ಟುತ್ತಿದ್ದಾರೆ.

ಹೇಳಿ-ಕೇಳಿ ಉಡುಪಿ ಸಂಘಪರಿವಾರದ ಅಮಾನುಷ









ಆಟಗಳ ಆಡಂಬೊಲವೇನೋ ನಿಜ. ಆದರೆ ಈ ಚೆಡ್ಡಿ-ಭಜರಂಗಿ ಪಡೆಗೆ ಪ್ರತಿರೋಧ ಒಡ್ಡುವ ಅದಕ್ಕಿಂತಲೂ ದೊಡ್ಡದಾದ ಮಾನವತಾವಾದಿ ಸೆಕ್ಯುಲರ್ ತಂಡವೂ ಜಿಲ್ಲೆಯಲ್ಲಿದೆ! ಹೀಗಾಗಿ ಹರಾಮಿ ಹಿಂದೂತ್ವದ ಅಜೆಂಡಾದಿಂದ ಎಂಪಿ-ಎಮ್ಮೆಲ್ಲೆಗಳನ್ನು ಗೆಲ್ಲಿಸಿಕೊಂಡಷ್ಟು ಸುಲಭವಾಗಿ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಪಾರುಪತ್ಯ ನಡೆಸಲಾಗುತ್ತಿಲ್ಲ ಬಿಜೆಪಿಗೆ. ಜಿಲ್ಲೆಯಲ್ಲಿ ಬಿಜೆಪಿ-ಕಾಂಗ್ರೆಸ್ ಸಮಬಲದಲ್ಲಿವೆ.

ಹೇಗಾದರೂ ಮಾಡಿ ಜಿಪಂ-ತಾಪಂ ಗದ್ದುಗೆ ವಶಪಡಿಸಿಕೊಳ್ಳುವ ಹಠಕ್ಕೆ ಅನಿವಾರ್ಯವಾಗಿ ಕಾಂಗ್ರೆಸ್-ಬಿಜೆಪಿ ಮುಖಂಡ ಮಣಿಗಳು ಬಿದ್ದಿದ್ದಾರೆ. ಈ ಎರಡು ಸ್ಥಳೀಯ ಆಡಳಿತ ವಶಪಡಿಸಿಕೊಂಡರೆ ಮುಂದಿನ ಅಸೆಂಬ್ಲಿ ಚುನಾವಣೆಗೆ ಅನುಕೂಲವೆಂಬ ಲೆಕ್ಕಾಚಾರ ಬಿಜೆಪಿ-ಕಾಂಗ್ರೆಸ್‌ನ ಎಮ್ಮೆಲ್ಲೆ ಕನಸುಗಾರರದು. ಆದರೆ ಎರಡೂ ಪಕ್ಷಕ್ಕೆ ಟಿಕೆಟ್ ಹಂಚಿಕೆಯೇ ದೊಡ್ಡ ತಲೆನೋವಿನ ಸಂಗತಿಯಾಗಿದೆ. ಯಡ್ಡಿ ಸರ್ಕಾರದ ಭ್ರಷ್ಟಾಚಾರ-ಭಂಡಾಟದಿಂದ ಬಿಜೆಪಿಗಳು-ಭಜರಂಗಿಗಳು ಜನರಿಗೆ ಮುಖ ತೋರಿಸುವ ಸ್ಥಿತಿಯಲ್ಲಿಲ್ಲ; ಆಗಿರುವ ಡ್ಯಾಮೇಜ್ ಅನ್ನು ದುಡ್ಡಿಂದ ಕಂಟ್ರೋಲ್ ಮಾಡುವ ತಾಕತ್ತುವಂತರನ್ನು ಕ್ಯಾಂಡಿಡೇಟಾಗಿಸಲು ಚೆಡ್ಡಿ-ಕಾವಿ ಬಳಗ ತಲಾಶ್ ನಡೆಸಿದೆ.

ಕಾಂಗ್ರೆಸ್‌ನಲ್ಲಿ ಆಕಾಂಕ್ಷಿಗಳ ನೂಕುನುಗ್ಗಲು ಟಿಕೆಟ್ ಕೊಡುವವರ ಕಂಗೆಡಿಸಿದೆ. ಅಚ್ಚರಿಯ ಸಂಗತಿಯೆಂದರೆ, ಕಾಗೆಯಂತೆ ಸದಾ ಕಚ್ಚಾಡುತ್ತಿದ್ದ ಕಾಂಗ್ರೆಸ್‌ನ ಆಸ್ಕರ್ ಫರ್ನಾಂಡಿಸ್, ವೀರಪ್ಪ ಮೊಯ್ಲಿ ವಿನಯಕುಮಾರ್ ಸೊರಕೆ, ಜಯಪ್ರಕಾಶ್ ಹೆಗ್ಡೆ ಮತ್ತು ಪ್ರಮೋದ್ ಮಧ್ವರಾಜ್‌ಗಳು ಅಪರೂಪಕ್ಕೆ ದೋಸ್ತಿ ಮಾಡಿಕೊಂಡಿದ್ದಾರೆ. ಇದು ಕಾಂಗ್ರೆಸ್ ಕಾರ್ಯಕರ್ತರಿಗೆ ಶುಭ ಸಂದೇಶ ರವಾನಿಸಿದೆಯಷ್ಟೇ ಅಲ್ಲ ಜಿಪಂ-ತಾಪಂ ಮೆಂಬರಿಕೆಯ ಆಸೆ ಹೆಚ್ಚಿಸಿ ಟಿಕೆಟ್ ಕಸರತ್ತಿಗಿಳಿಸಿಬಿಟ್ಟಿದೆ. ಎಚ್ಚರಿಕೆಯಿಂದ, ಯಾವುದೇ ಪೂರ್ವಾಗ್ರಹವಿಲ್ಲದೆ ಆಸ್ಕರ್-ಮೊಯ್ಲಿ-ಜಯಪ್ರಕಾಶ್ ಹೆಗ್ಡೆಗಳು ಟಿಕೆಟ್ ಹಂಚಿದರೆ ಕಾಂಗ್ರೆಸ್ ಗೆಲ್ಲುವುದು ಕಷ್ಟವಲ್ಲ, ಕುಂದಾಪುರದ ಎಮ್ಮೆಲ್ಸಿ ಪ್ರತಾಪ ಚಂದ್ರ ಶೆಟ್ಟಿಯ ಅಧಿಕಪ್ರಸಂಗಕ್ಕೆ ಆಸ್ಕರ್ ಬ್ರೇಕ್ ಹಾಕದಿದ್ದರೆ ಒಂದಿಷ್ಟು ತೊಂದರೆ ಖಂಡಿತ.

ಬಿಜೆಪಿಯಲ್ಲಿ ಛಾನ್ಸ್ ಕೊಟ್ಟರೆ ಜಾತಿ-ಧರ್ಮದ ಕರ್ಮ ಬಳಸಿಕೊಂಡು ಗೆಲ್ಲಬಹುದೆಂದು ಸಂಘ ಪರಿವಾರದ ಸೂತ್ರಧಾರರು ಚಿಂತನ-ಮಂಥನ ನಡೆಸಿದ್ದಾರೆ. ಹೇತ್ಲಾಂಡಿ ಮಂತ್ರಿ ಆಚಾರ್ಯ, ಖತರ್‌ನಾಕ್ ಸ್ಟ್ರೇಟಜಿಸ್ಟ್ ಎ.ಜಿ. ಕೊಡ್ಗಿ, ಭಜರಂಗಿ ಸುನಿಲ್‌ಕುಮಾರ್, ಮಠದಿಯನ್ನೇ ಮುಗಿಸಿದ ಮಸಲತ್ತುಗಾರ ರಘುಪತಿ ಭಟ್ಟ ವಗೈರೆ ಚೆಡ್ಡಿ ಚಮತ್ಕಾರಿಗಳು ಅಭ್ಯರ್ಥಿ ಆಯ್ಕೆಗೆ ತಿಪ್ಪರಲಾಗ ಹಾಕುತ್ತಿದ್ದಾರೆ. ಅದೇನೇ ಮಾಡಿದರೂ ಗ್ರಾಸ್ ರೂಟ್ ಲೆವೆಲ್‌ನಲ್ಲಿ 'ಸಮರ್ಥ' ಹುರಿಯಾಳುಗಳೇ ಈ ಬ್ರಾಹ್ಮಣಶಾಹಿಗಳಿಗೆ ಸಿಗುತ್ತಿಲ್ಲ, ಮಹಿಳಾ ಮೀಸಲಾತಿ, ಇತರ ಜಾತಿ ಮೀಸಲಾತಿಯಿಂದಾಗಿಯೇ ಪಕ್ಷಕ್ಕೆ ಈ ದುರ್ಗತಿ ಬಂದಿದೆ ಎಂದು ಸಂಘಪರಿವಾರದ ಸರದಾರರು ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ!

ಒಟ್ಟಿನಲ್ಲಿ ಎದುರಾಳಿ ಪಕ್ಷಗಳಾದ ಕಾಂಗ್ರೆಸ್-ಬಿಜೆಪಿಗಳು ತಂತಮ್ಮ 'ಸಿದ್ಧಾಂತ'ಕ್ಕೆ ತಕ್ಕಂತೆ ಅಳೆದು-ಸುರಿದು ಗೆಲ್ಲುವ ಕುದುರೆಗಳ ಕಣಕ್ಕಿಳಿಸಲು ಕಸರತ್ತು ಮಾಡುತ್ತಿವೆ. ಉಡುಪಿ ಜಿಪಂನಲ್ಲಿರುವುದು 25 ಕ್ಷೇತ್ರ. ಇದು ಮಹಿಳೆಯರಿಗೆ ಮೀಸಲಾಗಿದೆ. ಹಾಗಾಗಿ ಗಟ್ಟಿಗಿತ್ತಿಯರಿಗಾಗಿ ಬಿಜೆಪಿ-ಕಾಂಗ್ರೆಸ್ ಯಜಮಾನರು ಹುಡುಕಾಟ ನಡೆಸಿದ್ದಾರೆ. ಮಹಿಳಾ ಮೀಸಲಾತಿಯಿಂದಾಗಿ ಹಲವು ಹಳೆ ಜಿಪಂ ಹುಲಿಗಳು ಬಿಲ ಸೇರಬೇಕಾಗಿ ಬಂದಿದೆ. ಕೆಲವೆಡೆ ಈ ಹುಲಿಗಳ ಹೆಂಡತಿಯರನ್ನು ಕಣಕ್ಕಿಳಿಸುವ ತಯಾರಿಯೂ ನಡೆದಿದೆ.

ಕುಂದಾಪುರ ತಾಲ್ಲೂಕಲ್ಲಿ ಎರಡು ಅಸೆಂಬ್ಲಿ ಕ್ಷೇತ್ರಗಳಿವೆ. ಬೈಂದೂರು ಮತ್ತು ಕುಂದಾಪುರದಲ್ಲಿ ಒಂಭತ್ತು ಜಿಪಂ ಸೀಟುಗಳಿವೆ. ಇದರಲ್ಲಿ ನಾಲ್ಕು ಮಹಿಳೆಯರಿಗೆ ಮತ್ತೊಂದು ಅನುಸೂಚಿತ ಜಾತಿಗೆ ಮೀಸಲಿಡಲಾಗಿದೆ. ಹೀಗಾಗಿ ಜಿಪಂನ ಗೂಟದ ಕಾರಿನ ರುಚಿ ಕಂಡಿರುವ ರಾಜೂ ಪೂಜಾರಿಯಂಥ ದಗಲುಬಾಜಿ ಧೀರರಿಗೆ ಛಾನ್ಸ್ ಇಲ್ಲದಾಗಿದೆ. ಬೈಂದೂರು-ಕುಂದಾಪುರದಲ್ಲಿ ಜಿಪಂ ಇಂಜೆಕ್ಷನ್ ಇರುವುದು ಬೈಂದೂರಿನ ಮಾಜಿ ಎಮ್ಮೆಲ್ಲೆ-ಹಾಲಿ ಡಿಸಿಸಿ ಅಧ್ಯಕ್ಷ ಗೋಪಾಲ ಪೂಜಾರಿ ಎಂಬ ಸುಖಸಾಗರ್ ಹೋಟೆಲ್ ದೊರೆ ಮತ್ತು 'ಕೇಸರಿನ ಕಮಲ' ಎಂಬ ಅಭಿದಾನದ ಬಿಜೆಪಿ ಶಾಸಕ-ಕುಂದಾಪುರದ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಮಧ್ಯವಷ್ಟೇ!

ಕಳೆದ ಬಾರಿ ಎಲ್ಲ ಬೈಂದೂರು ಭಾಗದ ಜಿಪಂ ಸೀಟುಗಳನ್ನು ಗೋಪಾಲಪೂಜಾರಿ ಕಾಂಗ್ರೆಸ್ ಮಡಿಲಿಗೆ ಹಾಕಿಸಿದ್ದರು. ನಾಮಪತ್ರ ತುಂಬುವಾಗ ಆದ ಗೊಂದಲದಿಂದ 'ಹಸ್ತ'ದ ಚಿಹ್ನೆ ಸಿಗದಿದ್ದರೂ ಕಾಂಗ್ರೆಸ್ಸಿಗರ ಗೆಲ್ಲಿಸಿದ ಕೀರ್ತಿ ಈ ಕಳ್ಳ ಮೂರ್ತಿಯದು. ಈ ಬಾರಿ ಆತ ಡಿಸಿಸಿ ಅಧ್ಯಕ್ಷನಾಗಿರುವುದರಿಂದ ಮತ್ತು ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿಯ 'ಬಿಲ್ಡರ್ ಅಜ್ಜ' ಲಕ್ಷ್ಮೀನಾರಾಯಣರ ಎದುರು ಸೋತಿರುವುದರಿಂದ ಆತ ಜಿಪಂ ಇಲೆಕ್ಷನ್‌ನಲ್ಲಿ ಸಾಧನೆ ಮಾಡಲೇಬೇಕಾಗಿದೆ. ಮುಂದೆ ಎಮ್ಮೆಲ್ಲೆ ಆಗಬೇಕೆಂದರೆ ಇದು ಗೋಪಾಲ ಪೂಜಾರಿಗೆ ಅನಿವಾರ್ಯ.


ಬೈಂದೂರು ಭಾಗದ ಜನರ ಮೂಡು ನೋಡಿದರೆ ಬಿಜೆಪಿ ಬಗ್ಗೆ ಬೇಸರ ಬಂದಿರುವುದು ಕಾಣಿಸುತ್ತಿದೆ. 'ಸಿಡಿಮಿಡಿ ಮುದುಕ'ನೆಂದೇ ಪ್ರಖ್ಯಾತನಾಗಿರುವ ಶಾಸಕ ಲಕ್ಷ್ಮೀನಾರಾಯಣರನ್ನು ಕಂಡರೆ ಜನರಿಗೆ ಏನೋ ಒಂಥರಾ ಅಲರ್ಜಿ-ಬಿಜೆಪಿ ಕಾರ್ಯಕರ್ತರ ಕೈಗೇ ಸಿಗದ ಈ ಶಾಸಕ ಸಾಹೇಬರಿಗೆ ಬುದ್ಧಿ ಕಲಿಸಲು ಚೆಡ್ಡಿಗಳು ರೆಡಿಯಾಗಿದ್ದಾರೆ. ಬೆಂಗಳೂರಲ್ಲೇ ಹೆಚ್ಚುಕಾಲ ಕಳೆದ ಲಕ್ಷ್ಮಿನಾರಾಯಣ ಬೈಂದೂರು ಜನರ ಪಾಲಿಗೆ ಇದ್ದೂಇಲ್ಲದ ಶಾಸಕ! ಜತೆಗೆ ಕ್ಷೇತ್ರದಲ್ಲಿ ಬಿಲ್ಲವರೇ ಹೆಚ್ಚಿದ್ದಾರೆ. ಇದು ಕಾಂಗ್ರೆಸ್‌ನ ಗೋಪಾಲ ಪೂಜಾರಿಗೆ ಅನುಕೂಲಕರವಾಗಿದೆ. ಶಿವಮೊಗ್ಗ ಎಂಪಿ ರಾಘವೇಂದ್ರನ ಕ್ಷೇತ್ರವ್ಯಾಪ್ತಿಗೆ ಈ ಬೈಂದೂರು ಬಂದರೂ ಭೂಭಾನಗಡಿಯಿಂದ ಆತ ಜನರ ಬಳಿ ಹೋಗುವ ಸ್ಥಿತಿಯಲ್ಲಿಲ್ಲ; ಹೋದರೂ ಬಿಜೆಪಿಗೆ ಲಾಭಕ್ಕಿಂತ ಹಾನಿಯೇ ಹೆಚ್ಚು

ಕುಂದಾಪುರಕ್ಕೆ ಬಂದರೆ, ಜಿಪಂ-ತಾಪಂಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗಿಂತ ಬಿಜೆಪಿ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಮತ್ತು ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆಗಳ ಇಮೇಜೇ ಅಂತಿಮವಾಗಿ ಪರಿಣಾಮ ಬೀರಲಿದೆ. ತಮಾಷೆಯೆಂದರೆ, ಯಾರ ವಿರುದ್ಧ ನಿಂತರೂ ಗೆದ್ದು ಶಾಸಕನಾಗುವ ಹಾಲಾಡಿಗೆ ಜಿಪಂ-ತಾಪಂ ಸದಸ್ಯರನ್ನು ಆಯ್ಕೆ ಮಾಡಿ ತರುವ ತಾಕತ್ತಿಲ್ಲ; ಹಾಗೆಯೇ ಹಾಲಾಡಿ ಎದುರು ಸೋತಿರುವ ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆ ಜಿಪಂ-ತಾಪಂ ಎಲೆಕ್ಷನ್ ಕಿಂಗ್. ತನ್ನ ಹಿಂಬಾಲಕರನ್ನು ಗೆಲ್ಲಿಸುವ ತಂತ್ರಗಾರಿಕೆ ಬೇರು ಮಟ್ಟದ ಜನ ಸಂಪರ್ಕ ಇರುವಾತ. ಜನಪರ ಕೆಲಸಗಾರರು, ಹಾಲಾಡಿಯದ್ದು ಕೆಲಸಕ್ಕೆಬಾರದ ಒಳ್ಳೆತನವಷ್ಟೇ. ಕೊನೆಗಳಿಗೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಮೂರು ತಿಂಗಳಿಂದ ತಯಾರಿ ಮಾಡಿಕೊಂಡಿದ್ದ ಬಿಜೆಪಿಯ ಸದಾನಂದ ಗೌಡರಿಗೇ ನೀರು ಕುಡಿಸಿ ಸಣ್ಣ ಅಂತರದಲ್ಲಿ ಪಾರ್ಲಿಮೆಂಟ್ ರೈಲು ತಪ್ಪಿಸಿಕೊಂಡ 'ಸಾಧನೆ' ಹೆಗ್ಡೆಯದು. ಈ ಹೆಗ್ಡೆ ಸರಿಯಾಗಿ ಕೆಲಸ ಮಾಡಿದರೆ ಕುಂದಾಪುರದಿಂದ ಉಡುಪಿ ತುದಿ ತನಕ ಕಾಂಗ್ರೆಸ್ ಬಾವುಟ ಹಾರಿಸಬಲ್ಲ!


ಶಾಸಕ ರಘುಪತಿ ಭಟ್ಟನ ಭ್ರಷ್ಟಾಚಾರ-ಭಂಡಾಟ -ರಸಿಕತೆ- ಹೆಂಡತಿ ಕೊಂದ ಪಾಪದಿಂದ ಬಿಜೆಪಿ ಉಡುಪಿಯಲ್ಲಿ ಬಣ್ಣಗೆಟ್ಟು ಕೂತಿದೆ! ಭಟ್ಟನ ಹಣಿಯಲು ಪ್ರಮೋದ್ ಮಧ್ವರಾಜ್ ಮತ್ತು ಜಯಪ್ರಕಾಶ್ ಹೆಗ್ಡೆ ಒಂದಾಗಿ ಕಾಂಗ್ರೆಸ್ ಕ್ಯಾಂಡಿಡೇಟ್‌ಗಳನ್ನು ಆರಿಸುತ್ತಿದ್ದಾರೆ. ಪ್ರಮೋದ್ ಬೆನ್ನಿಗೆ ಹಿರಿಯಡ್ಕದಂಥ ಏರಿಯಾದಲ್ಲಿ ಆತನ ತಾಯಿ-ಮಾಜಿ ಎಂಪಿಯಾದ ಮನೋರಮಾ ಮಧ್ವರಾಜ್ ಪಟಾಲವನ್ ನಿಂತಿರುವುದು ಬಿಜೆಪಿಗೆ ಹಾನಿ ಮಾಡಿದೆ. ಇದಕ್ಕೆ ಸಮಾನಾಂತರವಾಗಿ ಬಿಜೆಪಿ ಭಟ್ಟ ಉಡುಪಿಯ ಆರು ಜಿಪಂ ಕ್ಷೇತ್ರ-ತಾಪಂ ಕ್ಷೇತ್ರದಲ್ಲಿ ತನ್ನ ಅನುಯಾಯಿಗಳಿಗೇ ಛಾನ್ಸ್ ಕೊಡಲು ಕರಾಮತ್ತು ನಡೆಸುತ್ತಿದ್ದಾನೆ. ಇದು ಮಂತ್ರಿ ಆಚಾರ್ಯ ಹಾಗೂ ಜಿಲ್ಲಾ ಬಿಜೆಪಿ ಅಧ್ಯಕ್ಷ ಉದಯಕುಮಾರ್ ಶೆಟ್ಟಿ ಬಳಗದ ಕಣ್ಣು ಕೆಂಪಾಗಿಸಿದೆ.

ಭಟ್ಟ ತನ್ನ ಭ್ರಷ್ಟ ಚೇಲಾ-ಮಾಜಿ ಜಿಪಂ ಸದಸ್ಯ ಬಿ.ಕೆ. ಹೆಗಡೆ ಸೂಚಿಸಿದವರಿಗೆ ಟಿಕೆಟ್ ಕೊಡಲು ನಿರ್ಧರಿಸಿದ್ದಾರೆ. ಮೊದಲೇ ಬಿ.ಕೆ. ಹೆಗ್ಡೆ ಎಂದರೆ ಮೂಗು ಮುರಿವ ಜನರು ಗ್ರಾಪಂ ಎಲೆಕ್ಷನ್ ಹೊತ್ತಲ್ಲಿ ಶಾಸಕ









ಭಟ್ಟು ಕೊಟ್ಟಿರುವ ಬೋಗಸ್ ಭರವಸೆಯಿಂದ ಇನ್ನಷ್ಟು ಕೆರಳಿಕೆಂಡವಾಗಿದ್ದಾರೆ. ಕಾಂಗ್ರೆಸ್ ಈ ಕ್ಷೇತ್ರದ ಮೂರು ಹೆಸರು ಪರಿಶೀಲಿಸುತ್ತಿದೆ. ಮಾಜಿ ತಾಪಂ ಉಪಾಧ್ಯಕ್ಷೆ ಮಮತಾ ಶೆಟ್ಟಿ, ಮಾಜಿ ತಾಪಂ ಸದಸ್ಯೆ ಡಾ. ಸುನೀತಾ ಶೆಟ್ಟಿ ಮತ್ತು ಜ್ಯೋತಿ ಶೆಟ್ಟಿ ಹೆಸರು ಪ್ರಮೋದ್-ಜಯಪ್ರಕಾಶ್ ಇಟ್ಟುಕೊಂಡು ಸಾಮರ್ಥ್ಯ ತೂಗುತ್ತಿದ್ದಾರೆ. ಇದರಲ್ಲಿ ಜನಪರ ಕಳಕಳಿಯ ಕೆಂಜೂರು ದಯಾನಂದ ಶೆಟ್ಟಿ ಹೆಂಡತಿ ಡಾ. ಸುನೀತಾ ಶೆಟ್ಟಿಯೇ ಬೆಟರ್. ಆಕೆ ಹಿಂದಿನ ಅವಧಿಯಲ್ಲಿ ತಾಪಂ ಸದಸ್ಯೆಯಾಗಿ ಜನರ ನೋವು-ನಷ್ಟಕ್ಕೆ ಸ್ಪಂದಿಸುವುದರ ಜೊತೆ ಒಂದಷ್ಟು ಕೆಲಸ ಮಾಡಿದ್ದಾರೆ. ಆ ದಂಪತಿಗಳು ಕ್ಷೇತ್ರದಲ್ಲೂ ಜನಾನುರಾಗಿಗಳು. ಆಕೆ ಗೆಲ್ಲುವ ಕ್ಯಾಂಡಿಡೇಟ್ ಎಂಬುದು ಕಾಂಗ್ರೆಸ್ ಕಾರ್ಯಕರ್ತರ ತರ್ಕ! ಇದು ಸಾಮಾನ್ಯ ಮಹಿಳಾ ಕ್ಷೇತ್ರ.

ಪೆರ್ಡೂರು ಮಾಜಿ ಜಿಪಂ ಅಧ್ಯಕ್ಷ-ಹಾಲಿ ಮೈಸೂ[ರು] ತಂಬಾಕು ಮಂಡಳಿ ಅಧ್ಯಕ್ಷ ಶಂಕರ ಪೂಜಾರಿ ಕ್ಷೇ[ತ್ರ] ಈತ ಅಧಿಕಾರ ಲಾಲಸೆಯಿಂದ ಬಿಜೆಪಿ ಬ್ರಾಹ್ಮಣರ ಬೋ[...] ಬಿದ್ದು ಒದ್ದಾಡುತ್ತಿರುವ ಮಿಕ! ಕಾಂಗ್ರೆಸ್‌ನಿಂದ ಜಿ[ಪಂ] ಅಧ್ಯಕ್ಷನಾಗಿದ್ದರೂ ಬಿಜೆಪಿಗೆ ಹಾರಿರುವ ಶಂಕರ ಪೂಜಾ[ರಿ] ಬಗ್ಗೆ ಪೆರ್ಡೂರಲ್ಲಿ ಒಳ್ಳೆಯ ಅಭಿಪ್ರಾಯವಿಲ್ಲ, ಅಲ್ಲಿ[...] ಶಾಂತರಾಮ ಸೂಡರೆಂಬ ಬಿಲ್ಲವರ ಪ್ರಭಾವಿ ಮುಖಂಡ[...]ದುರು ಈ ಶಂಕರ ಪೂಜಾರಿಗೆ ಕಿಮ್ಮತ್ತಿಲ್ಲ, ಹಾಗ[...] ಕಾಂಗ್ರೆಸ್‌ನ ಭಟ್ರು ಕ್ಯಾಂಡಿಡೇಟ್ ಲಲಿತಾ ನಾಯ್ಕ, ಗೋ[...] ನಾಯಕ್ ಎದುರು ಗೆಲ್ಲುವುದು ಕಷ್ಟವೇ. ಗೋಪಿ ನಾಯ[ಕ್] ಉಡುಪಿ ಟಿಪಿ ಸದಸ್ಯೆಯಾಗಿ ಜನ ಕ್ಷೇತ್ರಾದಾದ್ಯಂತ ಪರಿಚ[ಯ] ಇರುವಾಕೆ. ಇದು ಅನುಸೂಚಿತ ಮಹಿಳಾ ಮೀಸ[ಲು] ಕ್ಷೇತ್ರ.

ಬ್ರಹ್ಮಾವರದಲ್ಲಿ ಬಿಜೆಪಿಗೆ ಕ್ಯಾಂಡಿಡೇಟೇ ಸಿಗುತ್ತಿ[...] ಭಟ್ಟ ಏನೇ ತಿಪ್ಪರಲಾಗ ಹಾಕಿದರೂ ಶಂಕರ ಪೂಜಾ[ರಿ] ತನ್ನ ಹೆಂಡತಿಯನ್ನು ಇಲ್ಲಿಂದ ಕಣಕ್ಕಿಳಿಸಲು ಒಪ್ಪುತ್ತಿ[...] ಭಟ್ಟ ತಂಬಾಕು ಮಂಡಳಿ ಅಧ್ಯಕ್ಷನಾಗಿದ್ದರೂ ಪಕ್ಷಕ್ಕೆ ಹೇ[...] ಮಾಡದಿದ್ದರೆ ಹುಷಾರ್! ಎಂದು ಶಂಕರ ಪೂಜಾರಿಯನ[್ನು] ಬ್ಲ್ಯಾಕ್‌ಮೇಲ್ ಮಾಡುತ್ತಿರುವ ಸುದ್ದಿಗಳಿವೆ. ಮಾ[ಜಿ] ಸಂಸದ ಸೊರಕೆಯ ಪಿಎ ಆಗಿದ್ದ ಅಶೋಕ ನಾಯ[...] ಸಹೋದರಿ ಸರೋಜಾ ನಾಯರಿಯನ್ನು ಕಾಂಗ್ರೆಸ್‌ನಿಂ[ದ] ಹುರಿಯಾಳಾಗಿಸುವ ಪ್ರಯತ್ನ ನಡೆದಿದೆ.

ಕಲ್ಯಾಣಪುರ ಅನುಸೂಚಿತ ಜಾತಿಯ ಮಹಿಳೆ[ಗೆ] ಮೀಸಲಾಗಿರುವ ಕ್ಷೇತ್ರ. ಇಲ್ಲಿ ಬಿಜೆಪಿ ಕ್ಯಾಂಡಿಡೇಟ[್] ತಾಪಂ ಅಧ್ಯಕ್ಷೆ ಶ್ಯಾಮಲಾ ಸುಧಾಕರ್. ಈಕೆ ಕ್ಷಣಕ್ಷಣ[ಕ್ಕೂ] ಬಣ್ಣ ಬದಲಿಸುವ ಚಟ್ಟಿಯೆಂದೇ ಉಡುಪಿಯಲ್ಲಿ ಸುಪ್ರಸಿ[ದ್ಧಿ] ಹೊಂದಿರುವಾಕೆ. ಹಿಂದೆ ಸಭಾಪತಿ ಶಾಸಕನಾಗಿದ್ದಾ[ಗ] ಕಾಂಗ್ರೆಸ್‌ನಿಂದ ತಾಪಂ ಅಧ್ಯಕ್ಷೆಯಾಗಿದ್ದಳು ಶ್ಯಾಮಲಾ[.] ಆಗ ಆಕೆಯ ಮನೆ ಮೇಲೆ ದಾಳಿ ಮಾಡಿದ್ದ ಬಿಜೆ[ಪಿ] ರೌಡಿಗಳು ಆಕೆಯನ್ನು ಕಾಡಿದ್ದು ಒಂದೆರಡು ಥರವಲ್ಲ[.] ಆದರೂ ಈಕೆ ಲಜ್ಜೆ ಬಿಟ್ಟು ಬಿಜೆಪಿ ಸೇರಿ ತಾಪ[ಂ] ಅಧ್ಯಕ್ಷೆಯಾದವಳು. ಅಧಿಕಾರಕ್ಕೆ ಎಂಥ ಬುರ್ನಾಸ್ ಕೆಲಸಕ್ಕೂ ಮಹಿಳಾಮಣಿ ಹೇಸುವುದಿಲ್ಲ, ಜನರು ಮಾತ್ರ ಈಕೆಯ ಮರಕೋತಿ ಆಟ ನೋಡಿ ರೋಸತ್ತು ಹೋಗಿದ್ದಾರೆ[.] ಭಾಗ್ಯಲಕ್ಷ್ಮಿ ಎಂಬುವರನ್ನು ಕಣಕ್ಕಿಳಿಸಿದರೆ ಹೇಗೆಂದು ಕಾಂಗ್ರೆಸ್ಸಿಗರು ಲೆಕ್ಕ ಹಾಕುತ್ತಿದ್ದಾರೆ. ತಾಪಂ ಸದಸ್ಯೆಯಾದ ಅನುಭವ ಇವರಿಗಿದೆ.

ಉದ್ಯಾವರದಿಂದ ದಿವಾಕರ್ ಕುಂದರ್ ಎಂಬ ಮೊಗ[...] ವೀರ ಮುಖಂಡ ಕಾಂಗ್ರೆಸ್ ಕ್ಯಾಂಡಿಡೇಟಾಗುವುದು ಖಚಿತ[.] ಹಾಲಿ ತಾಪಂ ಸದಸ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಿವಾಕರ್ ಕುಂದರ್ ಸರಳ ಸಜ್ಜನ-ಜನಾನುರಾಗಿ ಯುವಕ. ತಾಪಂ ಸದಸ್ಯನಾಗಿ ಒಂದಿಷ್ಟು ಕೆಲಸವೂ ಮಾಡಿ ಜನರಿಗೆ ನೆರವಾಗಿದ್ದಾರೆ. ಈತನ ಬೆನ್ನಿಗೆ ಬಲಾಢ್ಯ ಪ್ರಮೋದ್ ಮಧ್ವರಾಜ್ ಬೇರೆ ನಿಂತಿದ್ದಾರೆ. ಕಾಂಗ್ರೆಸಿಗಿದು ವಿನ್ನಿಂಗ್ ಕ್ಯಾಂಡಿಡೇಟ್. ಬಿಜೆಪಿಗಿಲ್ಲಿ ಅಭ್ಯರ್ಥಿಯೇ ಸಿಗುತ್ತಿಲ್ಲ ದಿವಾಕರ್ ಎದುರು ಭಟ್ಟ ತಮ್ಮನ್ನು ಹರಕೆ ಕುರಿ ಮಾಡುವ ಭಯ ಬಿಜೆಪಿ ಮರಿ ಲೀಡರ್‌ಗಳನ್ನು ಕಾಡುತ್ತಿದೆ.

'ಹಿರಿಯಡ್ಕ'ದಲ್ಲಿ ಮನೋರಮಾ ಬ್ರಿಗೇಡ್ ಚುರುಕಾಗಿರುವುದು ಬಿಜೆಪಿಯ ಬುಡವನ್ನೇ ಸಡಿಲಾಗಿಸಿಬಿಟ್ಟಿದೆ. ಮನೋರಮಾ ಕಾಂಗ್ರೆಸ್‌ಗೆ ಬರುತ್ತಿದ್ದಂತೆಯೇ ಹಿರಿಯಡ್ಕ ಭಾಗದ ಪ್ರಭಾವಿ ರಮೇಶ್ ಕಾಂಚನ್, ಸುಧೀರ್ ಶೆಟ್ಟಿಗಳು ಪ್ರಮೋದ್ ಜತೆ ಸೇರಿಕೊಂಡಿದ್ದಾರೆ. ಇದರಲ್ಲಿ ಗ್ರಾಪಂ ಸದಸ್ಯ ವಿನೋದ್‌ಕುಮಾರ್ ಎಂಬ ಜನಪ್ರಿಯ ತರುಣನನ್ನು ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡಿಕೊಂಡಿದ್ದಾರೆ. ಇದಕ್ಕೆ ಆಸ್ಕರ್-

ತಾಪಂ ಯಾರ ಪಾಲಿಗೆ?

ಉಡುಪಿ ಜಿಲ್ಲೆಯ ಮೂರು ತಾಲ್ಲೂಕು ಪಂಚಾಯ್ತಿಗಳಲ್ಲೂ ಕಾಂಗ್ರೆಸ್ V/s ಬಿಜೆಪಿ ಮುಖಾಮುಖಿ ಹೋರಾಟ ನಡೆಯಲಿದೆ. ಬಿಜೆಪಿಗಿದು ಅಳಿವುಉಳಿವಿನ ಪ್ರಶ್ನೆ, ಹಾಗಾಗಿ ಹಣದ ಹೊಳೆಯೇ ಹರಿಸುವ ಸ್ಕೆಚ್ ಹಾಕಿಕೊಂಡಿದೆ. ಮಂತ್ರಿ ಆಚಾರ್ಯ-ಶಾಸಕ ಭಟ್ಟ ಮತ್ತು ಲಕ್ಷ್ಮಿನಾರಾಯಣ ಯುವ ಬಿಜೆಪಿ ರಾಜ್ಯಾಧ್ಯಕ್ಷ ಸುನಿಲ್‌ಕುಮಾರ್ ಧರ್ಮ ಜಾತಿ-ಹಣ ತ್ರಿವಿಧ ತರಲೆಯಿಂದ ಕಾರ್ಕಳದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗುತ್ತಿದ್ದಾನೆ. ಕಾಂಗ್ರೆಸ್‌ನ ಎಐಸಿಸಿ ಮಾಂಡೀಲಕ ಆಸ್ಕರ್-ಪ್ರಮೋದ್ ಮಧ್ವರಾಜ್-ಜಯಪ್ರಕಾಶ್ ಹೆಗ್ಡೆ-ಶಾಸಕ ಗೋಪಾಲ ಭಂಡಾರಿ ಮತ್ತು ಡಿಸಿಸಿ ಅಧ್ಯಕ್ಷ ಗೋಪಾಲ ಪೂಜಾರಿ ಮೈ ಛಳಿ ಬಿಟ್ಟು ಟವಲು ಕುಡಗಿ ಕಣಕ್ಕೆ ಧುಮುಕಿದ್ದಾರೆ.

ಸದ್ಯದ ಸ್ಥಿತಿಯಲ್ಲಿ ಕುಂದಾಪುರ ತಾಪಂ ಕಾಂಗ್ರೆಸ್ ವಶವಾಗುವ ಸಾಧ್ಯತೆ ಕಾಣಿಸುತ್ತಿದೆ. ಉಡುಪಿ ಮತ್ತು ಕಾರ್ಕಳದಲ್ಲಿ ಕಾಂಗ್ರೆಸ್-ಬಿಜೆಪಿಗೆ ಸಮಾನ ಅವಕಾಶವಿದೆ. ಒಟ್ಟಿನಲ್ಲಿದು ಹಣದ ಹಣಾಹಣಿಯಾಗುವ ಕೆಟ್ಟ ಸೂಚನೆ ಬಿಜೆಪಿಯಿಂದ ರವಾನೆಯಾಗುತ್ತಿದೆ!

ಪ್ರಮೋದ್‌ಗಳ ಸಿಂಧುತ್ವವೂ ಸಿಕ್ಕಿದೆ. ವಿನೋದ್ ಕಾಂಗ್ರೆಸ್ ಕ್ಯಾಂಡಿಡೇಟಾಗುವ ಸುದ್ದಿ ಕೇಳಿಯೇ ಶಾಸಕ ಭಟ್ಟನ ಭಜರಂಗಿ ಭಂಡ-ಭ್ರಷ್ಟ ಜಿಪಂ ಸದಸ್ಯ ಉಪೇಂದ್ರ ನಾಯಕ್ ಕಂಗಾಲಾಗಿ ಹೋಗಿದ್ದಾನೆ. ಮತಾಂಧ ಮಸಲತ್ತು ಬಿಟ್ಟರೆ ಈತ ಜಿಪಂ ಸದಸ್ಯನಾಗಿ ಮಾಡಿದ್ದು ಬರೀ ಸ್ವಾಹಾ ಮಾತ್ರ. ಈ ಬಾರಿ ರಾಜಪೂತ ಸಾರಸ್ವತ ಬ್ರಾಹ್ಮಣ ಮನೆ ಸೇರುವ ಸಾಧ್ಯತೆ ನಿಚ್ಚಳವಾಗಿ ಗೋಚರಿಸುತ್ತಿದೆ.

ಕಾಪು ಕ್ಷೇತ್ರದ ಕಾಂಗ್ರೆಸ್ ಕ್ಯಾಂಡಿಡೇಟಗೆ ಗುದುಮುರಿಗೆ ನಡೆದಿದೆ. ಮಾಜಿ ಸಚಿವ-ಜನರಿಗಾದ ವಸಂತ ಸಾಲಿಯಾನರ ಆಳಿಮಯ್ಯ ಗಂಗಾಧರ ಸುವರ್ಣ ಮತ್ತು ಸಾಲಿಯಾನರ ದುಶತ್ರು ತಾಪಂ ಸದಸ್ಯ ನಾರಾಯಣ ಪೂಜಾರಿ ನಡುವೆ ಟಿಕೆಟ್‌ಗೆ ಪೈಪೋಟಿ ನಡೆದಿದೆ. ಈ ಗಂಗಾಧರ ಸುವರ್ಣ ನೂವ ಮಂತ್ರಿಯಾಗಿದ್ದಾಗ ಮಾಡಿದ ಭಾನಗಡಿಗಳನ್ನು ಜನರಿನ್ನೂ ಮರೆತಿಲ್ಲ. ಇದರಿಂದಾಗಿಯೇ ಕಾಂಗ್ರೆಸ್‌ಗೆ ಫೇವರ್ ಇರುವ ಕ್ಷೇತ್ರವಾದರೂ ಎರಡನೇ ಬಾರಿಯೂ ಸಾಲಿಯಾನ್ ಸೋತಿದ್ದಾರೆ. ಇನ್ನು ಸುವರ್ಣ ಜಿ.ಪಂ. ಸದಸ್ಯ ಆಗುವುದು ಸಾಧ್ಯವಾ? ನಾರಾಯಣ ಪೂಜಾರಿ ಬಗ್ಗೆ ಕ್ಷೇತ್ರದಲ್ಲಿ ಒಲವಿದೆ. ತುಂಬ ಚುರುಕಾದ ವ್ಯಕ್ತಿತ್ವದ ಪೂಜಾರಿ ಗೆಲ್ಲುವುದು ಕಷ್ಟವೇನಲ್ಲ. ಆದರೆ ಆತನಿಗೆ ಟಿಕೆಟ್ ಸಿಗದಂತೆ ಮಾಡಲು ಸಾಲಿಯಾನ್ ತನ್ನ ದೊಡ್ಡ (ಮಾಜಿ) ಲಿಂಕ್ಸ್‌ಗಳನ್ನು ಬಳಸುತ್ತಿದ್ದಾರೆ. ಬಿಜೆಪಿ ಕ್ಯಾಂಡಿಡೇಟ್‌ಗಾಗಿ ತಡಕಾಡುತ್ತಿದೆ.

ಪಡುಬಿದ್ರಿ ಕ್ಷೇತ್ರ ಸಾಮಾನ್ಯ ಮಹಿಳೆಯದು. ಇಲ್ಲಿಂದ ಕಾಂಗ್ರೆಸ್ ಹಾಲಿ ಜಿಪಂ ಸದಸ್ಯೆ-ಮಾಜಿ ಜಿಪಂ ಅಧ್ಯಕ್ಷೆ ಸರಸು ಬಂಗೇರಾರನ್ನು ಕಣಕ್ಕಿಳಿಸಲಿದೆ. ಈಕೆ ಒಳ್ಳೆಯ ಲೀಡರ್; ಕೆಲಸಗಾರ್ತಿ. ಜನ ಬೆಂಬಲವೂ ಇದೆ. ಆದರೆ ಮಾಜಿ ಮಂತ್ರಿ ಸಾಲಿಯಾನ್‌ಗೆ ಈಕೆಯು ಕಂಡರಾಗದು. ಇದನ್ನೇ ಬಳಸಿಕೊಂಡು ಪಡುಬಿದ್ರಿಯಲ್ಲಿ ಗೆಲ್ಲಲು ಶಾಸಕ ಭಟ್ರು ಬಿಲ್ಲವರ ಹೆಂಗಸರನ್ನೇ ಹುಡುಕುತ್ತಿದ್ದಾರೆ. ಆದರೆ ಸರಸು ಎದುರು ಸೋಲು ಖಂಡಿತವೆಂದು ಬಿಜೆಪಿ ಅಭ್ಯರ್ಥಿಯಾಗಲು ಹೆದರುವವರೇ ಭಟ್ರು ಹೋದಲೆಲ್ಲ ಸಿಗುತ್ತಿದ್ದಾರೆ. 'ಬೆಳ್ಮಣ್'ದಿಂದ ಮಾಜಿ ಜಿಪಂ ಉಪಾಧ್ಯಕ್ಷೆ ರೆಮಿಡಿಯಾ ಡಿಸೋಜಾ ಕಾಂಗ್ರೆಸ್‌ನಿಂದ ಸ್ಪರ್ಧಿಸಲಿದ್ದಾರೆ. ಸಮಾಜ ಸೇವಕಿಯಾದ ಈಕೆಯ ಬಗ್ಗೆ ಒಳ್ಳೆಯ ಭಾವನೆಯಿದೆ. ಹೀಗಾಗಿ ಆಕೆಯೆದುರು ಬಿಜೆಪಿ ಯಾರನ್ನೇ ನಿಲ್ಲಿಸಿದರೂ ಗೆಲ್ಲುವುದು ಕಷ್ಟ. ಸದ್ಯಕ್ಕಂತೂ ಬಿಜೆಪಿಗೆ ಉಮೇದುವಾದರೇ ಸಿಕ್ಕಿಲ್ಲ.

ಹಿಂದುಳಿದ 'ಬಿ' ವರ್ಗದ ಮಹಿಳಾ ಮೀಸಲು ಕ್ಷೇತ್ರ ಶಿರ್ವ ಉಡುಪಿ ಜಿಲ್ಲೆಯಲ್ಲೇ ತೀವ್ರ ಕುತೂಹಲ ಕೆರಳಿಸಿದೆ. ಜಿಪಂನ ಗ್ಲಾಮರಸ್ ತಾರೆ ಗ್ಲಾಡೀಸ್ ಅಲ್ಮೇಡಾರ ಪಕ್ಷಾಂತರದಿಂದ ಈ ಕ್ಷೇತ್ರದ ಪ್ರತಿಷ್ಠೆಯೂ ಹೆಚ್ಚಿದೆ. ಕಾಂಗ್ರೆಸ್‌ನಲ್ಲಿ ಎದ್ದು ಕಾಣುತ್ತಿದ್ದ ಗ್ಲಾಡೀಸ್ ಕಳೆದ ಜಿಪಂ ಎಲೆಕ್ಷನ್ ಹೊತ್ತಲ್ಲಿ ಮಾಜಿ ಮಂತ್ರಿ ಸಾಲಿಯಾನ್ ಮೇಲಿನ ಸಿಟ್ಟಿಂದ ಬಿಜೆಪಿಗೆ ಹಾರಿ ಗೆದ್ದಿದ್ದಳು. ಅಲ್ಲಿ ಜಿಪಂ ಅಧ್ಯಕ್ಷತೆ ಕೊಡಲಿಲ್ಲವೆಂದು ಕಾಂಗ್ರೆಸ್‌ಗೆ ಹಾರಿ ಜಿಪಂ ಅಧ್ಯಕ್ಷೆಯೂ ಆಗಿಹೋಗಿದ್ದಳು. ಈಗ ತನಗೆ ಶಿರ್ವದಲ್ಲಿ ಕಾಂಗ್ರೆಸ್ ಟಿಕೆಟ್ ಸಿಗಲಾರದೆಂದು ಭಾವಿಸಿ ಬಿಜೆಪಿಗೆ ಮತ್ತೆ ಹೋಗಿದ್ದಾಳೆ. "ನನ್ನ ಮೇಲಿರೊ ಕೇಸನ್ನೆಲ್ಲ ಬಿಜೆಪಿಯವ್ರು ವಾಪಾಸ್ ತಗೊಂಡಿದ್ದಾರೆ... ಅದ್ಕೆ ಬಿಜೆಪಿ ಸೇರಿದ್ದೇನೆ" ಎಂದು ಕ್ರಿಶ್ಚಿಯನ್ ಹೆಂಗಸು ಹೇಳುವಾಗ ಜನ ಬಿದ್ದುಬಿದ್ದು ನಗುತ್ತಿದ್ದಾರೆ. ಚರ್ಚ್ ಮೇಲೆ ದಾಳಿ ಮಾಡುವ ಬಿಜೆಪಿಯಿಂದ ಈ ಗ್ಲಾಡೀಸ್ ಎಲ್ಲೇ ನಿಂತರೂ ಗೆಲ್ಲೋದು ಕಷ್ಟ. ಆಕೆಯ ಐಲಾಟ ಕಂಡವರೂ ಓಟು ಕೊಡಲಾರರು. ಬಿಜೆಪಿಯ ಗ್ಲಾಡೀಸ್ ಎದುರು ಕಾಂಗ್ರೆಸ್‌ನಿಂದ ಲೀನಾ ಮಥಾಯಿಸ್ ಅಖಾಡಕ್ಕೆ ಧುಮುಕಲಿದ್ದಾರೆಂದು ಕಾಂಗ್ರೆಸ್ ಬಿಡಾರದಲ್ಲಿ ಗುಸುಗುಸು ಹಬ್ಬಿದೆ.


ಕಾರ್ಕಳದ ಐದು ಕ್ಷೇತ್ರದ ತೆರೆ ಮೇಲಷ್ಟೇ ಬಿಜೆಪಿ-ಕಾಂಗ್ರೆಸ್ ಹುರಿಯಾಳುಗಳಿರುತ್ತಾರೆ. ತೆರೆಯ ಹಿಂದೆ ಅಸಲಿ ಹೋರಾಟ ಕಾಂಗ್ರೆಸ್‌ನ ಸರಳ-ಸಜ್ಜನ-ಕೆಲಸಗಾರ ಶಾಸಕ ಗೋಪಾಲ ಭಂಡಾರಿ ಮತ್ತು ರಾಜ್ಯ ಯುವ ಬಿಜೆಪಿ ಅಧ್ಯಕ್ಷ-ಮಾಜಿ ಶಾಸಕ ಸುನಿಲ್ ಕುಮಾರ್ ಎಂಬ ಅಪಾಯಕಾರಿ ಭಜರಂಗಿ ನಡುವೆ ನಡೆಯಲಿದೆ. ಜನರೊಂದಿಗೆ ಬೆರೆಯದ ದುರಹಂಕಾರಿ ಸುನಿಲ್ ಕುಮಾರ್‌ನ ಬಿಲ್ಲವ ಕಾರ್ಡ್ ಕೂಡ ಮುಕ್ಕಾಗಿದೆ. ಆತ ಅರ್ಧ ಬಿಲ್ಲವ-ಅರ್ಧ ಪಕ್ಕಾ ಬ್ರಾಹ್ಮಣನೆಂಬುದು ಜನರಿಗೆ ಅರ್ಥವಾಗಿದೆ. ಕೊಂಕಣಿಗರಂತೂ ಆತನ ವಿರುದ್ಧ ತಿರುಗಿಬಿದ್ದಿದ್ದಾರೆ. ಆತ ಶಾಸಕನಾಗಿದ್ದಾಗ ಹಲವು ಲಾರಿ ಖರೀದಿಸಿದ್ದು ಈಗ ರೆಸಾರ್ಟ್ ನಡೆಸುತ್ತಿರುವುದೆಲ್ಲ ಆತನ ಸಾಚಾತನ ಬಹಿರಂಗ ಪಡಿಸಿದೆ. ಇದೆಲ್ಲ ಜಿಪಂ ಚುನಾವಣೆಯಲ್ಲಿ ಪರಿಣಾಮ ಬೀರುತ್ತದೆಂದು ನಿಷ್ಠಾವಂತ ಬಿಜೆಪಿಗರು ಕೊರಗುತ್ತಿದ್ದಾರೆ. ಸಣ್ಣ ಕ್ಷೌರಿಕ ಸಮುದಾಯದ ಗೋಪಾಲ ಭಂಡಾರಿ ದೈತ್ಯ ಜನ ಬೆಂಬಲದ ಲೀಡರ್. ಯಾವುದೇ ಹಮ್ಮು-ಬಿಮ್ಮುಗಳಿಲ್ಲದ ಎಂಜಲು ಕಾಸಿಗೆಂದೂ ಕೈಯೊಡ್ಡದೇ ತಣ್ಣಗೆ ಜನಪರ ಕೆಲಸ ಮಾಡುವ ಭಂಡಾರಿ ಬಗ್ಗೆ ಕಾರ್ಕಳದ ಹಳ್ಳಿ-ಹಳ್ಳಿಯಲ್ಲಿ ಒಳ್ಳೆಯ ಅಭಿಪ್ರಾಯವಿದೆ. ಸುನಿಲ್ ಕುಮಾರ್ ಭಜರಂಗಿ ಗಿಮಿಕ್ಕು-ಬಿಲ್ಲವ ಜಾತಿ ಬಲವಿದೆ. ಇಬ್ಬರೂ ಸಮಶಕ್ತಿವಂತರು. ಜಿಪಂನಲ್ಲಿ ತಮ್ಮವರನ್ನು ಆರಿಸುವ ಛಾನ್ಸೂ ಇಬ್ಬರಿಗೆ ಫಿಫ್ಟಿ-ಫಿಫ್ಟಿಯಿದೆ.

• ನಹುಶ

ಮಂಡ್ಯ: ಟಿಕೆಟ್ ಕದನ ಚಾಲೂ

ರಾಜಕೀಯ ಚಟುವಟಿಕೆಗಳಲ್ಲಿ ತನ್ನದೇ ಆದ ವಿಶೇಷತೆಯನ್ನು ಮೈಗೂಡಿಸಿಕೊಂಡಿರುವ ಮಂಡ್ಯ ಜಿಲ್ಲೆಯ ರಾಜಕಾರಣಕ್ಕೆ ಇದೀಗ ಎದುರಾಗಿರುವ ಜಿ.ಪಂ. ತಾ.ಪಂ. ಚುನಾವಣೆಗಳು ಹೊಸ ಭಾಷ್ಯ ಬರೆಯಲಿವೆಯೇ? ಕಳೆದ ಅವಧಿಗಳಲ್ಲಿ ಆಡಳಿತಾರೂಢ ಪಕ್ಷಗಳಿಗೆ ಮಣೆಹಾಕಿದ್ದ ಮಂಡ್ಯ ಮತದಾರ ಈ ಬಾರಿ ಆಡಳಿತ ಪಕ್ಷಕ್ಕೆ ಅಧಿಕಾರ ಕೊಡುತ್ತಾನ? ಅಥವಾ ಜೆ.ಡಿ.ಎಸ್. ತನ್ನ ಪಾರುಪತ್ಯವನ್ನು ಮುಂದುವರೆಸುತ್ತದೆಯಾ? ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಮಾಜಿ ಕೇಂದ್ರ ಸಚಿವ ಅಂಬರೀಷ್‌ರಂತಹ ನಾಯಕರಿದ್ದೂ ಮಕಾಡೆ ಮಲಗಿರುವ ಕಾಂಗ್ರೆಸ್ ಮೈಕೊಡವಿಕೊಂಡು ಮೇಲೇಳುತ್ತಾ? ಇಂತಹ ಪ್ರಶ್ನೆಗಳು ಮಂಡ್ಯದ ಹಳ್ಳಿಹಳ್ಳಿಗಳಲ್ಲಿ ಹರಿದಾಡುತ್ತಿದೆ.

ಕಳೆದ ಅವಧಿಯಲ್ಲಿ ಜಿ.ಪಂ. ಅಧ್ಯಕ್ಷಗಾದಿ ಹಿಡಿಯಲು ಜೆ.ಡಿ.ಎಸ್. ಎ.ಬಿ.ಪಿ.ಜೆ.ಡಿ. ಸುಧಾ ಚಂದ್ರಶೇಖರ್‌ರನ್ನು ಅಧ್ಯಕ್ಷೆ ಮಾಡಬೇಕಾದರೆ, ಮಂಡ್ಯ ಶಾಸಕ ಎಂ.ಶ್ರೀನಿವಾಸ್‌ರ ಆಪ್ತಮಿತ್ರ ಕಾಂಗ್ರೆಸ್‌ನ ಜಿ.ಪಂ. ಸದಸ್ಯ ಪಿ.ಕೃಷ್ಣೇಗೌಡರನ್ನ ಗೈರುಹಾಜರಿ ಮಾಡಿಸಿತ್ತು, ಆವತ್ತು ತೂಕಡಿಸಿ, ತೂರಾಡಿ ಮಲಕ್ಕೊಂಡ ಕಾಂಗ್ರೆಸ್ ಕಡೇವರೆಗೆ ಜಿಲ್ಲಾ ಪಂಚಾಯತ್ ಅಧಿಕಾರ ಹಿಡಿಯಲಾಗಿಲ್ಲ.



ಇದೀಗ ಆಡಳಿತಾರೂಢ ಬಿ.ಜೆ.ಪಿ. ಕಮಲವನ್ನು ಅರಳಿಸಲು ಉಸ್ತುವಾರಿ ಮಂತ್ರಿ ಆರ್.ಅಶೋಕ್, ಎಂ.ಎಲ್.ಸಿ. ಅಶ್ವತ್ಥನಾರಾಯಣ, ಸ್ಥಳೀಯ ನಾಯಕರಾದ ಡಿ.ಸಿ.ತಮ್ಮಣ್ಣ, ಜೆ.ಬಿ.ಶಿವಕುಮಾರ್, ಎಲ್.ಆರ್.ಶಿವರಾಮೇಗೌಡ, ವಿದ್ಯಾ ನಾಗೇಂದ್ರ ಮತ್ತಿತರ ಮುಖಂಡರೊಡನೆ ಸರ್ಕಸ್ ನಡೆಸುತ್ತಿದೆ. ಮುಖ್ಯಮಂತ್ರಿಯ ತವರು ಕೆ.ಆರ್.ಪೇಟೆಯ ಬೂಕನಕೆರೆಯಲ್ಲಿ ಜೆ.ಡಿ.ಎಸ್. ನಾಯಕ ಬಿ.ಜವರಾಯಿಗೌಡರನ್ನು ಬಿ.ಜೆ.ಪಿ. ಸೆಳೆದುಕೊಂಡಿರುವುದು ಎಷ್ಟರಮಟ್ಟಿಗೆ ವರ್ಕ್‌ಔಟ್ ಆಗುತ್ತೆ ಎನ್ನುವುದನ್ನು ಕಾದುನೋಡಬೇಕಿದೆ.

ಜೆ.ಡಿ.ಎಸ್. ತನ್ನ ಅಧಿಪತ್ಯ ಮುಂದುವರೆಸಲು ಸಂಸದ ಎಂ.ಚಲುವರಾಯಸ್ವಾಮಿ ನೇತೃತ್ವದಲ್ಲಿ ಶಾಸಕರುಗಳಾದ ಎಂ.ಶ್ರೀನಿವಾಸ್, ಎಸ್.ಪುಟ್ಟರಾಜು, ಕಲ್ಪನಾ ಸಿದ್ದರಾಜು, ರಮೇಶ್ ಬಂಡಿಸಿದ್ದೇಗೌಡ, ಮತ್ತಿತರರ ದಂಡಿನೊಂದಿಗೆ ಚುನಾವಣೆಗೆ ಸಜ್ಜಾಗಿದೆ. ಇತ್ತ ಕಾಂಗ್ರೆಸ್ ಹೇಗಾದರೂ ಮಾಡಿ ಅಧಿಕಾರ ಹಿಡಿಯಬೇಕೆಂದು ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಮತ್ತು ಮಾಜಿ ಸಚಿವ ಅಂಬರೀಷ್‌ರ ವರ್ಚಸ್ಸು ಬಳಸಿಕೊಂಡು ಫಲಿತಾಂಶ ಪಡೆಯಲು ಶಾಸಕರಾದ ಕೆ.ಬಿ.ಚಂದ್ರಶೇಖರ್, ಸುರೇಶ್‌ಗೌಡ, ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ವಿಧಾನ ಪರಿಷತ್ ಸದಸ್ಯೆ ಮಲ್ಲಾಜಮ್ಮ ನೇತೃತ್ವದ ತಂಡ ತಾಲೀಮು ನಡೆಸುತ್ತಿದೆ. ಮಾಜಿ ಮಂತ್ರಿ ಪಕ್ಷೇತರ ಶಾಸಕ ಮಳವಳ್ಳಿ ನರೇಂದ್ರಸ್ವಾಮಿ, ಜೆ.ಡಿ.ಎಸ್ ಬೆಂಬಲಿಸುತ್ತಾರೋ ಅಥವಾ ಕಾಂಗ್ರೆಸ್ ಕಡೆ ವಾಲುತ್ತಾರೋ ಕಾದುನೋಡಬೇಕಿದೆ. ಅಂತೆಯೇ ರೈತ ಸಂಘದ ನಾಯಕರುಗಳೂ ಕಣಕ್ಕಿಳಿದು ತೊಡೆ ತಟ್ಟಲು ಅಣಿಯಾಗುತ್ತಿದ್ದಾರೆ.


ವಿವಿಧ ಪಕ್ಷಗಳ ಕಸರತ್ತು ಇಷ್ಟಾದರೆ, ಸಾಮಾನ್ಯ ಕ್ಷೇತ್ರಗಳಲ್ಲಿ ಜೆ.ಡಿ.ಎಸ್ ಹಾಗೂ ಕಾಂಗ್ರೆಸ್‌ಗೆ ಬಂಡಾಯ ಅಭ್ಯರ್ಥಿಗಳ ಪೈಪೋಟಿ ತಲೆನೋವಾಗಬಹುದು. ಇದನ್ನೇ ಕಾಯುತ್ತಿರುವ ಬಿ.ಜೆ.ಪಿ ಅತೃಪ್ತರಿಗೆ ಮಣೆಹಾಕಲು ಹೊಂಚುಹಾಕಿ ಕೂತಿದೆ. ಪ್ರತಿಷ್ಠಿತ ಹೊಳಲು ಜಿ.ಪಂ. ಕ್ಷೇತ್ರದಲ್ಲಿ ಅಂದಕಾಲತ್ತಿಲ್ ಹೆಚ್.ಡಿ.ದೇವೇಗೌಡರ ಪರಮಾಪ್ತ ಈಗಿನ ಬಿ.ಜೆ.ಪಿ ಜಿಲ್ಲಾಧ್ಯಕ್ಷ ಜೆ.ಬಿ.ಶಿವಕುಮಾರ್ ತನ್ನ ಸಂಬಂಧಿ ಸಾಯಿ ರವೀಂದ್ರರನ್ನ ಜಿ.ಪಂಗೆ ಕಳುಹಿಸಲು ಉತ್ಸುಕರಾಗಿದ್ದರು. ಕಾಂಗ್ರೆಸ್‌ನಿಂದ ಉದ್ಯಮಿ ಕೆಬ್ಬಳ್ಳಿ ಆನಂದ್ ತೊಡೆತಟ್ಟಿ ನಿಂತಿದ್ದರು. ಆದರೆ ಈ ಇಬ್ಬರಿಗೂ ಮೀಸಲು ಕೈಕೊಟ್ಟಿದೆ. ಬಿ.ಸಿ.ಎಂ.ಬಿಗೆ ಮೀಸಲಾಗಿರುವ ಈ ಕ್ಷೇತ್ರದಲ್ಲಿ ಈ ಇಬ್ಬರೂ ತೆರಿಗೆದಾರರಾಗಿರುವುದರಿಂದ ಬಿ.ಜೆ.ಪಿಯ ರವೀಂದ್ರ ದುದ್ದ (ಸಾಮಾನ್ಯ) ದುದ್ದ ಕ್ಷೇತ್ರದತ್ತ ಮುಖಮಾಡಿದ್ದಾರೆ. ಕೆಬ್ಬಳ್ಳಿ ಆನಂದ್ ಕೆರಗೋಡು ಕ್ಷೇತ್ರದ ಕಡೆ ಕೈಚಾಚಿ ನಿಂತಿದ್ದಾರೆ. ಹೊಳಲಿಗೆ ಕಾಂಗ್ರೆಸ್‌ನಿಂದ ಮಾಜಿ ಜಿ.ಪಂ.ಸದಸ್ಯ ಸಿ.ಡಿ.ಗಂಗಾಧರ್ ಹಾಗೂ ಮಾಜಿ ತಾಪಂ ಸದಸ್ಯ ಮಾದೇಗೌಡ ಹುರಿಯಾಳಾಗಿದ್ದರೆ, ಜೆಡಿಎಸ್‌ನ ಮಲ್ಲಿಗೆರೆ ಮಾದಪ್ಪ ಹೊಳಲು ಯೋಗೇಶ್, ಎಂ.ಎನ್.ಶೆಟ್ಟಿ ಶ್ರೀಕಂಠ ಪ್ರಬಲ ಆಕಾಂಕ್ಷಿತರು.

ಕೆರಗೋಡು ಕ್ಷೇತ್ರಕ್ಕೆ ಜೆಡಿಎಸ್ ಕೆ.ವಿ.ಶಂಕರಗೌಡರ ಮೊಮ್ಮಗ ಕೆ.ಎಸ್.ವಿಜಯಾನಂದರನ್ನು ಹುರಿಯಾಳಾಗಿ ಹುರಿದುಂಬಿಸುವುದು ಬಹುತೇಕ ಖಚಿತ. ಅತ್ತ ಬಸರಾಳು ಕ್ಷೇತ್ರದಲ್ಲಿ ಕಳೆದ ಬಾರಿ 58 ಮತಗಳಿಂದ ಸೋತಿದ್ದ ಜೆ.ಡಿ.ಎಸ್‌ನ ಕಂಬದಹಳ್ಳಿ ಪುಟ್ಟಸ್ವಾಮಿ, ನಾಗಮಂಗಲದ ಬೆಳ್ಳೂರಿನ ನೆಲ್ಲಿಗೆರೆ ಬಾಲು ಮೀಸಲಿನಿಂದ ಅವಕಾಶ ವಂಚಿತರಾದವರಲ್ಲಿ ಪ್ರಮುಖರು. ಅತ್ತ ಮದ್ದೂರು ತಾಲ್ಲೂಕಿನ ನಾಗಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವ ಕೊಪ್ಪ ಜಿ.ಪಂಗೆ ಕಾಂಗ್ರೆಸ್‌ನಿಂದ ಮಾಜಿ ಜಿ.ಪಂ. ಅಧ್ಯಕ್ಷ ಬಿ.ವಿವೇಕಾನಂದ ಮತ್ತೆ ಮರು ಆಯ್ಕೆ ಬಯಸಿದರೆ ಬಹುತೇಕ ಕಾಂಗ್ರೆಸ್ ಗೆದ್ದಂತೆಯೇ. ಇಲ್ಲಿ ಜೆ.ಡಿ.ಎಸ್‌ನಿಂದ ಮೂಡ್ಯಚಂದ್ರು, ವಕೀಲ ರಾಮಕೃಷ್ಣ ದಿವಾಕರ್, ಮತ್ತಿತರ ಸಾಲುಸಾಲೇ ಸೆಣಸಾಟಕ್ಕೆ ನಿಂತಿದ್ದರೂ ಸಂಸದ ಎನ್.ಚಲುವರಾಯಸ್ವಾಮಿಯ ಅಣ್ಣನ ಮಗ ರವಿಯ ಹೆಸರು ಅಲ್ಲಲ್ಲಿ ತೇಲಿಬರುತ್ತಿದೆ. ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿ ಸಾಮಾನ್ಯ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಮಾಜಿ ತಾಪಂ ಅಧ್ಯಕ್ಷ ಸುರೇಶ್, ಬಿ.ಜೆ.ಪಿಯಿಂದ ಮಾಜಿ ತಾಪಂ ಸದಸ್ಯ ಮಂಜುನಾಥ್ ಬಹುತೇಕ ಖಚಿತವಾದರೆ, ಜೆ.ಡಿ.ಎಸ್.ನಿಂದ ಹತ್ತಾರು ನಾಯಕರ ದಂಡು ವರಿಷ್ಠರಿಗೆ ತಲೆನೋವಾಗಿ ಪರಿಣಮಿಸಿದೆ.

ಒಟ್ಟಾರೆ ಮಂಡ್ಯ ಜಿಲ್ಲೆಯಲ್ಲಿ ಅಲ್ಲಲ್ಲಿ ಖಾತೆ ತೆರೆಯಲು ಬಿಜೆಪಿ ಸ್ಕೆಚ್ ಹಾಕಿದರೆ ಸಾಕಷ್ಟು ಕಡೆ ಗೆಲ್ಲೋ ಅಭ್ಯರ್ಥಿಗಳನ್ನ ಸೋಲಿಸುವುದಂತೂ ಸತ್ಯ. ಇದನ್ನೆಲ್ಲ ಕಾಂಗ್ರೆಸ್ ಹಾಗೂ ಜೆಡಿಎಸ್ ಹೇಗೆ ದಕ್ಕಿಸಿಕೊಳ್ಳಬಹುದೆಂಬುದು ಸದ್ಯದ ಕುತೂಹಲ.

ಧಾರವಾಡ: ಬಿಜೆಪಿ ಒಡೆದ ಮನೆ ಕಾಂಗ್ರೆಸ್-ಜೆಡಿಎಸ್‌ಗೆ ಗೆಲುವಿನ ತಪನೆ!

ಧಾರವಾಡ ಜಿಲ್ಲೆಯಾದ್ಯಂತ ರಾಜಕೀಯ ಚಟುವಟಿಕೆಗಳು ಬಿರುಸು ಪಡೆದುಕೊಂಡಿವೆ. ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿ ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಜಿಲ್ಲೆ ಎರಡನೇ ಹಂತದ ಚುನಾವಣಾ ಲಿಸ್ಟು ಸೇರಿದೆ. ಆದರಿಂದ ಈ ಭಾಗದ ಹಿರಿ-ಮರಿ ರಾಜಕೀಯ ಪುಢಾರಿಗಳ ವಲಯದಲ್ಲೂ ರಾಜಕೀಯವನ್ನು ಗರಿಗೆದರಿಸಿದೆ. ಇದಲ್ಲದೇ ಪ್ರಮುಖ ಪಕ್ಷಗಳಲ್ಲಿ ಸಮರೋತ್ಸಾಹ, ತಂತ್ರಗಾರಿಕೆಗಳೆಲ್ಲ ಚಾಲನೆಗೆ ಬಂದು ಟಿಕೆಟ್ ಆಕಾಂಕ್ಷಿಗಳ ದಂಡು ತಣ್ಣಗೆ ಕಾರ್ಯಾಚರಣೆ ಶುರು ಹಚ್ಚಿಕೊಂಡಿದೆ.



ಈ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ, ಅಧಿಕಾರ ಕೈಲಿದ್ದರೂ ಬಿಜೆಪಿ ಪಕ್ಷ ಒಡೆದ ಮನೆಯಂತಾಗಿದೆ. ರಾಜ್ಯ ನಾಯಕರುಗಳ ನಡುವಿನ ಕಿತ್ತಾಟದ ನೆರಳು ಜಿಲ್ಲೆಯ ತುಂಬಾ ಹರಡಿಕೊಂಡಿದೆ. ಲಿಂಗಾಯತ ಸಮುದಾಯದ ಚಿತ್ತವೂ ಅತ್ತಿತ್ತ ಹೊಯ್ದಾಡಹತ್ತಿದೆ. ಇನ್ನು ಜೆಡಿಎಸ್ ಬಿಜೆಪಿಯ ಭೂಗಳ್ಳತನವನ್ನೇ ಚುನಾವಣಾ ಸರಕಾಗಿಸಿಕೊಳ್ಳುವುದು ಸ್ಪಷ್ಟವಾಗಿದೆ. ಕಾಂಗ್ರೆಸ್‌ನದ್ದು ಮತ್ತದೇ ಹಳೇ ಕಾಯಿಲೆ. ಜಿಲ್ಲೆಯ ಜಿಪಂ ಮತ್ತು ತಾಪಂ ಚುನಾವಣೆಯಲ್ಲಿ ಕಾಂಗ್ರೆಸ್‌ಗೊಂದು ಬಲ ಇರುವುದು ಹೌದಾದರೂ ಅದನ್ನು ಉಳಿಸಿಕೊಳ್ಳುವ ಯಾವುದೇ ಉಮೇದುಗಳು ಕಾಣ ಬರುತ್ತಿಲ್ಲ. ಒಂದಷ್ಟು ನಿರೀಕ್ಷೆ ಮೂಡಿಸಿದ್ದ ಪಕ್ಷದ ಅಧ್ಯಕ್ಷ ಪರಮೇಶ್ವರ್ ಬೆಂಗಳೂರು ಬಿಟ್ಟು ಕದಲುತ್ತಿಲ್ಲ. ಇದೆಲ್ಲ ಏನೇ ಇದ್ದರೂ ಕಾಂಗ್ರೆಸ್-ಜೆಡಿಎಸ್‌ನ ಸ್ಥಳೀಯ ಶಾಖೆಗಳಲ್ಲಿ ಗೆಲುವಿನ ತಪನೆ ಹಬೆಯಾಡುತ್ತಿರುವುದು ಸುಳ್ಳಲ್ಲ.

ಮೊದಲೇ ಹೇಳಿದಂತೆ ಬಿಜೆಪಿಯದ್ದು ಪಕ್ಕಾ ಒಡೆದ ಮನೆಯೊಳಗಿನ ಪ್ರಕ್ಷುಬ್ಧ ಸ್ಥಿತಿ. ಯಡಿಯೂರಪ್ಪನವರ ಸರಣಿ ಹಗರಣಗಳು ಪಕ್ಷದ ಸ್ಥಳೀಯ ಮುಖಂಡರುಗಳನ್ನೇ ಮುಜುಗರಕ್ಕೀಡುಮಾಡಿದೆ. ಅದರಿಂದ ತಪ್ಪಿಸಿಕೊಂಡು ಬಿಡುಬೀಸಾಗಿ ಮತಯಾಚನೆಗೆ ನಿಲ್ಲುವ ಹುಮ್ಮಸ್ಸು ಅವರಲ್ಲಿದ್ದಂತಿಲ್ಲ. ಅದೂ ಅಲ್ಲದೆ ಮತಿಭ್ರಮಣೆಗೊಂಡಂತಿರುವ ಯಡ್ಡಿ 'ಈ ಚುನಾವಣೆಗಳ ಫಲಿತಾಂಶ ಸರ್ಕಾರದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ' ಅನ್ನುವ ಮೂಲಕ ಮತ್ತಷ್ಟು ಇರಿಸುಮುರಿಸಿಗೆ ಕಾರಣವಾಗಿದ್ದಾರೆ. ಈತನ ಅವಿವೇಕದಿಂದಾಗಿಯೇ ಜಿಲ್ಲಾ ಬಿಜೆಪಿ ಒಡೆದ ಮನೆಯಾಗಿರುವುದು ಸ್ಪಷ್ಟವಿಚಾರ.

ಇನ್ನೂ ಗಣನೀಯ ಅಂಶವೆಂದರೆ, ಜಿಲ್ಲೆಯ ಬಹುತೇಕ ಬಿಜೆಪಿ ಶಾಸಕರು ಯಡಿಯೂರಪ್ಪನಿಗೆ ಮುಖಭಂಗ ಮಾಡಲು ತಯಾರಾಗಿ ನಿಂತಿದ್ದಾರೆ. ಇದೀಗಲೇ ಯಡ್ಡಿ ವಿರುದ್ಧ ರೆಡ್ಡಿ ಹಾಗೂ ಶೆಟ್ಟರ್ ಬಣ ಕೊತಗುಡುತ್ತಿದೆಯಲ್ಲಾ? ಅದು ಜಿಲ್ಲೆಯ ತಾಪಂ, ಜಿಪಂ ಚುನಾವಣೆಯಲ್ಲಿ ಪ್ರತಿಫಲಿಸುವುದು ಖಚಿತ. ಅದ್ಯಾವುದೋ ತುಂಬ ವಿಶ್ವಾಸದಲ್ಲಿ ವಿಜೃಂಭಿಸುತ್ತಿರುವ ಯಡ್ಡಿ ಶೆಟ್ಟರ್ ಹಿಂದೆ ಉತ್ತರ ಕರ್ನಾಟಕದ ಲಿಂಗಾಯತ ಶಾಸಕರಿದ್ದಾರೆಂಬುದನ್ನೇ ಮರೆತಂತಿದ್ದರು.

ಆದರೀಗ ಯಡಿಯೂರಪ್ಪನ ಚೇಲಾ ಪಡೆ ಜಿಲ್ಲೆಯ ಕೆಲ ಶಾಸಕರನ್ನು ತಮ್ಮ ಬಣಕ್ಕೆ ಸೇರಿಸಿಕೊಳ್ಳಲು ಶತಾಯಗತಾಯ ಪ್ರಯತ್ನಿಸುತ್ತಿದೆ. ಅವಿವೇಕಿ ರೇಣುಕಾಚಾರ್ಯ ಜಿಲ್ಲೆಯ ಲಿಂಗಾಯತ ಶಾಸಕರಾದ ಶಂಕರ ಪಾಟೀಲ ಮುನೇಕೊಪ್ಪ ಹಾಗೂ ಚಂದ್ರಕಾಂತ ಬೆಲ್ಲದರ ಮನೆಗೆ ಪದೇಪದೆ ಬಂದು ಹೋಗುತ್ತಿದ್ದಾನೆ. ಇದರ ನಡುವೆಯೇ ಶೆಟ್ಟರ್



ಬಣದಲ್ಲಿದ್ದ ಹುಬ್ಬಳ್ಳಿ ಶಹರದ ದಲಿತ ಶಾಸಕ ವೀರಭದ್ರಪ್ಪ ಹಾಲಹರವಿ ಯಡ್ಡಿ ಟೀಮಿನ ಸಾಂಗತ್ಯ ಬೆಳೆಸಿದ್ದಾರೆ. ಇನ್ನು ಯಡ್ಡಿ ಪರವಾಗಿ ಮುರುಗೇಶ್ ನಿರಾಣಿ, ಸಿ.ಸಿ.ಪಾಟೀಲ, ಬಸವರಾಜ ಬೊಮ್ಮಾಯಿ, ಸಿ.ಎಂ. ಉದಾಸಿ ಮುಂತಾದ ಹಳಸಲು ಮುಖಗಳಿವೆ. ಇದು ಬಿಜೆಪಿ ಹೋಳಾಗಿರುವುದರ ಸ್ಪಷ್ಟ ಸೂಚನೆ. ಇದು ಈ ಚುನಾವಣೆಯಲ್ಲಿ ಪಕ್ಷಕ್ಕೆ ಮಾರಣಾಂತಿಕ ಪೆಟ್ಟು ಕೊಡುವುದು ಖಚಿತ.

ಜೆಡಿಎಸ್ ವಿಚಾರಕ್ಕೆ ಬಂದರೆ, ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಬಹುಹಿಂದಿನಿಂದಲೇ ಜಿಲ್ಲೆಯಲ್ಲಿ ಪಕ್ಷದ ಬುಡ ಭದ್ರಪಡಿಸುವ ಕೆಲಸಕ್ಕೆ ಚಾಲನೆ ನೀಡಿದ್ದರು. ಈ ಭಾಗದಲ್ಲಿ ಸಂಚರಿಸುತ್ತಾ ಕಾರ್ಯಕರ್ತರಲ್ಲಿ ಹುಮ್ಮಸ್ಸು ತುಂಬುತ್ತಿದ್ದರು. ಬಸವರಾಜ ಹೊರಟ್ಟಿ, ಅನ್ಸಾರಿ, ಬಸವರಾಜ್ ಪಾಟೀಲ್ ಯತ್ನಾಳ್ ಮುಂತಾದವರೂ ಕುಮಾರಸ್ವಾಮಿಯ ಬೆನ್ನಿಗಿದ್ದಾರೆ. ಹೊರಟ್ಟಿ ಲಿಂಗಾಯತ ಮತ ಬ್ಯಾಂಕ್‌ಗೆ ಲಗ್ಗೆಯಿಟ್ಟರೆ, ಅನ್ಸಾರಿ ಬಲದಿಂದ ಅಲ್ಪಸಂಖ್ಯಾತರ ಓಟುಗಳು ಒಲಿಯಲಿವೆ. ಬಿಜೆಪಿಯ ಕೋಮುವಾದದ ವಿರುದ್ಧವೂ ಜೆಡಿಎಸ್ ನಿರ್ಣಾಯಕ ದನಿಯೆತ್ತಿರುವುದರಿಂದ ಕಾಂಗ್ರೆಸ್ ಪರವಿರುವ ಅಲ್ಪಸಂಖ್ಯಾತರ ಮತಗಳು ಕಿತ್ತು ಹೋಗುವ ಸಂಭವವಿದೆ.

ಆದರೆ ಕಾಂಗ್ರೆಸ್‌ಗೆ ಗೆಲ್ಲುವ ಸಾಧ್ಯತೆಗಳಿದ್ದರೂ ಅದನ್ನು ಉಪಯೋಗಿಸಿಕೊಳ್ಳುವ ಉಮೇದಿದ್ದಂತೆ ಕಾಣುತ್ತಿಲ್ಲ. ತೀರಾ ಹಿಂದಿನ ಸ್ಥಿತಿಗತಿಗಳಿಗೆ ಹೋಲಿಸಿದರೆ ಜಿಲ್ಲೆಯಲ್ಲಿ ಕಾಂಗ್ರೆಸ್ ಬೇರು ಕಳಕೊಳ್ಳುತ್ತಾ ಸಾಗುತ್ತಿದೆ. ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷಗಾದಿಗೆ ಸಿ.ಎಸ್. ಶಿವಳ್ಳಿ ಎಂಬ ಕೆಲಸಕ್ಕೆ ಬಾರದವ ಬಂದು ಕೂರುತ್ತಲೇ ಪಕ್ಷ ಸಂಘಟನೆ ಕುಲಗೆಟ್ಟು ಹೋಗಿದೆ. ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷಗಾದಿಗೆ ವಿನಯ ಕುಲಕರ್ಣಿ ಹಾಗೂ ಸುಭಾಷ್ ರೇಸ್‌ನಲ್ಲಿದ್ದರು. ಆದರೀಗ ಅವರು ಶಿವಳ್ಳಿ ಅಧ್ಯಕ್ಷಗಿರಿ ವಿರುದ್ಧ ಕೊತಗುಡಹತ್ತಿದ್ದಾರೆ. ಅಧ್ಯಕ್ಷಗಾದಿಯಿಂದ ದಬ್ಬಿಸಿಕೊಂಡ ನಾಗರಾಜ ಛಬ್ಬಿ ಈ ಚುನಾವಣೆಯಲ್ಲಿ ಉಲ್ಟಾ ಹೊಡೆಯುವ ಸಾಧ್ಯತೆಗಳು ಢಾಳಾಗಿವೆ.

ಇತ್ತೀಚೆಗೆ ನಡೆದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮೇಲುಗೈ ಆಗಿತ್ತು. ಆದರೆ ಅಲ್ಲೂ ಸಹ ಬಿರುಕುಗಳುಂಟಾಗಿದ್ದವು. ಇದೆಲ್ಲವನ್ನು ಸರಿದೂಗಿಸಿಕೊಂಡು ಗೆಲುವಿನತ್ತ ನಡೆಯಬೇಕಿದ್ದ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಬೆಂಗಳೂರಲ್ಲೇ ಜಾಂಡಾ ಊರಿರುವುದು ಕೆಡುಕಿನ ಮುನ್ಸೂಚನೆಯಂತೆಯೇ ಭಾಸವಾಗುತ್ತಿದೆ.



ಮೇಲ್ಕಂಡವು ವಿವಿಧ ಪಕ್ಷಗಳ ಒಳಬೇಗುದಿಯಾದರೆ ಮೀಸಲಾತಿ ಗೊಂದಲ ಅದಕ್ಕೆಲ್ಲ ತುಪ್ಪ ಸುರಿದಿದೆ. ಈ ಮೀಸಲಾತಿಗೆ ಸಿಕ್ಕು ಜಿಲ್ಲಾ ಪಂಚಾಯ್ತಿಯ ಸುಭಾಷ್ ದ್ಯಾಮಕ್ಕನವರ, ಗದಿಗೆಪ್ಪಾ ಕಳ್ಳಮನಿ, ಶಿವಲಿಂಗ, ಅಮೃತ ದೇಸಾಯಿ, ತವನಪ್ಪ ಮುಂತಾದವರು ಕ್ಷೇತ್ರ ಕಳೆದುಕೊಂಡಿದ್ದಾರೆ.


ಇನ್ನು ಕ್ಷೇತ್ರ ಬದಲಾವಣೆಯಿಂದಾಗಿ ಸುಭಾಷ್ ದ್ಯಾಮಕ್ಕನವರ ಕೋಳಿವಾಡ ಕ್ಷೇತ್ರದಿಂದ ಸಾಮಾನ್ಯ ಕ್ಷೇತ್ರಕ್ಕೆ ವರ್ಗಾಯಿಸಲ್ಪಟ್ಟಿದ್ದಾನೆ. ಬಿಜೆಪಿಯ ಗದಿಗೆಪ್ಪ ಮಿಶ್ರಿ ಕೋಟಿಯ ಸಾಮಾನ್ಯ ಕ್ಷೇತ್ರಕ್ಕೆ ಲಗ್ಗೆ ಇಟ್ಟರೆ, ಜೆಡಿಎಸ್‌ನ ಅಮೃತ ದೇಸಾಯಿ ನಗರ ಸಾಮಾನ್ಯ ಕ್ಷೇತ್ರಕ್ಕೆ ಹಾರಲಿದ್ದಾನೆ.

ಇದರನ್ವಯ ಎಲ್ಲಾ ಪಕ್ಷಗಳಲ್ಲೂ ಮೀಸಲಾತಿ, ಕ್ಷೇತ್ರ ಮರುವಿಂಗಡಣೆ ಗೊಂದಲ ಮನೆ ಮಾಡಿದೆ. ಎಲ್ಲರೂ ಮಹಿಳಾ ಅಭ್ಯರ್ಥಿಗಳ ಹುಡುಕಾಟದಲ್ಲಿ ತೊಡಗಿದ್ದಾರೆ.

ಯಾರು ಯಾವ್ಯಾವ ತಂತ್ರಗಾರಿಕೆಗಳ ಮೂಲಕ ಗೆಲ್ಲುತ್ತಾರೋ ಕಾದು ನೋಡಬೇಕಿದೆ.

• ಹುಬ್ಬಳ್ಳಿಯಾಂವ

ಪೂರ್ತಿ ಗ್ರೂಪ್: ಗಡ್ಕರಿಯ 15 ಸಾವಿರ ಕೋಟಿಯ ಸಾಮ್ರಾಜ್ಯ



ಬಿಜೆಪಿ ರಾಷ್ಟ್ರಾಧ್ಯಕ್ಷ ಗಡ್ಕರಿ ಕಮ್ಮಿಯೆಂದರೂ ೧೫ ಸಾವಿರ ಕೋಟಿಗಳ ಬಿಜಿನೆಸ್ ಸಾಮ್ರಾಜ್ಯವೊಂದರ ಏಕಚಕ್ರಾಧಿಪತಿ. ತನ್ನದೇ ಪಕ್ಷದ ಭ್ರಷ್ಟ ಮುಖ್ಯಮಂತ್ರಿಯೊಬ್ಬನಿಂದ ಮಗನ ಮದುವೆಗೆಂದು ರೋಲ್‌ಕಾಲ್ ಮಾಡುವಷ್ಟು ದಾರಿದ್ರ್ಯ ಖಂಡಿತಾ ಇಲ್ಲ, ಆದರೆ ದುರಾಶೆ?

ಇವತ್ತು ಮಹಾರಾಷ್ಟ್ರದ ಅತೀ ದೊಡ್ಡ ಉದ್ದಿಮೆ ಕೂಟವಾಗಿರುವ ಪೂರ್ತಿ ಗ್ರೂಪಿಗೆ **(purti group)** ಗಡ್ಕರಿಯೇ ಮಾಲೀಕ. ಮಹಾರಾಷ್ಟ್ರದ ಉದ್ದಗಲಕ್ಕೂ ಅಲ್ಲಿನ ಪ್ರಮುಖ ನಗರಗಳಲ್ಲಿರುವ **purti super bazaar** ಗಡ್ಕರಿಯ ಪ್ರಮುಖ ಆದಾಯದ ಮೂಲ. ಪೂರ್ತಿ ಆಗ್ರೋ ಟೆಕ್, ಪೂರ್ತಿ ಪ್ಯಾಕೇಜಿಂಗ್ ಯೂನಿಟ್, ಶುಗರ್ ಫಾರ್ಮಿಂಗ್, ಇದಕ್ಕೆ ಪೂರಕವಾಗಿ ವಿದ್ಯುತ್ ಉತ್ಪಾದನೆ ಮತ್ತು ಎಥೇನಾಲ್ ಸ್ಮಗ್ಲಿಂಗ್ ದಂಧೆಯಲ್ಲಿ ಗಡ್ಕರಿ ಪಳಗಿದ ಕೈ.

ಕಬ್ಬು, ಸೋಯಾಬಿನ್ ಮತ್ತು ಅಕ್ಕಿ ಸರಬರಾಜು ದಂಧೆಯಲ್ಲಿ ವರ್ಷಕ್ಕೆ ನೂರಾರು ಕೋಟಿಯ ಆದಾಯ ಗಡ್ಕರಿಗಿದೆ. ವಿದರ್ಭದ ಈತ ಪವರ್ ಜನರೇಷನ್ ಪ್ಲಾಂಟ್‌ನಲ್ಲಿ ದಿನವೊಂದಕ್ಕೆ 24.50 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಜೊತೆಗೆ **VEDHA** ಎಂಬ ಪ್ರಾಜೆಕ್ಟ್ ಸೃಷ್ಟಿಸಿ ನೂರಾರು ಎಕರೆಗಳಷ್ಟು ಬಿದಿರು ಬೆಳೆಯುತ್ತಾನೆ. **VEDHA** ಎಂದರೆ **Village Enterprises Development for handicraft Artisans** ಎಂದರ್ಥ, ವೇದದ ಹೆಸರಲ್ಲಿ ಬಿದಿರು ಬೆಳೆದು ಅದನ್ನು ಪೇಪರ್ ಮಿಲ್ಲುಗಳಿಗೆ ಮಾರಿಕೊಳ್ಳುವ ಕಲೆಗಾರಿಕೆ ಗಡ್ಕರಿಗಲ್ಲದೇ ಮತ್ತಾರಿಗೆ ಸಾಧ್ಯ?


ಕುಶಲಕಲೆಗಳ ಹೆಸರಲ್ಲಿ ಬಿದಿರು ಬೆಳೆದು ಕಾಸು ಮಾಡುವ ದಂಧೆಗೆ ಗಡ್ಕರಿ ಹೂಡಿರುವ ಬಂಡವಾಳವೇ 10 ಸಾವಿರ ಕೋಟಿಯಂತೆ!


ಇದಲ್ಲದೇ ಗಡ್ಕರಿಗೆ ನಾಗಪುರದಲ್ಲಿ ತನ್ನದೇ ಆದ ಖಾಸಗಿ ಏರ್‌ಪೋರ್ಟ್ ಇದೆ. ಖಾಸಗಿ ವಿಮಾನ ಕೂಡ ಇದೆ. ಮುಂಬೈ-ಪೂನಾ ಎಕ್ಸ್‌ಪ್ರೆಸ್ ಹೈವೇ ಹೆಸರಲ್ಲಿ 55 ಫ್ಲೈ ಓವರ್‌ಗಳ ದೈತ್ಯ ಕಾಂಟ್ರಾಕ್ಟ್ ಹಿಡಿದು ರೊಕ್ಕ ಬಾಚಿದವನು ಗಡ್ಕರಿ. ಸೆಂಟ್ರಲ್ ಮುಂಬಯಿಯಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್, ಜೊತೆಗೆ ಕೊಳಚೆ ನೀರು ಬಳಸಿ ವಿದ್ಯುತ್ ಉತ್ಪಾದಿಸುವ ಘಟಕ, ಬ್ರೆಜಿಲ್‌ನಲ್ಲಿ ಸಕ್ಕರೆ ಕಾರ್ಖಾನೆ, ಇಸ್ರೇಲ್‌ನಲ್ಲಿ ಜಲ ಶುದ್ಧೀಕರಣ ಘಟಕ ಇತ್ಯಾದಿಗಳಲ್ಲದೇ ಅಮೆರಿಕಾ, ಬ್ರಿಟನ್, ಫ್ರಾನ್ಸ್ ಸೇರಿದಂತೆ ಚೀನಾ, ಜಪಾನ್, ಜರ್ಮನಿಗಳಲ್ಲಿ ಗಡ್ಕರಿಗೆ ರಸ್ತೆ ಕಾಂಟ್ರಾಕ್ಟ್ ದಂಧೆಯಿದೆ. ರಸ್ತೆ ಕಾಂಟ್ರಾಕ್ಟ್ ದಂಧೆಯಲ್ಲಿ ಈತನ ಪಾಂಡಿತ್ಯ ಕಂಡೇ ಪ್ರಧಾನಿಯಾಗಿದ್ದ ವಾಜಪೇಯಿ ಈತನನ್ನು ಗ್ರಾಮೀಣ ರಸ್ತೆ ಅಭಿವೃದ್ಧಿ ಸಮಿತಿಗೆ ಅಧ್ಯಕ್ಷನನ್ನಾಗಿ ನೇಮಿಸಿದ್ದರು.


ಗಡ್ಕರಿಗೆ ಪಕ್ಷ, ಸಿದ್ಧಾಂತಕ್ಕಿಂತಲೂ ತನ್ನ ವ್ಯಾಪಾರ ಮತ್ತು ಕಂಪೆನಿಗಳೇ ಮುಖ್ಯ. ಅಂತರರಾಷ್ಟ್ರೀಯವಾಗಿ ರೋಡ್ ಕಾಂಟ್ರಾಕ್ಟ್ ದಂಧೆಯಲ್ಲಿ ಈತನಿಗೆ ಪ್ರತಿಸ್ಪರ್ಧಿ ಎಂದರೆ ಅದು ದಾವೂದ್ ಇಬ್ರಾಹಿಂ. ಬೇನಾಮಿಯಾಗಿ ಇಂಟರ್‌ನ್ಯಾಷನಲ್ ರೋಡ್ ಕನ್‌ಸ್ಟ್ರಕ್ಷನ್ ದಂಧೆ ನಡೆಸುವ ದಾವೂದ್ ಇಬ್ರಾಹಿಂ ತನ್ನ ತಂಟೆಗೆ ಬರದಂತೆ ಮಾಡಲು ಬಿಜೆಪಿಯ ರಾಷ್ಟ್ರಾಧ್ಯಕ್ಷ ಗಾದಿ ಗಡ್ಕರಿಯ ಪಾಲಿಗೆ ಒಂದು ಗುರಾಣಿಯಷ್ಟೆ. ಇನ್ನು ಯಡ್ಡಿಯ ಪಾಪದ ದುಡ್ಡು ಬೇಡ ಅನ್ನುವುದುಂಟಾ? ವಿದ್ಯುತ್ ಅಥವಾ ಬೆಂಗಳೂರಿನ ಮೋರಿ ನೀರು ಬಳಸಿ ಮತ್ತೇನಾದರೂ ಹೊಸ ತಂತ್ರಕ್ಕೆ ಕೈ ಹಾಕಿರಬಹುದಾ?

ಉಂಡ ಋಣವನು ಬಂದು ತೀರಿಸಿದ

ಗಡ್ಕರಿ ಮಗನ ಮದುವೆಗೆ 5 ಕೋಟಿ!











ರಾಷ್ಟ್ರ ಬಿಜೆಪಿಯ ದೊಣ್ಣೆನಾಯಕ ಗಡ್ಕರಿ ತನ್ನ ಮಗನಿಗೆ ಮೂರೂವರೆ ಕೋಟಿಯ ಮರ್ಸಿಡಸ್ ಬೆಂಜ್ ಕಾರನ್ನೂ ಜೊತೆಗೆ ಹದಿಮೂರು ಕೋಟಿಯ ಭವ್ಯ ಬಂಗಲೆಯನ್ನೂ ಮದುವೆಯ 'ಗಿಫ್ಟ್' ಆಗಿ ಕೊಟ್ಟ ಸುದ್ದಿ ಕೇಳಿ ಯಾರೆಷ್ಟು ಬೆಸ್ತು ಬಿದ್ದರೋ ಗೊತ್ತಿಲ್ಲ, ಆದರೆ ಕರ್ನಾಟಕದ ಕೆಲ ಆರೆಸ್ಸೆಸ್ ಪರಿಷ್ಕರಿಗೆ ಮಾತ್ರ ಹಣೆ ಚಚ್ಚಿಕೊಳ್ಳದೇ ಬೇರೆ ವಿಧಿಯೇ ಇಲ್ಲ.


ಡಿಸೆಂಬರ್ 7ರಂದು ಏಕಾಏಕಿ ಬೆಂಗಳೂರಿಗೆ ಬಂದು ಮುಖ್ಯಮಂತ್ರಿ ಯಡಿಯೂರಪ್ಪನವರ ಭ್ರಷ್ಟ ಸರ್ಕಾರಕ್ಕೆ 'ಶಹಭಾಷ್‌ಗಿರಿ'ಯ ಸರ್ಟಿಫಿಕೇಟು ಕೊಟ್ಟು, ಲೋಕಾಯುಕ್ತರ ವಿರುದ್ಧವೇ ಕಿಡಿಕಾರಿಹೋದ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿಯ ಇಂಥ 'ಅನಿರೀಕ್ಷಿತ' ವರ್ತನೆಗೂ ಮತ್ತು ಡಿಸೆಂಬರ್ ಮೂರರಂದು ನಾಗಪುರದಲ್ಲಿ ನಡೆದ ಗಡ್ಕರಿ ಪುತ್ರ ನಿಖಿಲ್ ಗಡ್ಕರಿಯ ಮದುವೆಗೂ ಸಂಬಂಧವಿದೆ.

ಗಡ್ಕರಿ ಪುತ್ರನ ಮದುವೆಯಲ್ಲಿ ಬಹುಶಃ ಯಡ್ಡಿಯಷ್ಟು ನರೇಂದ್ರ ಮೋದಿ ಕೂಡ ಮಿಂಚಿರಲಿಕ್ಕಿಲ್ಲ. ಮದುವೆಯ ಹಿಂದಿನ ರಾತ್ರಿಯೇ ಗಡ್ಕರಿಯ ನಾಗಪುರದ 'ರಾಜವಾಡಾ' ಅರಮನೆಯಲ್ಲಿ ನೆಂಟರಿಷ್ಟರಂತೆ ಯಡ್ಡಿ ಓಡಾಡಿದ್ದು, ಮರು ದಿನ ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪನವರ ಜೊತೆ ವಧುವರನ ಜೊತೆ ಫೋಟೋ ತೆಗೆಸಿಕೊಂಡಿದ್ದು, ಗಡ್ಕರಿಯ ಧರ್ಮಪತ್ನಿ ಕಾಂಚನ್ ಪಕ್ಕ ನಿಂತು ಪದೇಪದೇ ಪೋಸು ಹೊಡೆಯುತ್ತಿದ್ದದ್ದು, ಗಡ್ಕರಿಯ ಮತ್ತೊಬ್ಬ ಪುತ್ರ ಸಾರಂಗ್ ಜೊತೆ ಮಗ ರಾಘವೇಂದ್ರನನ್ನು ಬಿಟ್ಟು 'ಪೋ' ಕೊಟ್ಟದ್ದು. ಹೀಗೆ ಗಡ್ಕರಿ ಮಗನ ಮದುವೆಯಲ್ಲಿ ಯಡ್ಡಿಯ ಪಾರುಪತ್ತೆ ಕೊಂಚ 'ಅತೀ' ಎನ್ನಿಸಿದರೂ ಅದಕ್ಕೊಂದು ನಿಗೂಢ ಕಾರಣವಿದ್ದೇ ಇತ್ತು.


ಅದು ಗಡ್ಕರಿ ಮದುವೆಗೆಂದು ಮುಖ್ಯಮಂತ್ರಿ ಯಡ್ಡಿ ಸಲ್ಲಿಸಿದ ಐದು ಕೋಟಿಯ ಕಿರುಕಾಣಿಕೆಯ ಫಲಶ್ರುತಿ!

ಐದು ಕೋಟಿ?

ಸದ್ಯ ಮತ್ತೊಬ್ಬ ರಾಷ್ಟ್ರನಾಯಕ ಅನಂತ್ ಬಳಗವಾಗಲಿ, ಆರೆಸ್ಸೆಸ್‌ನ ಕೆಲ ಟಾಪ್ ನಾಯಕರಾಗಲಿ, ಬಿಜೆಪಿಯದ್ದೇ ಮುಖ್ಯಮಂತ್ರಿಯ ಆಪ್ತ ಬಳಗವಾಗಲಿ; ಗಡ್ಕರಿ ಪುತ್ರನ ಮದುವೆಗೆ ಯಡ್ಡಿಕೊಟ್ಟ 'ಕಪ್ಪ'ದ ಬಗ್ಗೆ ತಕರಾರೆತ್ತುತ್ತಿಲ್ಲ, ಕನಿಷ್ಠ ಐದುಕೋಟಿಗಿಂತಲೂ ಕಮ್ಮಿ ಮೊತ್ತವನ್ನು ಗಡ್ಕರಿ ಮುಟ್ಟಲಾರ ಎಂಬುದನ್ನೂ ಇವರ್‍ಯಾರೂ ನಿರಾಕರಿಸುತ್ತಿಲ್ಲ. ಕೇಂದ್ರ ಇಂಟಲಿಜೆನ್ಸ್ ಮೂಲಗಳೇ ಹೇಳುವಂತೆ ಮುಖ್ಯಮಂತ್ರಿ ಯಡ್ಡಿ ಮೂಲಕ ಗಡ್ಕರಿ ಮಗನ ಮದುವೆಗೆ ಸಂದಾಯವಾದ ಮೊತ್ತ ಐದು ಕೋಟಿ!



ಇಲ್ಲದಿದ್ದರೆ ಮಗನ ಮದುವೆ ಮುಗಿಸಿದ ಮರುಗಳಿಗೆಗೇ ಗಡ್ಕರಿ ಬೆಂಗಳೂರಿಗೇಕೆ ಬರುತ್ತಿದ್ದರು? ದೇಶಾದ್ಯಂತ ಯಡ್ಡಿಯ ಭೂ ಹಗರಣದ 'ದುಂದುಭಿ' ಮೊಳಗುತ್ತಿದ್ದರೆ ಬಿಜೆಪಿಯ ರಾಷ್ಟ್ರಾಧ್ಯಕ್ಷನಾಗಿ ಗಡ್ಕರಿಗೆ ಈ ಬಗ್ಗೆ ಕನಿಷ್ಠ ಪ್ರಜ್ಞೆ ಕೂಡ ಇಲ್ಲವೆಂದರೆ ಏನರ್ಥ? ಏಕೆ ಲೋಕಾಯುಕ್ತರ ವಿರುದ್ಧ ಗಡ್ಕರಿ ಕಿಡಿ ಕಾರುತ್ತಾರೆ? ಸರ್ಕಾರದ ಅಸಂಖ್ಯಾತ ಅನಾಚಾರಗಳನ್ನೆಲ್ಲ ಮುಚ್ಚಿಟ್ಟು ಯಾವುದೋ ಮೋರಿ, ಒಳಚರಂಡಿ, ರಸ್ತೆ, ಕೆರೆ ಸುತ್ತಿ ಗಡ್ಕರಿ ಯಡ್ಡಿಗೆ ಬಿರುದು ಬಾವಲಿ ಕೊಟ್ಟು ಪರಾರಿಯಾಗುತ್ತಾರೆ?



ಅದು ಉಂಡ ಋಣವನ್ನು ಬಂದು ತೀರಿಸಿದ ಗಡ್ಕರಿಯ ವೈಖರಿ. ಅಸಲಿಗೆ ಡಿಸೆಂಬರ್ 7ಕ್ಕೆ ಬಿಜೆಪಿ ರಾಷ್ಟ್ರಾಧ್ಯಕ್ಷ ಗಡ್ಕರಿ ಬೆಂಗಳೂರಿಗೆ ಬಂದಿದ್ದೇ ಬೇರೆ ಕಾರಣಕ್ಕೆ. ಅಧಿಕೃತ ಅಜೆಂಡಾ ಅಂದರೆ ಕಾರ್ಯಸೂಚಿಯ ಪ್ರಕಾರವೇ ಬೆಳಗ್ಗೆ 11ಕ್ಕೆ ಬೆಂಗಳೂರಿಗೆ ಬಂದು 11.30ರಿಂದ ಅಪರಾಹ್ನ 1.30ರವರೆಗೆ ಗಡ್ಕರಿ ದೊಡ್ಡೀಸ್ ರೆಸಾರ್ಟ್‌ನಲ್ಲಿ ರಾಜ್ಯ ಬಿಜೆಪಿಯ ಪದಾಧಿಕಾರಿಗಳ ಸಭೆಯಲ್ಲಿರಬೇಕಿತ್ತು. ಅನಂತರ ಮಧ್ಯಾಹ್ನ 2ರಿಂದ 4ರ ತನಕ ಯಡ್ಡಿ ಸಂಪುಟದ ಮಂತ್ರಿಗಳ ಜೊತೆ ಸಮಾಲೋಚಿಸಬೇಕಿತ್ತು. ತದನಂತರ ಸಂಜೆ 7ರವರೆಗೆ ಪ್ರತಿಯೊಬ್ಬ ಬಿಜೆಪಿ ಶಾಸಕರನ್ನು ವೈಯಕ್ತಿಕವಾಗಿ ಮಾತನಾಡಿಸಿ ಮುಖ್ಯಮಂತ್ರಿ ವಿರುದ್ಧದ ದೂರನ್ನು ಆಲಿಸಬೇಕಿತ್ತು. ಇದೆಲ್ಲ ಮುಗಿಸಿದ ನಂತರವೇ ಸಂಜೆ 7ಕ್ಕೆ ಶಾಸಕಾಂಗ ಪಕ್ಷದ ಸಭೆಯನ್ನುದ್ದೇಶಿಸಿ ಮಾತನಾಡಬೇಕಿತ್ತು.

ಸಿ.ಟಿ.ರವಿಯ ಬೇಗುದಿ



ಇದು ಗಡ್ಕರಿಯ ಬೆಂಗಳೂರು ಕಾರ್ಯಕ್ರಮದ ಅಧಿಕೃತ ಕಾರ್ಯ ಸೂಚಿಯಾಗಿತ್ತು. ಈ ಬಗ್ಗೆ ಬಿಜೆಪಿಯ ಪ್ರತಿಯೊಬ್ಬ ಶಾಸಕನಿಗೂ ಮೂರು ದಿನದ ಮೊದಲೇ ಸುತ್ತೋಲೆ ಕಳಿಸಲಾಗಿತ್ತು. ಯಡ್ಡಿ ಸಂಪುಟದ ಪ್ರತಿಯೊಬ್ಬ ಮಂತ್ರಿಗೂ ತಾವು ಕಳೆದ ಎರಡೂವರೆ ವರ್ಷದಲ್ಲಿ ಏನೇನು ಸಾಧನೆಗಳನ್ನು ಮಾಡಿದ್ದೇವೆಂಬುದನ್ನು ದಾಖಲೆ ಸಮೇತ ರಾಷ್ಟ್ರಾಧ್ಯಕ್ಷರಿಗೆ ವಿವರಿಸುವಂತೆ ಮತ್ತೊಂದು ಸುತ್ತೋಲೆಯನ್ನೂ ರವಾನಿಸಲಾಗಿತ್ತು.

ಈ ಪ್ರಕಾರವೇ ಅನೇಕ ಮಂತ್ರಿಗಳು ತಮ್ಮ ಸಾಧನೆ ಮತ್ತು ಮುಖ್ಯಮಂತ್ರಿ ವಿರುದ್ಧದ ದೂರುಗಳ ಪಟ್ಟಿಯನ್ನೇ ರೆಡಿ ಮಾಡಿಟ್ಟುಕೊಂಡಿದ್ದರು. ವಿಶೇಷವಾಗಿ ಗಣಿರೆಡ್ಡಿಗಳ ಗ್ಯಾಂಗ್ ಯಡ್ಡಿ ವಿರುದ್ಧ ದೂರಿನ ಪಟ್ಟಿಯನ್ನೇ ಹಿಡಿದು ಗಡ್ಕರಿಗೆ ಸಲ್ಲಿಸಲು ಅಣಿಯಾಗಿತ್ತು, ಶೆಟ್ಟರ್ ಬಣದ ಒಂದಿಬ್ಬರು ಶಾಸಕರು, ಸಿ.ಟಿ.ರವಿ, ಲಿಂಬಾವಳಿ; ಹೀಗೆ ಯಡ್ಡಿ ವಿರುದ್ಧ ರಾಷ್ಟ್ರಾಧ್ಯಕ್ಷರ ಮುಂದೆ ಬೇಗುದಿ ತೋಡಿಕೊಳ್ಳಲು ಕನಿಷ್ಠ ದಜನ್ನಿನಷ್ಟು ಶಾಸಕರು ತುದಿಗಾಲಲ್ಲಿ ನಿಂತಿದ್ದರು.

ಆದರೆ ಮಧ್ಯಾಹ್ನ 2ಕ್ಕೆ ರಾಜ್ಯ ಪದಾಧಿಕಾರಿಗಳ ಸಭೆ ಮುಗಿಸಿ ತಮ್ಮ ಊಟ ಪೂರೈಸಿಕೊಂಡಿದ್ದೇ ಗಡ್ಕರಿ ಯಡ್ಡಿ ಜೊತೆ ಬೆಂಗಳೂರು ನಗರ ಸಂಚಾರಕ್ಕೆ ಹೊರಟುಬಿಟ್ಟರು. ಸರ್ಕಾರದ ಶುದ್ಧೀಕರಣದ ಬಗ್ಗೆ ತಲೆಕೆಡಿಸಿಕೊಳ್ಳಬೇಕಿದ್ದ ಗಡ್ಕರಿ ಅದಕ್ಕೊಂದು ವಿಕಟವ್ರೋ ಎಂಬಂತೆ ಮೈಸೂರು ರಸ್ತೆಯ ಕೊಳಚೆ ನೀರು ಶುದ್ಧೀಕರಣ ಘಟಕದಲ್ಲಿ ಪ್ರತ್ಯಕ್ಷರಾಗುತ್ತಾರೆ. ಇದಕ್ಕೂ ಮುನ್ನ ನಾಯಂಡಳ್ಳಿಯಲ್ಲಿ ಅಂಡರ್ ಪಾಸ್ ಕಾಮಗಾರಿಗೆ ಭೇಟಿಕೊಡುತ್ತಾರೆ. ಅನಂತರ ಕೆಂಗೇರಿ ಸಮೀಪದ ಕೊಮ್ಮಘಟ್ಟ ಕೆರೆಗೊಂದು ಸುತ್ತುಹಾಕುತ್ತಾರೆ.

ಇದ್ಯಾವುದೂ ಮಹಾನ್ ಸಾಧನೆಗಳಾಗಲಿ, ಯಡ್ಡಿ ಸರ್ಕಾರ ಹೇಳಿಕೊಳ್ಳುವಂಥ ಕಾರ್ಯಕ್ರಮಗಳಾಗಲಿ ಅಲ್ಲದ ಮಾಮೂಲಿ ಕಾಮಗಾರಿಗಳು. ಅದೇನು ವಿಶೇಷವೆಂದು ಯಡ್ಡಿಯ ಜೊತೆ ಗಡ್ಕರಿ ಬಂದು ಇವೆಲ್ಲವನ್ನೂ ನೋಡಿದರೋ ಯಾರಿಗೂ ಅರ್ಥವಾಗಲಿಲ್ಲ. ಆದರೆ ಗಡ್ಕರಿ ಅದೇನೋ ಅದ್ಭುತ ಕಂಡವರಂತೆ ರಿಂಗರೋಡ್, ಮೆಟ್ರೋ ಕಾಮಗಾರಿಗಳನ್ನು ಹೊಗಳತೊಡಗಿದರು. ಮೂಲ ಸೌಕರ್ಯಗಳ ವಿಷಯದಲ್ಲಿ ಕರ್ನಾಟಕ ದೇಶಕ್ಕೆ ಮಾದರಿ ಎಂದೂ, 'ಇ' ಗವರ್ನೆನ್ಸ್‌ನಲ್ಲಿ ರಾಜ್ಯ ನಂಬರ್ ವನ್ ಎಂದೂ ಅಸಂಬದ್ಧವಾಗಿ ಬಡಬಡಿಸುತ್ತಿದ್ದರು. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅತ್ಯುತ್ತಮವಾಗಿ ಆಡಳಿತ ನಡೆಸುತ್ತಿರುವುದಕ್ಕೆ ಪಕ್ಷದ ಅಧ್ಯಕ್ಷನಾಗಿ ನಾನು ಹೆಮ್ಮೆ ಪಡುತ್ತೇನೆ ಎಂದು ಅತಿರೇಕದ ಡೈಲಾಗ್ ಹೊಡೆದೇಬಿಟ್ಟರು.

ಹೈಜಾಕ್

ಪೆಚ್ಚು ಬಿದ್ದ ಪತ್ರಕರ್ತರು 'ಅಲ್ರೀ... ಯಾವ್ಯಾವ ಕಾಮಗಾರಿಗಳನ್ನು ನೋಡಿ ನೀವು ಯಡಿಯೂರಪ್ಪನವರಿಗೆ ಶಹಭಾಷ್‌ಗಿರಿ ಕೊಡ್ತಿದ್ದೀರೋ ಅವೆಲ್ಲವೂ ಹಿಂದಿನ ಸರ್ಕಾರದ ಯೋಜನೆಗಳಲ್ಲವೇನ್ರೀ...?' ಎಂದರೆ ಗಡ್ಕರಿಯ ಮುಖದಿಂದ ಬೆವರು ಕಿತ್ತು ಬರುತ್ತಿತ್ತು!

ಇದರರ್ಥ ಯಡ್ಡಿಯನ್ನು ಸಮರ್ಥಿಸಿಕೊಳ್ಳಲು ಗಡ್ಕರಿಯ ಬಳಿಯೇ ನಿಖರ ಕಾರಣಗಳಿರಲಿಲ್ಲ. ಯಡ್ಡಿಯನ್ನು ಬೆಂಬಲಿಸಿ ತಾನು ಆಡಿದ ಮಾತಿಗೇ ಸಮಂಜಸ ಪುರಾವೆಯಿರಲಿಲ್ಲ. ಎಲ್ಲಿ ತನ್ನ ವಿರುದ್ಧ ಶಾಸಕರು-ಮಂತ್ರಿಗಳು ದೂರು ಕೊಟ್ಟಾರೋ ಎಂಬ ಭೀತಿಗೆ ಬಿದ್ದೇ ಯಡ್ಡಿ ಅಧಿಕೃತ ಕಾರ್ಯಕ್ರಮದಿಂದ ಗಡ್ಕರಿಯನ್ನು ಹೈಜಾಕ್ ಮಾಡಿಕೊಂಡು ಮೋರಿ-ಕೆರೆ ಎಂದು ಸುತ್ತಾಡಿಸಿ ಟೈಂಪಾಸ್ ಮಾಡಿಸಿದ್ದರು.

ಮುಖ್ಯಮಂತ್ರಿ ವಿರುದ್ಧದ ಶಾಸಕರು-ಮಂತ್ರಿಗಳ ದುಮ್ಮಾನ ಕೇಳಬೇಕಿದ್ದ ಗಡ್ಕರಿ ಅದನ್ನು ಮರೆತು ಯಡ್ಡಿ-ಕರಂದ್ಲಾಜೆ ಜೊತೆ ರೌಂಡಿಂಗ್ ಹೊರಟುಬಿಟ್ಟರು. ದೊಡ್ಡೀಸ್ ರೆಸಾರ್ಟ್‌ಗೆ ಮತ್ತೆ ಗಡ್ಕರಿ ಹಾಜರಾಗಿದ್ದು ಸಂಜೆ ಏಳೂವರೆಯ ಹೊತ್ತಿಗೆ. ಅಲ್ಲಿಗೆ ಶಾಸಕರು-ಮಂತ್ರಿಗಳ ರಹಸ್ಯ ವಿಚಾರಣೆಯ ಗಡ್ಕರಿ ಕಾರ್ಯಕ್ರಮವೇ ರದ್ದಾಗಿತ್ತು. ಆನಂತರ 7.30ರಿಂದ ಶುರುವಾದ ಶಾಸಕಾಂಗ ಪಕ್ಷದ ಸಭೆಯಲ್ಲಿ ಗಣಿ ಖದೀಮ ಜನಾರ್ದನ ರೆಡ್ಡಿ ಪರೋಕ್ಷವಾಗಿ ಯಡ್ಡಿಯನ್ನು ಕುಟುಕಿದ್ದು ಬಿಟ್ಟರೆ ಗಡ್ಕರಿ ಬೆಂಗಳೂರಿಗೆ ಬಂದಿದ್ದ ಉದ್ದೇಶವೇ ಮಣ್ಣು ಪಾಲಾಗಿತ್ತು.

ಮಗನ ಮದುವೆಗೆ ನೆರವಾದ ಋಣವನ್ನು ಇದಕ್ಕಿಂತ ಇನ್ಯಾವ ರೂಪದಲ್ಲಿ ತಾನೇ ತೀರಿಸಲು ಗಡ್ಕರಿಗೆ ಸಾಧ್ಯವಿತ್ತು?



ಮತ್ತೊಂದು ರೀತಿಯಲ್ಲಿ ಯಡ್ಡಿ ವಿರುದ್ಧ ಪಕ್ಷದಲ್ಲಿ ಅಪಸ್ವರಕ್ಕೆ ಅವಕಾಶವೇ ಇಲ್ಲ ಎಂಬರ್ಥದಲ್ಲಿ ಗಡ್ಕರಿ ತಿಪ್ಪೆ ಸಾರಿಸಿಬಿಟ್ಟಿದ್ದ. ಅದು ಗಡ್ಕರಿಯ ಹುಟ್ಟುಗುಣ. ನಿತಿನ್ ಗಡ್ಕರಿ ಮೂಲತಃ ತಾನು ಆರೆಸ್ಸೆಸ್ ಕಾರ್ಯಕರ್ತ ಎಂದೇ ಹೇಳಿಕೊಳ್ಳುತ್ತಾನಾದರೂ ಸ್ವಭಾವತಃ ಆತ ಓರ್ವ ವ್ಯವಹಾರಸ್ಥ. ಮೊನ್ನೆ ಅಂದರೆ ಡಿಸೆಂಬರ್ 2ರಂದು ಮದುವೆಯಾದ ಆತನ ಕುಲಪುತ್ರ ನಿಖಿಲ್ ಗಡ್ಕರಿಯ ಮದುವೆಗೆ ಯಡ್ಡಿ ಕೊಟ್ಟ ಐದು ಕೋಟಿಯೂ ಸೇರಿದಂತೆ ಒಟ್ಟು ತಗುಲಿದ ಖರ್ಚೇ ಇಪ್ಪತ್ತು ಕೋಟಿ!

ಕಾಯಸ್ಥ ಬ್ರಾಹ್ಮಣ

ಬಹುಶಃ ಆರೆಸ್ಸೆಸ್ ನಾಯಕರೇ ನಾಚಿ ತಲೆತಗ್ಗಿಸುವಂತಿತ್ತು ನಿಖಿಲ್ ಗಡ್ಕರಿಯ ಮದುವೆ. ನಾಗಪುರದ ಸಾಮಾನ್ಯ



ಆರೆಸ್ಸೆಸ್ ಕಾರ್ಯಕರ್ತನಾದ ಪುರುಷೋತ್ತಮ್ ಪಾಠಕ್ ಎಂಬಾತನ ಮಗಳು ರಿತುಜಾ ಪಾಠಕ್‌ಳನ್ನು ಗಡ್ಕರಿ ಮಗನಿಗೆ ತಂದುಕೊಂಡಿದ್ದರ ಹಿಂದಿನ ಕಾರಣವೇ ಬೇರೆಯಿತ್ತು. ರಿತುಜಾ ಪಾಠಕ್ ಸಂಸ್ಕೃತದಲ್ಲಿ ಎಂ.ಎ. ಮುಗಿಸಿದ್ದಾಳೆ. ಆ ಮೂಲಕ ಇಡೀ ಆರೆಸ್ಸೆಸ್ ಅನ್ನು ಸರಿಮಾಡಿಕೊಂಡು ತನ್ನ ಸಂಘನಿಷ್ಠೆಯನ್ನು ಪ್ರದರ್ಶಿಸುವುದು ಗಡ್ಕರಿಯ ತಂತ್ರವಾಗಿತ್ತು.

ಗಡ್ಕರಿ ಜಾತಿಯಲ್ಲಿ ಚಂದ್ರಸೇನಿಯಾ ಕಾಯಸ್ಥ ಪ್ರಭು ಬ್ರಾಹ್ಮಣ. ಈ ಕಾಯಸ್ಥ ಪ್ರಭುಗಳು ಎಂದರೆ ಮೀನು ತಿನ್ನುವ ಬ್ರಾಹ್ಮಣರು. ನಾಗಪುರದ ಗಾಂಧಿ ಸಾಗರ್ ಸರೋವರ್ ಏರಿಯಾದಲ್ಲಿರುವ ರಾಜವಾಡಾ ಅರಮನೆಯೇ ಗಡ್ಕರಿಯ ಖಾಯಂ ನಿವಾಸ. ನಿಖಿಲ್ ಗಡ್ಕರಿ, ಸಾರಂಗ್ ಗಡ್ಕರಿ ಮತ್ತು ಮಗಳು ಕೇತಕಿ ಗಡ್ಕರಿ ಎಂಬ ಮೂರು ಮಕ್ಕಳ ಪೈಕಿ ಹಿರಿಯವನಾದ ನಿಖಿಲ್ ಗಡ್ಕರಿಗೆ ದೇಶದ ಯಾವ ಸಂಸ್ಕಾರದ ಸೋಂಕೂ ಇಲ್ಲದಂತೆ ಬೆಳೆಸಿದ್ದು ಇದೇ ನಿತಿನ್ ಗಡ್ಕರಿ. ಮಗ ನಿತಿನ್ ಲ್ಯಾಟಿನ್ ಅಮೆರಿಕಾದ ಜಾನ್ ಹಾಫ್‌ಕಿನ್ಸ್ ವಿಶ್ವವಿದ್ಯಾಲಯದಲ್ಲಿ 'ಇಂಟರ್‌ನ್ಯಾಷನಲ್ ರಿಲೇಷನ್ಸ್' ವಿಷಯದಲ್ಲಿ ಪದವಿ ಪಡೆದು ಅನಂತರ ಹಾರ್ವರ್ಡ್ ಬಿಜಿನೆಸ್ ಸ್ಕೂಲಿಗೆ ಸೇರುತ್ತಾನೆ. ಅಲ್ಲಿ ಎಂ.ಬಿ.ಎ. ಮುಗಿಸುತ್ತಾನೆ. ಇಸ್ರೇಲ್, ಇಟಲಿ, ಫ್ರಾನ್ಸ್, ಜರ್ಮನಿ, ಯುಕೆ, ಸ್ವಿಟ್ಜರ್‌ಲ್ಯಾಂಡ್, ಜಪಾನ್, ಚೈನಾ, ಹಾಂಗ್‌ಕಾಂಗ್, ಸಿಂಗಾಪುರ್, ಮಲೇಷ್ಯಾ, ಅಮೆರಿಕಾ, ಕೆನಡಾ, ಬ್ರೆಜಿಲ್ ಮತ್ತು ಶ್ರೀಲಂಕಾಗಳಲ್ಲಿ ಗಡ್ಕರಿಗೆ ಮೊದಲೇ ಬಿಜಿನೆಸ್ ಇದೆಯಾದ್ದರಿಂದ, ಇದೆಲ್ಲಕ್ಕೂ ಪೂರಕ ವಾಗೇ ನಿಖಿಲ್ ಗಡ್ಕರಿ ವಿದೇಶಿ ವ್ಯಕ್ತಿತ್ವ ರೂಪಿಸಿಕೊಂಡಿದ್ದಾನೆ. ವರ್ಷಪೂರ್ತಿ ವಿದೇಶಗಳನ್ನೇ ಸುತ್ತುತ್ತಿರುತ್ತಾನೆ.

ಪ್ರತಿ ಊಟಕ್ಕೆ 800 ರೂ.

ಮಗನಿಗೆ ಪಕ್ಕಾ ಸನಾತನ ವ್ಯಕ್ತಿತ್ವದ ಕನ್ಯೆ ಬೇಕೆಂದೇ ಗಡ್ಕರಿ ನಾಗಪುರದ ಆರೆಸ್ಸೆಸ್ ಕಾರ್ಯಕರ್ತನ ಮಗಳನ್ನು ತಂದುಕೊಂಡಿದ್ದು. ಆದರೆ ದುಂದುವೆಚ್ಚ ಮತ್ತು ಐಷಾರಾಮದ ವಿಷಯದಲ್ಲಿ ಗಡ್ಕರಿಗೆ ಆರೆಸ್ಸೆಸ್ ಹಂಗಿಲ್ಲ, ಆದರ್ಶದ ಗಂಧವಿಲ್ಲ. ಒಂದು ಮೂಲದ ಪ್ರಕಾರ ಗಡ್ಕರಿ ಮಗನ ಮದುವೆಯಲ್ಲಿ ಭಾಗವಹಿಸಿದ ಒಟ್ಟು ಜನರ ಸಂಖ್ಯೆಯೇ ಹತ್ತು ಲಕ್ಷಕ್ಕೂ ಅಧಿಕ!

ಡಿಸೆಂಬರ್ ಎರಡರಂದು ನಾಗಪುರದ ರಾಜವಾಡಾ ಅರಮನೆಯಲ್ಲಿ ನಡೆದ ಪಕ್ಕಾ ಬ್ರಾಹ್ಮಣ ಶೈಲಿಯ ಮದುವೆಯ ನಂತರ ಡಿಸೆಂಬರ್ 3ರಂದು ನಾಗಪುರಕ್ಕೆ 18 ಕಿ.ಮೀ. ದೂರದ ಜಮತಾ ಗ್ರಾಮದ ವಿಭಾಗ ಕ್ರಿಕೆಟ್ ಅಸೋಸಿಯೇಷನ್‌ನ ವಿಶಾಲ ಸ್ಟೇಡಿಯಂ ಅನ್ನೇ ಬಾಡಿಗೆಗೆ ಹಿಡಿದು ಅತೀ ಗಣ್ಯರಿಗೆಂದೇ ಪ್ರತ್ಯೇಕ ಆರತಕ್ಷತೆಯನ್ನು ಇಡಲಾಗಿತ್ತು. ಕನಿಷ್ಠ 2 ಲಕ್ಷ ಮಂದಿ ಭಾಗವಹಿಸಿದ್ದ ವಿವಿಐಪಿಗಳ ಆರತಕ್ಷತೆಯಲ್ಲಿ ಪ್ರತಿ ಊಟದ ಬೆಲೆ 800 ರೂಪಾಯಿಗಳಷ್ಟಿತ್ತು. ಅಂದರೆ ಡಿಸೆಂಬರ್ 3ರ ಅತೀ ಗಣ್ಯರ ಆರತಕ್ಷತೆಯ ಊಟದ ಖರ್ಚೇ 1.60 ಕೋಟಿ!

ಇದರ ಮರುದಿನ ಅಂದರೆ ನಾಗಪುರದ ರೇಷಿಮ್ ಭಾಗ್ ಮೈದಾನದಲ್ಲಿ 6 ಲಕ್ಷ ಜನಕ್ಕೊಂದು ಕಾಮನ್ ರಿಸೆಪ್ಷನ್ ಏರ್ಪಡಿಸಲಾಗಿತ್ತು. ಇಲ್ಲಿ ಪ್ರತಿ ಊಟದ ಬೆಲೆ 400 ರೂಪಾಯಿ. ಅಂದರೆ 6 ಲಕ್ಷ ಜನಕ್ಕೆ 2.40ಕೋಟಿ! ಅಲ್ಲಿಗೆ ಕೇವಲ ಎರಡು ಆರತಕ್ಷತೆಗಳ ಒಟ್ಟು ಊಟದ ಖರ್ಚೇ 4 ಕೋಟಿಯಾಯ್ತು. ಇನ್ನು ಅತಿಥಿಗಳ ಹೋಟೆಲ್ ವಸತಿಯ ವೆಚ್ಚ ಅತೀ ಗಣ್ಯರಿಗೆ ದುಬಾರಿಯ ಕಾಣಿಕೆಗಳು, ಸಾರಿಗೆ, ಆಮಂತ್ರಣ ಇತ್ಯಾದಿಗಳೆಲ್ಲ ಸೇರಿಬಿಟ್ಟರೆ ಮಗನಿಗೆಂದು ಗಿಫ್ಟು ಕೊಟ್ಟ ಬೆಂಜ್ ಕಾರು ಮತ್ತು 13 ಕೋಟಿಯ ಬಂಗಲೆಯ ಅರ್ಧದಷ್ಟಾದರೂ ಆಗಲೇಬೇಕು.

ಪಕ್ಷದ ರಾಷ್ಟ್ರಾಧ್ಯಕ್ಷನ ಮಗನ ಮದುವೆಗೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಯಡ್ಡಿ ಕನಿಷ್ಠ ಐದು ಕೋಟಿಯನ್ನಾದರೂ ಕೊಡದಿದ್ದರೆ ಹೇಗೆ? ಈ ಐದು ಕೋಟಿಗೆ ಯಾವ ಬಿಡಿಎ ಸೊತ್ತು ಬಿಕರಿಯಾಯಿತೋ ಅಥವಾ ಯಾವ ಅರಣ್ಯಭೂಮಿಯಲ್ಲಿ ಯಾವ ಗಣಿಕಳ್ಳ ಅದಿರು ದೋಚುತ್ತಾನೋ ಗೊತ್ತಿಲ್ಲ, ಅಂತೂ ಗಡ್ಕರಿ ಯಡ್ಡಿಯ ಋಣ ತೀರಿಸಿದ್ದಾರೆ. ಯಡ್ಡಿ ವಿರುದ್ಧ ದೂರು ಸ್ವೀಕರಿಸಲೆಂದು ಬಂದು ಭ್ರಷ್ಟಾಚಾರಕ್ಕೆ ಶಹಭಾಸ್‌ಗಿರಿಯ ಸರ್ಟಿಫಿಕೇಟು ಕೊಟ್ಟಿದ್ದಾರೆ. ದುರಂತವೆಂದರೆ ಒಬ್ಬ ಭ್ರಷ್ಟ ಮುಖ್ಯಮಂತ್ರಿಯನ್ನು ಸಮರ್ಥಿಸಿಕೊಳ್ಳುವ ಪಕ್ಷಾಧ್ಯಕ್ಷನಿಗೆ ಮುಖದಲ್ಲಿ ನಾಚಿಕೆಯ ಕನಿಷ್ಠ ಸೂಚನೆ ಕೂಡ ಕಾಣುತ್ತಿಲ್ಲ.

• ರಾ.ಸೋಮನಾಥ್


ಮಲ್ಲೇಶ್ವರಂ ತ್ರಿಬಲ್ ಮರ್ಡರ್
ಸುನೀಲನ ಶಿಷ್ಯರ ರಕ್ತದೋಕುಳಿ

ಆರತಕ್ಷತೆ ಮುಗಿಸಿದ ವಧುವವರ ಕಣ್ಣೆದುರೇ ಭೀಕರ ಹತ್ಯಾಕಾಂಡವೊಂದು ನಡೆದು ಹೋಗಿತ್ತು.

ಹರಸಲು ಬಂದವರು, ಉಡುಗೋರೆ ತಂದವರು, ಗಂಡು ಹೆಣ್ಣನ್ನು ಆಶೀರ್ವದಿಸಿ ಊಟ ಮುಗಿಸುತ್ತಿದ್ದಂತೆಯೇ ಮುಂದೆ ಎರಡು ರೌಡಿ ಗ್ಯಾಂಗ್‌ಗಳು ಉದ್ದುದ್ದದ ಲಾಂಗ್‌ಗಳನ್ನು ಹಿಡಿದು ಒಬ್ಬರನ್ನೊಬ್ಬರು ಕತ್ತರಿಸುತ್ತಿದ್ದರೆ ಮದುವೆಯ ಆರತಕ್ಷತೆಗೆ ಬಂದವರ ಪಾಡು ಏನಾಗಬೇಡ?

ಅದೂ ಎಂಥಾ ಭೀಕರವೆಂದರೆ ರೌಡಿಗಳ ಹಿಂಡೊಂದು ಝಳಪಿಸುತ್ತಾ ಆರತಕ್ಷತೆಯಿದ್ದ ಹೋಟೆಲಿಗೇ ನುಗ್ಗಿತ್ತು. ಹಾಗೆ ಉದ್ದದ ಲಾಂಗ್ ಹಿಡಿದು ನುಗ್ಗಿ ಬಂದ ಮೊದಲಿಗನ ಹೆಸರು ಲಂಬೂ ನಟರಾಜ. ಆತನ ಬೆನ್ನಿಗೆ ಸುಬ್ರಮಣಿ ಉರ್ಫ್ ಸ್ಲಂ ಬಾಲ ಮತ್ತು ಸೋಮಶೇಖರ್ ಮಹಡಿಹತ್ತಿ ಬಂದು ಕಂಡಕಂಡವರ ಮೇಲೆ ಲಾಂಗ್ ಬೀಸಲಾರಂಭಿಸಿದ್ದರು. ಆನಂತರ ನಡೆದದ್ದು ನಿಜಕ್ಕೂ ಭಯಾನಕ. ನುಗ್ಗಿ ಬಂದವನನ್ನು ಆರತಕ್ಷತೆಯಲ್ಲಿದ್ದ ಮತ್ತೊಂದು ತಂಡ ಕಚಕಚನೆ ಎಲ್ಲರೆದುರೇ ಕತ್ತರಿಸಿ ಹಾಕಿತು. ಆತನ ಜೊತೆಗಿದ್ದ ಸೋಮಶೇಖರ ಮತ್ತು ಸ್ಲಂ ಬಾಲರನ್ನು ಹೋಟೆಲಿನ ಎರಡನೇ ಮಹಡಿಯಲ್ಲೇ ಸುತ್ತುವರಿದು ಎದುರಾಳಿ ಗ್ಯಾಂಗ್ ತುಂಡರಿಸಿ ಹಾಕಿತ್ತು.

ಅರೆಕ್ಷಣದಲ್ಲೇ ಮದುವೆಯ ಸಂಭ್ರಮದಲ್ಲಿದ್ದ ಹೋಟೆಲು ರಣರಂಗದ ಭಗ್ನಾವಶೇಷವಾಗಿ ಹೋಗಿತ್ತು. ಮೂರನೇ ಮಹಡಿಯಲ್ಲಿ ಲಂಬೂ ನಟರಾಜನ ಹೆಣ, ಎರಡನೇ ಮಹಡಿಯಲ್ಲಿ ಸೋಮಶೇಖರ ಮತ್ತು ಸ್ಲಂ ಬಾಲಾರ



ಜೋಡಿ ಕೊಲೆ; ಹೀಗೆ ಒಂದೇ ಗ್ಯಾಂಗಿನ ಮೂವರು ಹಂತಕರು ಕ್ಷಣಾರ್ಧದಲ್ಲೇ ಹೆಣಗಳಾಗಿ ಹೋಗಿದ್ದರು.

ಆರತಕ್ಷತೆಗೆ ಬಂದಿದ್ದ ಹೆಂಗಸರು ಮಕ್ಕಳ ಆರ್ತನಾದ, ಎದೆ ಬಡಿದುಕೊಂಡು ಚೀರಾಡುತ್ತಿದ್ದ ವಧುವಿನ ಆಕ್ರಂದನ, ಹೋಟೆಲಿನ ಎರಡೂ ಮಹಡಿಗಳಲ್ಲಿ ಓಕುಳಿಯಾಡಿದ ರಕ್ತ, ಕತ್ತರಿಸಿ ಕೊಂದವರ ಹೇಶಾರವ, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಮಚ್ಚು ಲಾಂಗುಗಳ ರೌರವ ಮತ್ತು ಬಿದ್ದಿದ್ದ ಹೆಣಗಳ ಭೀಭತ್ಸ; ಎಲ್ಲವೂ ಭಯಂಕರ ಗ್ಯಾಂಗ್‌ವಾರ್ ಒಂದರ ಜೀವಂತ ಸಾಕ್ಷಿಗಳಂತಿದ್ದವು.

ಇದು ಡಿಸೆಂಬರ್ ನಾಲ್ಕರ ರಾತ್ರಿ ಮಲ್ಲೇಶ್ವರದ ಸಂಪಿಗೆ ರಸ್ತೆಯ ನ್ಯೂ ಶಾಂತಿಸಾಗರ್ ಹೋಟೆಲಿನ ಪಾರ್ಟಿ ಹಾಲಿನಲ್ಲಿ ನಡೆದ ರಕ್ತಪಾತದ ಸಂಕ್ಷಿಪ್ತ ಚಿತ್ರಣವಷ್ಟೆ. ಕೊಲೆಯಾದವರು ಮತ್ತು ಕೊಂದವರು ಇಬ್ಬರೂ ಸೈಲೆಂಟ್ ಸುನೀಲನ ಬಂಟರೆ. ಕೊಲ್ಲಲು ಬಂದ ಲಂಬೂ ನಟರಾಜನ ಗ್ಯಾಂಗಿಗೂ, ಕೊಂದು ಹಾಕಿದ ಪ್ರಶಾಂತನ ತಂಡಕ್ಕೂ ಇದ್ದ ದುಷ್ಮನಿಗೆ ಕಾರಣವಾದದ್ದು 2009 ರ ಮಾರ್ಚ್ 28 ರಂದು ನಡೆದ ಕುಳ್ಳಾ ನಟರಾಜನ ಹತ್ಯೆ!

ಈಗ ಕೊಲೆಯಾದ ಲಂಬೂ ನಟರಾಜ, ಸೋಮ ಮತ್ತು ಸ್ಲಂಬಾಲ; ಮೂವರೂ ಹತ ಕುಳ್ಳಾ ನಟರಾಜನ ಅನುಯಾಯಿಗಳೆ. ಗುಟ್ಟಳ್ಳಿಯ ಕುಳ್ಳಾ ನಟರಾಜ ಇಲ್ಲಿಗೆ ಎರಡು ವರ್ಷದ ಹಿಂದೆ ಶೇಷಾದ್ರಿಪುರದ ಪೈಪ್‌ಲೈನ್ ರಸ್ತೆಗೆ ದೊರೆಯಂತೆ ಮೆರೆಯುತ್ತಿದ್ದ. ಸೈಲೆಂಟ್ ಸುನೀಲನ ಗ್ಯಾಂಗ್ ಚಿಕ್ಕನಕಣ್ ರಾಜೇಂದ್ರನನ್ನು ಮುಗಿಸಿದ ನಂತರ ದಕ್ಕಿದ ಕುಖ್ಯಾತಿಯನ್ನೇ ಬಳಸಿಕೊಂಡು ಬೆಳೆಯಲು ಹೊರಟಿದ್ದ ಕುಳ್ಳಾ ನಟರಾಜನಿಗೆ ದೊಡ್ಡ ತಲೆನೋವಿನಂತಿದ್ದದ್ದು ಪೈಪ್‌ಲೈನ್ ಶೇಖ್ರಿ!

ಆ ಹೊತ್ತಿಗೆ ಕುಳ್ಳಾ ನಟರಾಜನ ತಾಕತ್ತೇ ಹಾಗಿತ್ತು, ಶೇಷಾದ್ರಿಪುರದ ಪೈಪ್‌ಲೈನಿನ ಲಂಬೂ ನಟರಾಜ, ಪ್ರಶಾಂತ್, ಚಲುವ, ಉಮಾಶಂಕ್ರ, ಸೋಮಶೇಖರ್, ಸ್ಲಂ ಬಾಲ, ಪುಲಿ ಆಲಿಯಾಸ್ ಪ್ರಭಾಕರ, ಕರಿಯ, ಕಿರಣ್, ಸುನೀಲ; ಹೀಗೆ ಗುಟ್ಟಳ್ಳಿ, ಪೈಪ್‌ಲೈನ್, ಕೋದಂಡರಾಂಪುರದ ಪೋರ್ಕಿಗಳೆಲ್ಲ ಕುಳ್ಳಾ ನಟರಾಜನ ಮೂಲಕ ಸುನೀಲನ ಗ್ಯಾಂಗಿಗೆ ಜಮೆಯಾಗಿದ್ದರು. ಕೆಲವೇ ದಿನಗಳಲ್ಲಿ ಕುಳ್ಳಾ ನಟರಾಜ ಪೈಪ್‌ಲೈನ್ ಶೇಖ್ರಿಯನ್ನು ಮುಗಿಸಿ ಹಾಕಿದ. ಆತನ ಬಂಟ ಸೆಲ್ವಂ ಎಂಬಾತನನ್ನೂ ಕುಯ್ದು ಓಡಿಸಿಬಿಟ್ಟ.

ಆದರೆ ಮೀಟರ್ ಬಡ್ಡಿಯ ಕ್ಯಾತೆಯಲ್ಲಿ ಕುಳ್ಳಾ ನಟರಾಜನ ಜೊತೆಗಿದ್ದೇ ಪ್ರಶಾಂತ್ ಕತ್ತಿ ಮಸೆಯ ತೊಡಗಿದ. ಪೈಪ್‌ಲೈನ್‌ನ ಮೀಟರ್ ಬಡ್ಡಿ ದಂಧೆಯಲ್ಲಿ ಕೊಂಚ



ಲಂಬೂ ನಟರಾಜ, 'ೀಮಶೇಖರ , ಸ್ಲಂ ಬಾಲ, ಪ್ರಶಾಂತ, ಪ್ರಬಿ

ಹೆಸರು ಮಾಡಿದ್ದ ಪ್ರಶಾಂತ್ ಮತ್ತು ಪ್ರಬಿ ಸಹೋದರರು ಕ್ರಮೇಣ ತಮ್ಮದೇ ಪ್ರತ್ಯೇಕ ಗ್ಯಾಂಗ್ ಕಟ್ಟಲಾರಂಭಿಸಿದರು. ಇದು ಗೊತ್ತಾಗಿದ್ದೇ ಕುಳ್ಳಾ ನಟರಾಜ್ ಅಲರ್ಟ್ ಆದನಾದರೂ ಆತನ ಪ್ರೇಯಸಿ ಶಾಲಿನಿಯ ಮೋಹಕ್ಕೆ ಬಿದ್ದು ಯಾಮಾರಿಬಿಟ್ಟ.

೨೦೦೯ ರ ಮಾರ್ಚ್ ೨೮ ರಂದು ಗೆಳತಿ ಶಾಲಿನಿ ಜೊತೆ ಶೇಷಾದ್ರಿಪುರದ ಲಿಂಕ್ ರಸ್ತೆಯ ಬ್ರಾಡ್ವೇ ಟೈಲರ್ ಅಂಗಡಿಗೆ ಬಂದ ಕುಳ್ಳಾ ನಟರಾಜನನ್ನು ಆತನಿಂದ ಕೊಲೆಯಾಗಿದ್ದ ಶೇಖ್ರಿಯ ಶಿಷ್ಯರು ಟೈಲರ್ ಅಂಗಡಿಯಲ್ಲೇ ಕತ್ತರಿಸಿ ಕೊಂದಿದ್ದರು. ಅದೂ ಪ್ರೇಯಸಿಯ ಕಣ್ಣೆದುರಲ್ಲೇ!

ಹೀಗೆ ಕೊಲೆಯಾದ ಕುಳ್ಳಾ ನಟರಾಜನನ್ನು ಆತನ ಜೊತೆಗಿದ್ದೇ ದುಷ್ಮನ್‌ಗಳಿಗೆ ಹಾಕಿಕೊಟ್ಟಿದ್ದು ಮೀಟರ್ ಬಡ್ಡಿ ಪ್ರಶಾಂತ. ಶೇಖ್ರಿ ಗ್ಯಾಂಗಿನ ಕರಿಯ, ಅಶೋಕ, ಚಲುವ, ಆನಂದ, ಭರತ್ ಮುಂತಾದ ಪೋರ್ಕಿಗಳೆಲ್ಲ ಬಡ್ಡಿ ಬ್ರದರ್‌ಗಳಾದ ಪ್ರಬಿ ಮತ್ತು ಪ್ರಶಾಂತ್ ಜೊತೆ ಕೈಜೋಡಿಸಿದ್ದರು.

ಕುಳ್ಳಾ ನಟರಾಜನ ಹತ್ಯೆಗೆ ರಿವೇಂಜ್ ತೀರಿಸಲೆಂದೇ ಶಪಥಗೈದವನು ಲಂಬೂ ನಟರಾಜ. ಜೊತೆಗಿದ್ದ ಗುರುವನ್ನು ಮುಗಿಸಿದ ಪ್ರಶಾಂತನನ್ನು ನಿಕಾಲಿ ಮಾಡಲು ಲಂಬೂ ಏನೆಲ್ಲಾ ಹರಸಾಹಸ ಮಾಡಿದನಾದರೂ ನರಿಬುದ್ಧಿಯ ಪ್ರಶಾಂತ್ ಮಾತ್ರ ಸಿಗಲೇ ಇಲ್ಲ. ರೋಸತ್ತ ಲಂಬೂ ನಟರಾಜನ ಗ್ಯಾಂಗ್ ಕೈಗೆ ಸಿಕ್ಕ ಸೆಲ್ವಂ ತಮ್ಮ ಅಂಜನಿ ಮತ್ತು ರಂಜಿತ್‌ರನ್ನು ಕೊಂದು ಹಾಕಿತು.

ಇತ್ತ ಕುಳ್ಳಾ ನಟರಾಜನ ಕೊಲೆ ಕೇಸಿನಲ್ಲಿ ಜೈಲು ಸೇರಿದ್ದ ಕರಿಯ ಜಾಮೀನು ಗಿಟ್ಟಿಸಿ ಹೊರಬಿದ್ದ. ಲಂಬೂ ನಟರಾಜನಿಗೆ ಸ್ಕೆಚ್ ಹಾಕುತ್ತಲೇ ಇದ್ದ. ಮತ್ತೊಂದೆಡೆ ನಟರಾಜನೂ ಕರಿಯ ಮತ್ತು ಪ್ರಶಾಂತ್ ವಿರುದ್ಧ ಕತ್ತಿ ಮಸೆಯುತ್ತಿದ್ದ. ಇದು ಗೊತ್ತಾಗಿ ಎರಡೂ ಕಡೆಯ ಹುಡುಗರನ್ನು ಜೈಲಿಗೆ ಕರೆಸಿಕೊಂಡ ಸುನೀಲ 'ಬಡಿದಾಡದೇ ತೆಪ್ಪಗಿರುವಂತೆ' ಆವಾಜು ಹಾಕಿ ಕಳಿಸಿದ್ದ. ಆದರೆ ಒಬ್ಬರನ್ನೊಬ್ಬರು ಮುಗಿಸಲು ಹಾತೊರೆಯುತ್ತಿದ್ದವರಿಗೆ ಗುರು ಯಾವ ಲೆಕ್ಕ? ಗ್ಯಾಂಗಿನ ನಿಷ್ಠೆ ತಾನೇ ಯಾವ ಮಹಾ?

ಇನ್ನಿದು ಸರಿಹೋಗುವಂಥದ್ದಲ್ಲ ಎಂದು ಲೆಕ್ಕ ಹಾಕಿದ ಸುನೀಲ 'ನಿಮಿಷ್ಟ, ಏನು ಬೇಕಾದ್ರೂ ಮಾಡ್ಕೊಂಡು ಸಾಯ್ರೀ....' ಎಂದು ಸುಮ್ಮನಾದ. ಈ ಮಧ್ಯೆ ಕರಿಯ ತನ್ನ ನಾಲ್ವರು ಶಿಷ್ಯರ ಜೊತೆ ಬಸವೇಶ್ವರ ನಗರ ಪೊಲೀಸರಿಗೆ ಸಿಕ್ಕುಬಿದ್ದು ಜೈಲು ಪಾಲಾದ. ಇದೇ ಸಮಯ ಕಾದು ಪ್ರಶಾಂತ್‌ನನ್ನು ಮುಗಿಸಲು ಲಂಬೂ ಹವಣಿಸುತ್ತಿದ್ದ. ಅವರು ಸಿಕ್ಕರೆ ಇವರು, ಇವರು ಸಿಕ್ಕರೆ ಅವರು; ಹೀಗೆ ತಂಡಗಳು ಅಣಿಯಾದವು. ಇದಕ್ಕೆ ಸರಿಯಾಗಿ ಬಂದದ್ದು ಶಾಣೇಗೌಡನ ತಂಗಿ ಮದುವೆ.



ಪೈಪ್‌ಲೈನ್ ಗುಟ್ಟಳ್ಳಿಯಲ್ಲಿ ಸೀರಿಯಲ್ ಸೆಟ್ ಅಂಗಡಿ ನಡೆಸುವ ಶಾಣೇಗೌಡ ಮೀಟರ್ ಬಡ್ಡಿ ಪ್ರಶಾಂತನ ಶಿಷ್ಯ. ಈತನ ತಂಗಿಯೇ ಸುಶೀಲಾ. ಈಕೆಗೆ ಶ್ರೀರಾಂಪುರದ ರಮೇಶ್ ಎಂಬ ಹುಡುಗನ ಜೊತೆ ಮದುವೆ ನಿಶ್ಚಯವಾಗಿತ್ತು. ನವೆಂಬರ್ 28 ರಂದು ಯಡಿಯೂರು ಸಿದ್ಧಲಿಂಗೇಶ್ವರ ದೇವಾಲಯದಲ್ಲಿ ಮದುವೆ ನಿಶ್ಚಯವಾಗಿತ್ತು. ಇದನ್ನು ತಿಳಿದ ಲಂಬೂ ನಟರಾಜ ಮದುವೆಗೆ ಪ್ರಶಾಂತ್ ಬಂದೇ ಬರುತ್ತಾನೆಂದು ಯಡಿಯೂರಿನಲ್ಲಿ ಹೊಂಚಿ ಕಾಯುತ್ತಿದ್ದ. ಆದರೆ ಹುಷಾರಾದ ಪ್ರಶಾಂತ್ ಯಡಿಯೂರಿಗೆ ಬರಲೇ ಇಲ್ಲ.

ಇದಾಗಿ ತನ್ನ ಬೆಂಗಳೂರಿನ ಗೆಳೆಯರಿಗೆಲ್ಲ ಪಾರ್ಟಿ ಕೊಡಲೆಂದು ಶಾಣೇಗೌಡ ತಂಗಿ ಮದುವೆಯ ಆರತಕ್ಷತೆಯನ್ನು ಮಲ್ಲೇಶ್ವರದ ಸಂಪಿಗೆ ರಸ್ತೆಯ ನ್ಯೂ ಶಾಂತಿ ಸಾಗರ್ ಹೋಟೆಲಿನಲ್ಲಿ ಇಟ್ಟುಕೊಂಡ. ಇದು ಲಂಬೂ ನಟರಾಜನಿಗೆ ಗೊತ್ತಾಗಲು ಎಷ್ಟು ಹೊತ್ತು? ಶಾಣೇಗೌಡನ ತಂಗಿಯ ಆರತಕ್ಷತೆಗೆ ಪ್ರಶಾಂತ್ ಮತ್ತಾತನ ಅಣ್ಣ ಪ್ರಬಿ ಬಂದೇ ಬರುತ್ತಾರೆಂಬುದು ನಟರಾಜನಿಗೆ ಖಾತರಿಯಾಗಿತ್ತು. ಆದಕ್ಕೆ ತಕ್ಕಂತೆ ಒಂದು ಡಜನ್ ಹುಡುಗರನ್ನು ರೆಡಿ ಮಾಡಿಕೊಂಡ. ಜೊತೆಗೆ ಸಾಕಷ್ಟು ಆಯುಧಗಳನ್ನು ಹೊಂಚಿಕೊಂಡ. ಆರತಕ್ಷತೆಯ ಪ್ರತಿ ವಿವರಗಳನ್ನೂ ಒದಗಿಸಲು ದೇವಿ ಎಂಬ ಹುಡುಗನನ್ನು ಬಿಟ್ಟ.

ನವೆಂಬರ್ ನಾಲ್ಕರ ಸಂಜೆ ಮಲ್ಲೇಶ್ವರದ ಸಂಪಿಗೆ ರಸ್ತೆಯ ನ್ಯೂ ಶಾಂತಿ ಸಾಗರ್ ಹೋಟೆಲಿನ ಎರಡು ಮತ್ತು ಮೂರನೇ ಮಹಡಿಯಲ್ಲಿ ಸಂಭ್ರಮದ ವಾತಾವರಣವಿತ್ತು. ಆರತಕ್ಷತೆ ಸಡಗರದಲ್ಲೇ ನಡೆದಿತ್ತು. ತನ್ನ ಜೊತೆ ಸ್ಲಂ ಬಾಲ, ಸೋಮಶೇಖರ್ ಇತ್ಯಾದಿ ಒಂದು ಡಜನ್ ಹುಡುಗರನ್ನು ರೆಡಿ ಮಾಡಿಕೊಂಡಿದ್ದ ನಟರಾಜ ಶಾಂತಿ ಸಾಗರ್ ಹೋಟೆಲಿನ ಹೊರಗೆ ಮಾರುತಿ ವ್ಯಾನಿನಲ್ಲಿ ಕೂತು ಪ್ರಶಾಂತನಿಗಾಗಿ ಹೊಂಚು ಹಾಕುತ್ತಿದ್ದ. ಮೂರ್‍ನಾಲ್ಕು ಬೈಕುಗಳಲ್ಲಿ ಹುಡುಗರೂ ಬಂದಿದ್ದರು.

ಆರತಕ್ಷತೆಯ ಮಧ್ಯೆಯೇ ದಾಳಿ ನಡೆಸಿದರೆ ಜನರ ಮಧ್ಯೆ ಎಲ್ಲಿ ಪ್ರಶಾಂತ್ ಪರಾರಿಯಾಗುತ್ತಾನೋ ಎಂದು ಮುಗಿಯುವುದನ್ನೇ ಕಾದು ಕೂತಿದ್ದ. ಬಹುಶಃ ಆತನಿಗೆ ಗೊತ್ತಿಲ್ಲದ ಒಂದು ಸಂಗತಿಯೆಂದರೆ ಪ್ರಶಾಂತ್ ಮತ್ತು ಪ್ರಬಿ ಸುಮ್ಮನೇ ಬಂದಿರಲಿಲ್ಲ, ರೆಡಿಯಾಗೇ ಬಂದಿದ್ದರು. ಹಿಂದುಗಟ್ಟಲೇ ಹುಡುಗರು ಜೊತೆಗೆ ಅಣಿ ಮಾಡಿಕೊಂಡೇ ಇದ್ದರು.

ಇದ್ಯಾವುದನ್ನೂ ನಿರೀಕ್ಷಿಸದಿದ್ದ ನಟರಾಜ್ ಊಟ ಮುಗಿಸಿ ಹೊರಬಿದ್ದಿದ್ದೇ ಪ್ರಶಾಂತ್‌ನನ್ನು ಕೊಚ್ಚಿ ಹಾಕಲು ಅಣಿಯಾಗಿದ್ದ. ಪ್ರಶಾಂತ್ ಜೊತೆ ವಿವೇಕಾನಂದ ಬ್ಲಾಕ್‌ನ ಸುನೀಲ, ಬಸಪ್ಪ ಗಾರ್ಡನ್ನಿನ ಉಮಾಶಂಕ್ರ, ಕಿರಣ ಮುಂತಾದ ಇಪ್ಪತ್ತಕ್ಕೂ ಹುಡುಗರ ಹಿಂಡೇ ಆರತಕ್ಷತೆಗೆ ಬಂದಿತ್ತು. ರಾತ್ರಿ ಒಂಭತ್ತೂವರೆಯಹೊತ್ತಿಗೆ ಆರತಕ್ಷತೆ ಮುಗಿಯುತ್ತಿದ್ದಂತೆ ಊಟ ಮುಗಿಸಿದ ಪ್ರಶಾಂತ್ ಮತ್ತು ಪ್ರಭಾಕರ್ ಹೋಟೆಲಿನ ಹೊರಬಾಗಿಲಿಗೆ ಬಂದಿದ್ದಾರೆ.

ಇದನ್ನು ಮೇಲಿನಿಂದಲೇ ದೇವಿ ಫೋನ್ ಮಾಡಿ ತಿಳಿಸಿದ್ದನಲ್ಲ; ಹೊರಬಂದ ಪ್ರಶಾಂತ್ ಮತ್ತು ಪ್ರಬಿಯನ್ನು ನೋಡಿದ್ದೇ ನಟರಾಜನ ಗ್ಯಾಂಗ್ ದಾಳಿಯಿಟ್ಟಿದೆ. ಲಾಂಗ್ ಹಿಡಿದು ನುಗ್ಗಿ ಬಂದ ನಟರಾಜನನ್ನು ನೋಡಿದ್ದೇ ಪ್ರಶಾಂತ್ ಮತ್ತು ಪ್ರಬಿ ಮತ್ತೆ ಹೋಟೆಲಿನೊಳಕ್ಕೇ ಓಡಿದ್ದಾರೆ. ಬಹುಶಃ ನಟರಾಜ್ ಹುಷಾರಾಗಿ ವಾಪಸ್ಸಾಗಿದ್ದರೆ ಬದುಕಿರುತ್ತಿದ್ದನೋ ಏನೋ.

ಆದೇನು ಭಂಡತನವೋ 'ಹುಂಬ' ಧೈರ್ಯವೋ ತನ್ನನ್ನು ತಾನೇ ರಿಸ್ಕಿಗೆ ತಳ್ಳಿಕೊಂಡ ನಟರಾಜ ಅಪಾಯದ ಅರಿವಿದ್ದೂ ಆರತಕ್ಷತೆಯ ಮೂರನೇ ಮಹಡಿಗೆ ನುಗ್ಗಿ ಪ್ರಶಾಂತ್‌ನತ್ತ ಲಾಂಗ್ ಬೀಸಿದ್ದಾನೆ. ಜೊತೆಗೆ ಬಂದಿದ್ದ ಹುಡುಗರು ಹೊರಗೇ ಉಳಿದುಬಿಟ್ಟರು. ಸೋಮಶೇಖ್ರ ಮತ್ತು ಸ್ಲಂ ಬಾಲ ಕೊಂಚ ಹಿಂದಿದ್ದರಿಂದ ಅವರು ಎರಡನೇ ಮಹಡಿಗೆ ಬರುವ ಹೊತ್ತಿಗೆ ನಟರಾಜ್ ಮೂರನೇ ಮಹಡಿಗೆ ನುಗ್ಗಿಬಿಟ್ಟಿದ್ದ. ಏಕಾಂಗಿಯಾಗಿ ಸಿಕ್ಕ ನಟರಾಜನನ್ನು ಮೊದಲೇ ಅಣಿಯಾಗಿದ್ದ ಪ್ರಶಾಂತನ ಪಡೆ ವಧುವರರ ಕಣ್ಣೆದುರಿಗೇ ಕೊಚ್ಚಿ ಹಾಕಿತ್ತು.

ಇತ್ತ ಎರಡನೇ ಮಹಡಿಯಲ್ಲೂ ಸ್ಲಂ ಬಾಲ ಮತ್ತು ಸೋಮಶೇಖ್ರ ಸಲೀಸಾಗಿ ಪ್ರಶಾಂತನ ಗ್ಯಾಂಗ್ ಕೈಗೆ ಸಿಕ್ಕಿಬಿಟ್ಟರು. ಉಮಾಶಂಕ್ರ, ಸುನೀಲ, ಕಿರಣ ಮುಂತಾದ ಪ್ರಶಾಂತನ ಹುಡುಗರೆಲ್ಲ ಸೇರಿ ಇಬ್ಬರನ್ನೂ ಕತ್ತರಿಸಿ ಹಾಕಿದ್ದರು. ಅರೆಕ್ಷಣದಲ್ಲೇ ನ್ಯೂ ಶಾಂತಿ ಸಾಗರ್ ಪಾರ್ಟಿ ಹಾಲಿನಲ್ಲಿ ಮೂರು ಹೆಣ ಬಿದ್ದವು. ಜೊತೆಗೆ ಬಂದಿದ್ದ ನಟರಾಜನ ಹುಡುಗರು ಪರಾರಿಯಾಗಿದ್ದರು. ಜಿದ್ದು, ಹುಂಬತನ, ಅವಿವೇಕ ಎಲ್ಲವೂ ಸೇರಿಕೊಂಡು ಕುಳ್ಳಾ ನಟರಾಜನ ಮೂವರು ಶಿಷ್ಯರನ್ನು ತಿಂದು ಹಾಕಿತ್ತು.

ರೌಡಿಗಳಾಗಲು ಹೊರಟು ಸುನೀಲನ ಜಾಲಕ್ಕೆ ಬಿದ್ದ ಪಡ್ಡೆ ಹುಡುಗರ ದುರಂತಕ್ಕೆ ಇದು ಒಂದು ನಿದರ್ಶನವಷ್ಟೆ.

• ರಾ.ಸೋಮನಾಥ್

ಕರ್ನಾಟಕದ ಜನರಿಗೆ ಒಳ್ಳೆಯ ದಿನಗಳು ಮರಳಿ ಬರುವಂತೆ ಕಾಣುತ್ತಿವೆ. ಪತ್ರಕರ್ತ ವಿಶ್ವೇಶ್ವರ ಭಟ್ಟ ವಿಜಯ ಕರ್ನಾಟಕದ ಸಂಪಾದಕ ಸ್ಥಾನ ತ್ಯಜಿಸಿದ್ದಾರೆ.


ಇನ್ನು ಖಚಿತವಾಗಿ ಹೇಳಬೇಕೆಂದರೆ ವಿಭಟ್ಟರನ್ನು ಟೈಮ್ಸ್ ಗ್ರೂಪ್‌ನ ಓನರ್ ಡಿಸ್‌ಮಿಸ್ ಮಾಡಿದ್ದಾನೆ.

ರಾಜ್ಯದ ಪಾಲಿಗೆ ಶನಿಯಂತೆ ಹೆಗಲೇರಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅಧಿಕಾರದಿಂದ ತೊಲಗುವುದನ್ನು ನೋಡಲಾಗದೆ ನಿರಾಶರಾಗಿದ್ದ ಜನರಿಗೆ ವಿಭಟ್ಟರ ಡಿಸ್‌ಮಿಸ್ ಒಂದು ರೀತಿಯ ಸಮಾಧಾನಕರ ಬಹುಮಾನದಂತೆ ಒದಗಿ ಬಂದಿದೆ.

ಕಳೆದ ಹತ್ತು ವರ್ಷಗಳಿಂದ ಕನ್ನಡ ಪತ್ರಿಕೋದ್ಯಮಕ್ಕೆ ಹಿಡಿದಿದ್ದ ಗ್ರಹಚಾರವೊಂದರಿಂದ ನಿಜಕ್ಕೂ ಈಗ ತಾನೆ ಬಿಡುಗಡೆ ಸಿಕ್ಕಂತಾಗಿದೆ. ನಾಯಿ ಬಿಸ್ಕತ್ ಮಾರುವುದಕ್ಕೂ ಒಂದು ಪತ್ರಿಕೆ ನಡೆಸುವುದಕ್ಕೂ ವ್ಯತ್ಯಾಸವಿಲ್ಲ ಎನ್ನುವಂತೆ ಹೊರಬರಲು ಆಗಲೇ ಇಲ್ಲ. ಹಾಗಾಗಿ ವಿಜಯ ಕರ್ನಾಟಕದ ವರದಿಗಳು, ಕಾಲಂಗಳ ಮಾತಿರಲಿ ಓದುಗರ ಪತ್ರಗಳೂ ಕೋಮುವಾದಿ ಪತ್ರಗಳೇ ಆಗಿ ಪ್ರಿಂಟಾಗುತ್ತಿದ್ದವು.

ಹೀಗೆ ಮೈಯೆಲ್ಲಾ ಕೋಮುವಾದಿ ಗಬ್ಬುನಾತ ಬೀರುವ ಪತ್ರಿಕೆಯನ್ನು ಯಾರೇ ಆಗಲಿ ಎಷ್ಟು ದಿನ ಅಂತ ಸಹಿಸುತ್ತಾರೆ, ಓದುತ್ತಾರೆ? ಮಾಲೀಕರು ಪ್ರತಿ ಮೂರು ತಿಂಗಳಿಗೊಮ್ಮೆ ಸರ್ಕುಲೇಷನ್ನಿನ ಕುಸಿತ ಗಮನಿಸಿದವರೆ ಇನ್ನು ಸಾಕು ಎಂದು ನಿರ್ಧರಿಸಿಕೊಂಡರು. ವಿಭಟ್ಟರಿಗೆ ಗೇಟ್‌ಪಾಸ್ ಕೊಟ್ಟರು. ಆದರೆ ಆಗಬೇಕಾದ ಡ್ಯಾಮೇಜ್ ಆಗಿಯೇ ಹೋಗಿತ್ತು. ವಿಜಯ

ಡಿಸ್‌ಮಿಸ್



> ರಾಜ್ಯದ ಪಾಲಿಗೆ ಶನಿಯಂತೆ ಹೆಗಲೇರಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅಧಿಕಾರದಿಂದ ತೊಲಗುವುದನ್ನು ನೋಡಲಾಗದೆ ನಿರಾಶರಾಗಿದ್ದ ಜನರಿಗೆ ವಿಭಟ್ಟರ ಡಿಸ್‌ಮಿಸ್ ಒಂದು ರೀತಿಯ ಸಮಾಧಾನಕರ ಬಹುಮಾನದಂತೆ ಒದಗಿ ಬಂದಿದೆ. 'ರಾಜೀನಾಮೆ' ಕೊಟ್ಟಿದ್ದಕ್ಕಾಗಿ ವಿಶ್ವೇಶ್ವರ ಭಟ್ಟರಿಗೆ ಧನ್ಯವಾದಗಳು. ಇದರಿಂದ ಕರ್ನಾಟಕಕ್ಕೆ ನಿಜಕ್ಕೂ ಒಳ್ಳೆಯದಾಗಲಿದೆ. ಅದೇ ರೀತಿ ಭಟ್ಟರನ್ನು ಡಿಸ್‌ಮಿಸ್ ಮಾಡಿದ ಟೈಮ್ಸ್ ಮಾಲೀಕರಿಗೂ ಥ್ಯಾಂಕ್ಸ್. ಇದರಿಂದ ಅವರ ಸಂಸ್ಥೆಗೂ ಒಳಿತಾಗಲಿ. ವಿಜಯ ಕರ್ನಾಟಕ ಜನ ಮೆಚ್ಚುವಂತ ದಿನಪತ್ರಿಕೆಯಾಗಿ ಮುಂದುವರೆಯಲಿ.

ಯೋಚಿಸುವ ಟೈಮ್ಸ್ ಆಫ್ ಇಂಡಿಯಾದ ಧಣಿಗಳಿಗೆ ಈ ಜ್ಞಾನೋದಯ ಯಾವ ಮರದ ಕೆಳಗೆ ಆಯಿತು? ಇದು ಯಾವಾಗ ಸಂಭವಿಸಿತು, ಇದಕ್ಕೇನು ಕಾರಣವೆಂದು ಹುಡುಕುತ್ತಾ ಹೊರಟರೆ ಮೂರು ಮುಖ್ಯ ವಿಚಾರಗಳು ಹೊರಬೀಳುತ್ತಿವೆ.

ಒಂದು, ಭ್ರಷ್ಟಾಚಾರ ಮತ್ತು ನಂಬಲಸಾಧ್ಯದ ಡೀಲ್‌ಗಳು. ಎರಡು, ವಿಜಯ ಕರ್ನಾಟಕ ಪೂರ್ತಿ ಕಮ್ಯುನಲ್ ಆಗಿ ಬದಲಾಗಿದ್ದು. ಮೂರನೆಯ ಮುಖ್ಯ ಸಂಗತಿ ಅಂದರೆ ಮೇಲಿನೆರಡು ಕಾರಣಗಳಿಂದಾಗಿ 2010 ನೇ ವರ್ಷದಲ್ಲಿ ವಿಜಯ ಕರ್ನಾಟಕ ಹೆಚ್ಚುಕಡಿಮೆ ಒಂದೂಮುಕ್ಕಾಲು ಲಕ್ಷದಷ್ಟು ಓದುಗರನ್ನು ಕಳೆದುಕೊಂಡಿದ್ದು!

ವಿಭಟ್ಟರಿಗೆ ಗೇಟ್‌ಪಾಸ್ ನೀಡಲು ಇಷ್ಟು ಕಾರಣ ಸಾಕಿತ್ತು. ಇದರರ್ಥ ಟೈಮ್ಸ್ ಆಫ್ ಇಂಡಿಯಾ ಸಾಚಾ ಅಂತಲ್ಲ. ಅದೂ ಕೂಡಾ ದೊಡ್ಡ ಲೆವೆಲ್‌ನಲ್ಲಿ ಡೀಲ್‌ಗಳನ್ನು ಕುದುರಿಸುತ್ತದೆ. ದೊಡ್ಡ ಕಾರ್ಪೊರೇಟ್ ಕಂಪನಿಗಳನ್ನು ತಮ್ಮ ಮೀಡಿಯಾಗಳಲ್ಲಿ ಪ್ರಮೋಟ್ ಮಾಡುತ್ತಾ

ಪಾರ್ವತೀಶ
bparvateesha@gmail.com

ಅದರ ಪ್ರತಿಫಲವಾಗಿ ಆಯಾ ಕಂಪನಿಯ ಶೇರ್‌ಗಳನ್ನೇ ಕಸಿಯುತ್ತಿದೆ. ಖುದ್ದು ಟೈಮ್ಸ್ ಮಾಲೀಕಳೇ ಶತದಡ್ಡಳಂತೆ ಆರ್ಟ್ ಆಫ್ ಲಿವಿಂಗ್‌ನ ಕೋಮುವಾದಿ ರವಿಶಂಕರನ ಕಾಲಿಗೆ ಬಿದ್ದು ಹೋಗುತ್ತಿರುತ್ತಾನೆ.

ಆದರೆ ಇವೆಲ್ಲಕ್ಕೂ ಕಾರ್ಪೊರೇಟ್ ಕಲ್ಚರ್ ಎನ್ನುವ ಮುಖ ಇರುತ್ತದೆ. ಆದರೆ ವಿಭಟ್ಟರಿಗೆ ಇದು ಅರ್ಥವಾಗಲಿಲ್ಲ. ಅವರು ಕಟ್ಟಿದ ಟೀಂನ ಕೆಲವು ಬ್ಯೂರೋ ಮುಖ್ಯಸ್ಥರು, ಅಂಕಣಕಾರರು ಅದೆಷ್ಟು ಸ್ಪೀಡಾಗಿ ಹಣ ಮಾಡಿದರೆಂದರೆ ಹುಬ್ಬಳ್ಳಿ ಹಾಗೂ ಬೆಂಗಳೂರಿನಲ್ಲಿರುವ ವಿಭಟ್ಟರ ಶಿಷ್ಯರಿಬ್ಬರು ಇವತ್ತು ತಲಾ ಹತ್ತು ಹತ್ತು ಕೋಟಿ ರೂಪಾಯಿ ತೂಗುತ್ತಿದ್ದಾರೆ.

ಇನ್ನು ವಿಭಟ್ಟರಿಗೆ ತಮ್ಮ ಬಾಲ್ಯಕಾಲದ RSS ಹ್ಯಾಂಗೋವರ್‌ನಿಂದ ಕರ್ನಾಟಕ ಕಳೆದುಕೊಂಡಿದ್ದ ಒಂದೂ ಮುಕ್ಕಾಲು ಲಕ್ಷದಷ್ಟು ಓದುಗರನ್ನು ಪ್ರಜಾವಾಣಿ ಹಾಗೂ ಕನ್ನಡ ಪ್ರಭ ಹೈಜಾಕ್ ಮಾಡಿಕೊಂಡಾಗಿತ್ತು.

ಟೈಮ್ಸ್ ಮಾಲೀಕರಿಗೆ ಈಗ ಕಳೆದುಕೊಂಡ ಪ್ರಸಾರ, ಮಾನ ಮರ್ಯಾದೆಗಳನ್ನು ಮತ್ತೆ ಗಳಿಸಬೇಕಾದ ಕಷ್ಟ; ಬಿಟ್ಟುಹೋದ ಓದುಗನ ಬೆನ್ನತ್ತಿ ಮನ ಒಲಿಸಿ ಕರೆತರಬೇಕಾದ ಸಂಕಷ್ಟ ಎದುರಾಗಿದೆ. ವಿಜಯ ಕರ್ನಾಟಕದ ಹೊಸ ಸಂಪಾದಕರಾಗಿರುವ ರಾಘವನ್ ಈ ಸವಾಲಿನಲ್ಲಿ ಗೆಲ್ಲುತ್ತಾರಾ?

ಇದಕ್ಕೆ ಕಾಲವೇ ಉತ್ತರ ನೀಡಬಲ್ಲದು. ಈ ರಾಘವನ್ ತುಂಬಾ workholic. ಆರೋಗ್ಯಕರ ಮನಸ್ಸಿನ ವ್ಯಕ್ತಿ ಎಂಬುದು ನಿಜ. ಅವರ ಪ್ರಯತ್ನಕ್ಕೆ ಯಶ ಸಿಗಲಿ.

ಓದುಗರ ಮೇಲೆ ವಿಭಟ್ಟರ ದಾಳಿ

ವಿಜಯ ಸಂಕೇಶ್ವರ್ ತನ್ನ ಹಣಕಾಸಿನ ಬಿಕ್ಕಟ್ಟುಗಳಿಂದಾಗಿ ವಿಜಯ ಕರ್ನಾಟಕವನ್ನು ಟೈಮ್ಸ್ ಆಫ್ ಇಂಡಿಯಾ ಗ್ರೂಪ್‌ಗೆ ಮಾರಿಕೊಂಡಾಗ ವಿ.ಕ. ಇಷ್ಟೊಂದು ಕೋಮುವಾದಿಯಾಗಿರಲಿಲ್ಲ. ಆದರೆ ವಿಭಟ್ಟರು ಹಗಲು ರಾತ್ರಿ ದುಡಿದು ವಿಕದ ಪ್ರತಿ ಪುಟಕ್ಕೂ, ಪ್ರತಿ ಅಂಕಣಗಳಿಗೂ ಕೇಸರಿ ಬಣ್ಣ ಬಳಿದರು. ರವಿ ಬೆಳಗೆರೆಯ ಸೂರ್ಯ ಶಿಕಾರಿ ಹಾಗೂ ಮಣಿಕಾಂತರ ಹಾಡು ಹುಟ್ಟಿದ ಸಮಯ ಅಂಕಣಗಳನ್ನು ಬಿಟ್ಟರೆ ವಿಕದ ಉಳಿದೆಲ್ಲವೂ ಕೋಮುದ್ವೇಷ ಕಾರುತ್ತಿದ್ದವು. ದಲಿತರು, ಹಿಂದುಳಿದ ವರ್ಗಗಳು, ಮುಸ್ಲಿಂ-ಕ್ರಿಶ್ಚಿಯನ್ನರು ಹಾಗೂ ಬಹಳ ಮುಖ್ಯವಾಗಿ ಪ್ರಗತಿಪರರ ಮೇಲೆ ವಿಭಟ್ಟರು ವಿಕದಲ್ಲಿ ಬಿಟ್ಟೂಬಿಡದೆ ದಾಳಿ ನಡೆಸುತ್ತಿದ್ದರು. ತೀರಾ ಮೊನ್ನೆ ವಿಭಟ್ಟರು 'ಕರ್ನಾಟಕವು ಭ್ರಷ್ಟಾಚಾರದ ಹೊಲಗೇರಿಯಾಗಿದೆ' ಎಂಬ ಒಂದು ಸಾಲು ಬರೆದು ಅದು ಜಾತಿ ನಿಂದನೆಯ ಕೇಸ್ ಆಗುವ ಹಂತಕ್ಕೂ ಹೋಗಿದೆ. ಮಂಗಳೂರು ವಿ.ವಿಯ ಉಮೇಶ್ ಚಂದ್ರರ ವಿವಾದ, ಮುಸ್ಲಿಮರ ಕೆಎಫ್‌ಡಿ, ಕೋಮು ಸೌಹಾರ್ದ ವೇದಿಕೆಗಳ ಬಗ್ಗೆಯಂತೂ ವಿಭಟ್ಟರು ವಿನಾಃಕಾರಣ ದ್ವೇಷ ಕಾರಿಕೊಂಡರು. ಅದಕ್ಕೆ ಪ್ರತ್ಯುತ್ತರವೆಂಬಂತೆ ಅನೇಕ ಪ್ರತಿಭಟನೆಗಳನ್ನು ಎದುರಿಸಿದರು. ಬಹುಶಃ ಜನಪರ ಸಂಘಟನೆಗಳಿಂದ, ಪ್ರಜ್ಞಾವಂತ ನಾಗರಿಕರಿಂದ ಅತಿ ಹೆಚ್ಚು ಬಾರಿ ಪ್ರತಿಭಟನೆ ಎದುರಿಸಿದ ಏಕೈಕ ಪತ್ರಿಕಾ ಸಂಪಾದಕನೆಂದರೆ ಅದು ವಿಭಟ್ಟರೆ ಇರಬೇಕು.

ಭಟ್ಟರ ಲಾಬಿ ಶಿಷ್ಯರ ಲಂಚ

ವಿಜಯ ಕರ್ನಾಟಕ ದೊಡ್ಡ ಮಟ್ಟದ ಯಶಸ್ಸು ಕಂಡ ನಂತರ ವಿಭಟ್ಟರಿಗೆ ತಾನೊಬ್ಬ ಮಹಾನ್ ಸೆಲಿಬ್ರಿಟಿ ಎನ್ನುವ ಸ್ವವ್ಯಾಮೋಹ ಶುರುವಾಗಿತ್ತು. ಪತ್ರಕರ್ತರಲ್ಲಿ ಈ ಸ್ವಭಾವ ಸಹಜವಾಗೇ ಇರಲಿಕ್ಕೂ ಸಾಕು. ಸಣ್ಣಪುಟ್ಟ ಪತ್ರಕರ್ತರೆ ತಾಲ್ಲೂಕು ಲೆವೆಲ್‌ನಲ್ಲಿ ತಹಸೀಲ್ದಾರ್, ಬಿಡಿಒ, ಪೊಲೀಸರೊಂದಿಗೆ ಅಹಮಿಕೆಯಿಂದ ವ್ಯವಹರಿಸುತ್ತಿರುತ್ತಾರೆ. ಇನ್ನು 6 ಲಕ್ಷ ಪ್ರಸಾರದ ಪತ್ರಿಕೆಯ ಸಂಪಾದಕರಿಗೆ ರವಷ್ಟು ಅಹಂ ಇದ್ದರೆ ವಿನಾಶ್ಚರ್ಯ?

ಆದರೆ ತಮ್ಮ ಸೆಲಿಬ್ರಿಟಿಯ ಸ್ಟೇಟಸ್‌ಗಾಗಿನ ego ತಣಿಸಿಕೊಳ್ಳಲು ಹೋಗಿ ವಿಭಟ್ಟರು ಅನೇಕ ಯಡವಟ್ಟುಗಳನ್ನು ಮಾಡಿಕೊಂಡರು. ತಮಗೊಬ್ಬ ಗನ್‌ಮ್ಯಾನ್ ಒದಗಿಸುವಂತೆ ಕೇಳಿ ಪೊಲೀಸ್ ಕಮಿಷನರ್ ಶಂಕರ್ ಬಿದರಿಯಿಂದ 'ನೋ' ಅನಿಸಿಕೊಂಡರು. ಅದರ ಸೇಡು ತೀರಿಸಲು ಹೊರಟು ವಿನಾಕಾರಣ ಬಿದರಿ ವಿರುದ್ಧ ಬರೆದೇ ಬರೆದರು. ಇನ್ನೊಮ್ಮೆ ಯಾರೋ ಅನಾಮಿಕ ಹೇಡಿ ಬರೆದ ಪತ್ರ ಎತ್ತಿಕೊಂಡು ಡಿಐಜಿ ಅಜಯ್ ಕುಮಾರ್ ಸಿಂಗ್‌ರಿಗೂ ಕಿರುಕುಳ ಕೊಡಲು ಯತ್ನಿಸಿದರು. ಟೈಮ್ಸ್‌ನ ಆಡಳಿತ ವರ್ಗದ ಪ್ರಕಾರ ವಿಭಟ್ಟರ ಅಹಂ, ಕೋಮುವಾದಿ ನಿಲುವು ಹಾಗೂ ಪೊಲೀಸರ ವಿರುದ್ಧ ವಿನಾಕಾರಣ ಅಪಪ್ರಚಾರ ನಡೆಸಿರುವ ಬಗ್ಗೆ ಕರ್ನಾಟಕ ಪೊಲೀಸರಿಂದಲೂ ಕಂಪ್ಲೇಂಟ್ ಹೋಗಿತ್ತಂತೆ.

ಮತ್ತೊಂದೆಡೆ ವಿಭಟ್ಟರು ಇಡ್ಲಿ ಸಾಂಬಾರ್ ಮಾರುವ ಕೆಲವು ಹೋಟೆಲ್ ಮಾಲೀಕರೊಂದಿಗೆ ಸ್ನೇಹ ಬೆಳೆಸಿಕೊಂಡರು. ವಿಟ್ರಿಯಾ; ಸರೋವರ್ ಹೋಟೆಲ್‌ಗಳಲ್ಲಿ ಪಾರ್ಟಿ, ಸನ್ಮಾನ, ಗೆಟ್ ಟುಗೆದರ್‌ಗಳು ಕಾಮನ್ ಆದವು. ಈ ಗೆಳೆತನದ ಕಾರಣದಿಂದಾಗಿ ಅನೇಕ ಪೆದ್ದು ಹೋಟೆಲ್ ಮಾಲೀಕರು ವಿಕದಲ್ಲಿ ಕಾಲಮ್ನಿಷ್ಟರಾಗಿ ಮಿಂಚಿದರು. ಇದು ವಿಭಟ್ಟರು ತಮ್ಮದೊಂದು ಪುಸ್ತಕವನ್ನು ವಿಟ್ರಿಯಾ ಮಾಲೀಕರಲ್ಲೊಬ್ಬರಾದ ನಾಗರಾಜ ಎಂಬ ಮುಖರಹಿತ ಆಸಾಮಿಗೆ ಅರ್ಪಿಸುವ ಲೆವೆಲ್‌ಗೂ ಹೋಯಿತು.

ಭಟ್ಟರು ತಲುಪಿದ್ದ ಲೆವೆಲ್‌ಗೆ ಇವೆಲ್ಲಾ ಕಾಂಜೀಪೀಂಜಿ ಕೆಲಸಗಳಾಗಿದ್ದವು. ತಮ್ಮ ಸುತ್ತಾ ಹವ್ಯಕ ಬ್ರಾಹ್ಮಣ ಹುಡುಗರ ಗ್ಯಾಂಗ್ ಕಟ್ಟಿಕೊಂಡಿದ್ದ ವಿಭಟ್ಟರಿಗೆ ಕೊನೆಗೆ ಅವರೇ ಮುಳುಗು ನೀರು ತರುತ್ತಾರೆಂಬ ಅಂದಾಜೇ ಸಿಗಲಿಲ್ಲ.

ಹುಬ್ಬಳ್ಳಿ ಬ್ಯೂರೋ ಚೀಫ್ ಯತಿರಾಜು ವಿಭಟ್ಟರ ದಾರಿ ತಪ್ಪಿಸಿ ಅನೇಕ ದೀಲುಗಳನ್ನು ಕುದುರಿಸಿಕೊಂಡ. ವಿನಾಕಾರಣ ಬಸವರಾಜ ಹೊರಟ್ಟಿಯ

▶▶ 15

ಕಿವಿ ಮೇಲೆ ಹೂ



ಉನ್ನತ ವ್ಯಾಸಂಗ ಪಡೆಯುವ ಸಲುವಾಗಿ ಅಬ್ರಾಡ್‌ಗೆ ಹೋಗುತ್ತಿರುವುದರಿಂದ ವಿಜಯ ಕರ್ನಾಟಕ ಪತ್ರಿಕೆ ಸಂಪಾದಕನ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ.

—ವಿಶ್ವೇಶ್ವರ ಭಟ್
ಮಾಜಿ ಸಂಪಾದಕರು
ವಿಜಯ ಕರ್ನಾಟಕ, ಬೆಂಗಳೂರು.

ದಿನೇಶ್ ಮಟ್ಟು, ದಂಡಾವತಿಗೆ ಬನ್ನಿ ಅಂದರು, ಅವರು ಹೋಗಲಿಲ್ಲ!

ಏನೇ ಆದರೂ ಟೈಮ್ಸ್ ಗ್ರೂಪ್‌ನವರು ಮಾರ್ವಾಡಿಗಳು. ಲೆಕ್ಕಾಚಾರ, ಮುಂದಾಲೋಚನೆ ಅವರಿಗೆ ರಕ್ತಗತ ಕಲೆ.

ವಿಭಟ್ಟರನ್ನು ವಿಜಯಕರ್ನಾಟಕದಿಂದ ಓಡಿಸಬೇಕೆಂಬ ನಿರ್ಧಾರ ಕಳೆದ ನವೆಂಬರ್ ಮಧ್ಯಭಾಗದಲ್ಲೇ ಆಗಿತ್ತು. ಆದರೆ ಭಟ್ಟರ ಜಾಗಕ್ಕೆ ಬೇರೆ ಯಾರಾದರೂ ಬೇಕಲ್ಲ, ಹಾಗಾಗಿ ಕರ್ನಾಟಕದಲ್ಲಿ ಹೆಚ್ಚು ಜನಮನ್ನಣೆ ಪಡೆದಿರುವ ಪತ್ರಕರ್ತರ ಬಗ್ಗೆ ಚೆಕ್ ಮಾಡಿದ ಟೈಮ್ಸ್ ಧಣಿಗಳು ಮೊದಲಿಗೆ ಯೋಚಿಸಿದ್ದು ದಿನೇಶ್ ಅಮಿನ್ ಮಟ್ಟು ಬಗ್ಗೆ. 'ಪ್ರಜಾವಾಣಿ'ಯ ಸ್ಟಾರ್ ಬರಹಗಾರ ಮಟ್ಟುರನ್ನು ಜನಸಾಮಾನ್ಯರಿಂದ ಹಿಡಿದು ದೊಡ್ಡ ರಾಜಕಾರಣಿ-ಅಧಿಕಾರಿ, ಸಾಮಾನ್ಯ ಗೃಹಿಣಿಯತನಕ ಎಲ್ಲರೂ ಓದುತ್ತಾರೆ. ಹೀಗಾಗಿ ಟೈಮ್ಸ್‌ನ ಹಿರಿಯ ಅಧಿಕಾರಿಯೊಬ್ಬರು ದಿನೇಶ್‌ರಿಗೆ ವಿಕ ಸಂಪಾದಕರಾಗುವ ಪ್ರಪೋಸಲ್ ಹೇಳಿಕಳಿಸಿದರಂತೆ.

ತಕ್ಷಣ 'ನೋ' ಅಂದರಂತೆ ದಿನೇಶ್. ಹಾಗೆನ್ನಲು ದಿನೇಶರಿಗೆ ಎರಡು ಕಾರಣಗಳಿದ್ದವು. ಒಂದು ಪ್ರಜಾವಾಣಿಯೊಂದಿಗೆ ಅವರ ವ್ಯಕ್ತಿತ್ವ ಬೆಸೆದುಕೊಂಡಿರುವುದು emotional attachment ಇತ್ಯಾದಿ ಜೊತೆಗೆ ಮಾಲೀಕ ಶಾಂತಕುಮಾರ್‌ರೊಂದಿಗೆ ಉತ್ತಮ ಸ್ನೇಹ ವಿಶ್ವಾಸಗಳಿರುವುದು. ಎರಡನೆಯ ಕಾರಣ ಬಹುಶಃ ವಿಭಟ್ಟರು ಹೋದರೂ ವಿಜಯ ಕರ್ನಾಟಕದ ತುಂಬಾ ಬರೀ ಚೆಡ್ಡಿಗಳೇ ತುಂಬಿಕೊಂಡಿರುವುದರಿಂದ ಸ್ವಿಜ ಪತ್ರಿಕಾವೃತ್ತಿ ಮಾಡಲು ಅವಕಾಶ ಇರುವುದಿಲ್ಲ ಎಂಬುದೂ ಆಗಿರಬಹುದು.

ಮಟ್ಟು ನೋ ಅಂದಮೇಲೆ ಸುಮ್ಮನಾಗದ ಟೈಮ್ಸ್‌ನವರು ಪ್ರಜಾವಾಣಿಯ ಹಾಲಿ ಮುಖ್ಯಸ್ಥ ಪದ್ಮರಾಜ್ ದಂಡಾವತಿಯವರನ್ನೂ ಅಪ್ರೋಚ್ ಮಾಡಿದ್ದಾರೆ. ಆದರೆ ದಂಡಾವತಿ ಸಹ 'ನೋ' ಅಂದರಂತೆ.

ನಿಜಕ್ಕೂ ಇವರಿಬ್ಬರ ನಿರ್ಧಾರ ಶ್ಲಾಘನೀಯ...

ಸಂಯುಕ್ತ ಕರ್ನಾಟಕ ನಾರಾಯಣ ಮೂರ್ತಿಯ ಹಗಲು ದರೋಡೆ

ಕನ್ನಡದ ಕಾಯಿಲೆ ಹಿಡಿದ ದಿನಪತ್ರಿಕೆ ಸಂಯುಕ್ತ ಕರ್ನಾಟಕದಲ್ಲಿ ಸಿವಿಲ್ ವಾರ್ ಭುಗಿಲೆದ್ದಿದೆ. ಸಂಸ್ಥೆಯ ಸಮಸ್ತ ನೌಕರ ಸಿಬ್ಬಂದಿ ಬಹಿರಂಗವಾಗಿಯೇ ಬಂಡೆದ್ದಿದ್ದಾರೆ. ಹಾಲಿ ಲೋಕ ಶಿಕ್ಷಣ ಟ್ರಸ್ಟಿನ ಕಾರ್ಯದರ್ಶಿ ನಾರಾಯಣ ಮೂರ್ತಿ ಕೋಟ್ಯಂತರ ರೂಪಾಯಿ ನುಂಗಿ ನೀರು ಕುಡಿಯುತ್ತಿರುವುದರ ವಿರುದ್ಧ ಈ ಜಗಳ ಸ್ಫೋಟಿಸಿದೆ.

ಈಗ ಪೂರಾ ಆರೆಸ್ಸೆಸ್ ಪಾಂಪ್ಲೆಟ್ ಆಗಿರುವ ಸಂ.ಕರ್ನಾಟಕಕ್ಕೆ ಆಸ್ತಿಪಾಸ್ತಿಗೇನೂ ಕೊರತೆಯಿಲ್ಲ, ಅವ್ಯವಹಾರಗಳಿಗೂ ಕಡಿಮೆಯೇನಿಲ್ಲ. ಟ್ರಸ್ಟಿನ ಮಾಜಿ ಅಧ್ಯಕ್ಷ ಕಮುಭ್ರಷ್ಟ ಹಾರನಹಳ್ಳಿ ರಾಮಸ್ವಾಮಿ ಬದುಕಿದ್ದಾಗ ವಿಧಾನಸೌಧದಲ್ಲಿ ಓಡಾಡಿಕೊಂಡಿದ್ದ ಈ ನಾರಾಯಣ ಮೂರ್ತಿಯನ್ನು ತಂದು ಸಾಕಿಕೊಂಡಿದ್ದರು. ಆಗ ಸಂಸ್ಥೆಯಲ್ಲಿ ಕಳ್ಳತನ ನಡೆಸಲು ರಾಮಸ್ವಾಮಿ ನಂಬಿಕಸ್ಥ ಭಂಟನೊಬ್ಬ ಬೇಕಿದ್ದ. ಅಲ್ಲಿ ಚೋರವಿದ್ಯೆಯ ಟ್ರೈನಿಂಗ್ ಪಡೆದ ನಾ.ಮೂರ್ತಿ ಈಗ ಟ್ರಸ್ಟಿನ ಸೆಕ್ರಟರಿ. ಹಾಲಿ ಅಧ್ಯಕ್ಷ ಹಾರನಹಳ್ಳಿ ಅಶೋಕ ಸಿಬ್ಬಂದಿಯ ವಿರೋಧದ ನಡುವೆಯೂ ನಾ.ಮೂರ್ತಿ ಪರವಾಗೇ ನಿಂತಿರುವುದು ಆಶ್ಚರ್ಯ. ಬೆಂಗಳೂರಿನ ರಿಚ್‌ಮಂಡ್ ರಸ್ತೆಯ ಮುಂಭಾಗದ ದೊಡ್ಡ ಜಾಗವನ್ನು ಯಾರಿಗೋ ಲೀಸ್ ನೀಡಿ, ಸಂಸ್ಥೆಯ ಹಳೇ ಕಾರು, ಮೆಷಿನ್‌ಗಳನ್ನು ಮನ ಬಂದ ಬೆಲೆಗೆ ವಿಲೇವಾರಿ ಮಾಡಿರುವ ನಾರಾಯಣ ಮೂರ್ತಿ ಈ ಡೀಲ್‌ಗಳ ಲೆಕ್ಕವನ್ನೂ ಸರಿಯಾಗಿ ಕೊಟ್ಟಿಲ್ಲ. ಈ ಮಧ್ಯೆ ಉತ್ತರ ಕರ್ನಾಟಕದಲ್ಲಿ ಸಂ.ಕ.ದ ಪ್ರಸಾರ ಸ್ವಲ್ಪ ಚೇತರಿಸಿಕೊಂಡ ಸುದ್ದಿ ಇದೆ. ಆದರೆ ದಕ್ಷಿಣ ಕರ್ನಾಟಕ ಹಾಗೂ ಬೆಂಗಳೂರಿನಲ್ಲಿ ಅದಕ್ಕೆ ಕಿಮ್ಮತ್ತಿಲ್ಲ.

ಕನ್ನಡ ಪ್ರಭಕ್ಕೊಂದು ಪ್ರಭೆ!

ಕನ್ನಡ ಪ್ರಭದ ಸರ್ಕ್ಯುಲೇಷನ್ ದಿಢೀರನೆ ಜಾಸ್ತಿಯಾಗುತ್ತಿದೆ. ಬಹುತೇಕ ಇದು ವಿಜಯ ಕರ್ನಾಟಕ ಕಳೆದುಕೊಳ್ಳುತ್ತಿರುವ ಓದುಗರು ಕ.ಪ್ರಭಗೆ ಶಿಫ್ಟ್ ಆಗಿದ್ದರ ಪರಿಣಾಮ ಎನ್ನುತ್ತಿದ್ದಾರೆ ಬಲ್ಲವರು. ಆದರೆ ಪ್ರಜಾವಾಣಿಗೂ ಇದರ ದೊಡ್ಡ ಪಾಲು ಸಿಕ್ಕುತ್ತಿದೆ. ಅದೇನೇ ಇರಲಿ ರಂಗನಾಥ ಹೋದ ಮೇಲೂ ಕನ್ನಡಪ್ರಭ ಪ್ರಸಾರದಲ್ಲಿ ವ್ಯತ್ಯಾಸವೇನಾಗಿರಲಿಲ್ಲ. ಹಾಗೆ ನೋಡಿದರೆ ಡಲ್ಲಾಗಿ ಕಾಣುತ್ತಿದ್ದ ಕನ್ನಡ ಪ್ರಭಕ್ಕೆ ಜೀವಚೈತನ್ಯ ತುಂಬಿದ್ದೇ ರಂಗನಾಥ & ಕೋ. ನಂತರ ರಂಗನಾಥ ಸುವರ್ಣ ಟಿವಿಗೆ ಹೋದಾಗ ಎಕ್ಸ್‌ಪ್ರೆಸ್ ಮಾಲೀಕರು ಆರಿಸಿದ್ದು ಶಿವ ಸುಬ್ರಮಣ್ಯರನ್ನು.

ಸಮಚಿತ್ತದ ಶಿವಸುಬ್ರಮಣ್ಯ ಕ್ಯಾಪ್ಟನ್ಸಿಯಲ್ಲಿ ಈಗ ಕ.ಪ್ರಭ ಇನ್ನಷ್ಟು ಮೈದುಂಬಿಕೊಳ್ಳುತ್ತಿದೆ. ವರದಿಗಾರಿಕೆ, ನಿಲುವು, ತನಿಖೆಗಳ ಖದರೂ ಎದ್ದು ಕಾಣುತ್ತಿದೆ. ಈ ನಡುವೆ ತಮಗೆ ಯಡ್ಡಿ ಕೊಟ್ಟು ಕಳಿಸಿದ್ದ ರಾಜ್ಯೋತ್ಸವ ಪ್ರಶಸ್ತಿಯನ್ನೂ ಶಿವಸುಬ್ರಮಣ್ಯ ತಣ್ಣಗೆ ಬೇಡ ಅಂದುಬಿಟ್ಟರು.

ಕನ್ನಡ ಪತ್ರಿಕೋದ್ಯಮದ ಹೆಮ್ಮೆಯ ಕ್ಷಣಗಳಲ್ಲಿ ಇದೂ ಒಂದಾಗಿತ್ತು.

ವಿಜಯ ಕರ್ನಾಟಕ ಎಂಬ ಮಹಾ ಹಡಗು ಮುಳುಗುತ್ತಿರುವ ಈ ಹಂತದಲ್ಲಿ, ಸಂಯುಕ್ತ ಕರ್ನಾಟಕ ಅನೇಕ ಕಾಯಿಲೆಗಳಿಂದ ಬಳಲುತ್ತಿರುವ ಈ ಗಳಿಗೆಯಲ್ಲಿ ಪ್ರಜಾವಾಣಿ ಹಾಗೂ ಕನ್ನಡಪ್ರಭ ರೇಸ್‌ನಲ್ಲಿ ಮುನ್ನುಗ್ಗಿರುವುದು, ಓದುಗರ ಸಂಖ್ಯೆ ಹೆಚ್ಚಿಸಿಕೊಳ್ಳುತ್ತಿರುವುದು ಖುಷಿಯ ವಿಚಾರ ಏಕೆಂದರೆ ಮುಳುಗುತ್ತಿರುವವರು ದುಷ್ಟತನ ಮೈಗಂಟಿಸಿಕೊಂಡವರು.



ಬೆತ್ತಲಾದ ದೇಶಭಕ್ತ

ಯಡ್ಡಿ ಬೂಟು ನೆಕ್ಕಿ ಸೈಟು ನುಂಗಿದ ಸಿಂಹ!



ಸಂತೋಷ್ ಬಾಗಿಲಗದ್ದೆ
santhubagil@gmail.com

...ಪಕ್ಕಾ ಧರ್ಮೋದ್ಧಾರಕ, ದೇಶಭಕ್ತನೆಂಬಂತೆ ಅಂಕಣ ... ಯಾಮಾರಿಸುತ್ತಾ ಬಂದ ಪ್ರತಾಪ ಸಿಂಹ ಸಪಾಟು ...ಗಿದ್ದಾನೆ. ಹಿಂದೂ ಧರ್ಮದ ಮಾನ ಹೋಯ್ತು ...ತ ತನಗೆ ತಾನೇ ನಿರ್ಧರಿಸಿ ತನ್ನ 'ಬೆತ್ತಲೆ ಜಗತ್ತು' ...ದ ತುಂಬಾ ಲೂಸ್‌ಮೋಷನ್ನು ಮಾಡಿಕೊಳ್ಳುತ್ತಾ ...ದ ಸಿಂಹ ಇದೀಗ ತನ್ನದೇ ಮಾನ ಉಳಿಸಿಕೊಳ್ಳಲು ...ಗೊಸಿಗೂ ಗತಿಯಿಲ್ಲದ ದೈನೇಸಿ ಸ್ಥಿತಿಗಿಳಿದಿದ್ದಾನೆ. ...ಪ್ರತೀವಾರ ಹಿಂದೂತ್ವದ ಅಮಲುಗಣ್ಣಲ್ಲಿ ಜಗತ್ತನ್ನು ...ಸಿ ಯಾರ್‍ಯಾರಿಗೋ ಅಟಕಾಯಿಸಿಕೊಳ್ಳುವವನು ಪ್ರತಾಪ ...ಹ. ಇಡೀ ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದವನಂತೆ ...ವರ ದಾಖಲಿಸುವ, ಕ್ರಾಂತಿಕಾರಿಯ ಗೆಟಪ್ಪಿನಲ್ಲಿ ...ಂಗುಗಳಲ್ಲೇ ಪ್ರಶ್ನೆ ಕಕ್ಕುವ ಈತ ಯಾವಾಗ ಯಾರ ...ದ್ಧ ಕೆರೆಯುತ್ತಾನೋ, ಇನ್ಯಾವಾಗ ಯಾರನ್ನ ಹೊಗಳಿ ...ಕ್ಕೇರಿಸಿ ಅದ್ಯಾರ ವಿರುದ್ಧ ಬುಲೆಟ್ಟು ಸಿಡಿಸುತ್ತಾನೋ ...ಳಲು ಬರುವುದಿಲ್ಲ.

ದುರಂತವೆಂದರೆ, ಈತನ ಅನಾಹುತಕಾರಿ ಐಡಿಯಾಲಜಿ... ...ನ್ನು ಒಪ್ಪಿಕೊಳ್ಳುವ ಮಂದಿ ಸಿಂಹನ ತಂತ್ರಗಳನ್ನೆಲ್ಲಾ ...ರತೆ ಅಂತಲೇ ಅರ್ಥೈಸಿಕೊಂಡಿದ್ದಾರೆ. ಆದರೆ ಈ ...ಗಲಾಡಿಯ ಹೊಗಳಿಕೆ-ತೆಗಳಿಕೆಗಳೆಲ್ಲದರ ಹಿಂದೆ ಲಾಭ-...ದ ಲೆಕ್ಕಾಚಾರ ಮತ್ತು ವೈಯಕ್ತಿಕ ತೆವಲುಗಳಿರುವುದು ...ಸ್ ಮೇಲಾಣೆಗೂ ನಿಜ!


ವಿಜಯ ಕರ್ನಾಟಕವೆಂಬ ಪತ್ರಿಕೆಯ ಮೇಲೆ ...ಡಿಸುವವರಿಗೆ ಪ್ರತಾಪ ಸಿಂಹನ 'ಬೆತ್ತಲೆ' ಪೇಜ್‌ಗಳಲ್ಲಿ ...ಭಾ ಕರಂದ್ಲಾಜೆ ರಾರಾಜಿಸಿದ್ದು ನೆನಪಿರುತ್ತದೆ. ...ಡಿಯೂರಪ್ಪನಿಗೇ ಸೈಡು ಹೊಡೆಯುವಂತೆ ಮಿಂಚುತ್ತಿದ್ದ ...ಭಾರನ್ನ ಈ ಅವಿವೇಕಿ ಹೊಗಳಿ ಎವರೆಸ್ಟು ಹತ್ತಿಸಿದ್ದ. ...ಯನ್ನು ಧೀಮಂತ ನಾಯಕರನೇಕರೊಂದಿಗೆ ಹೋಲಿಸಿ ...ದು ವಿಪರೀತ ಸಂಭ್ರಮ ಪಟ್ಟಿದ್ದ. ಈತನ 'ಓದುಗರು' ...ನ್ನು ಸಿಂಹದ ಸ್ವಾಮಿನಿಷ್ಠೆ ಅಂತ ಬೀಗಿರಬಹುದು. ...ದರೆ ಪ್ರಜ್ಞಾವಂತರನೇಕರಿಗೆ ಈ ಬಗ್ಗೆ ಬಲವಾದ ...ಮಾನಿಯೊಂದು ಇದ್ದೇ ಇತ್ತು. ಅದೀಗ ಬಯಲಾಗಿದೆ.

ರಾಜಕೀಯ, ಭ್ರಷ್ಟಾಚಾರದ ವಿರುದ್ಧ ಪ್ರತೀವಾರ ...ಲುಕುವ ಸಿಂಹ ಮುಖ್ಯಮಂತ್ರಿ ಯಡಿಯೂರಪ್ಪನ ...ಟು ನೆಕ್ಕಿದ್ದಾನೆ. ಶೋಭಾ ಕರಂದ್ಲಾಜೆಯ ಪಾದಗಳಿಗೆ ...ದುಳಿದ ನಿಯತ್ತುಗಳನ್ನೆಲ್ಲಾ ಬಸಿದುಕೊಂಡಿದ್ದಾನೆ. ಅದ ...ಂದಿಗೆ ಪತ್ರಿಕೋದ್ಯಮದ ಮೌಲ್ಯಾದರ್ಶಗಳನ್ನ ಮಣ್ಣು ...ಲು ಮಾಡಿದ್ದಾನೆ. ಸಿಂಹ ಮಾಡಿದ ಇಂಥಾ 'ತ್ಯಾಗ' ...ಗೆಲ್ಲಾ ಅಖಂಡ ಐವತ್ತು ಲಕ್ಷಕ್ಕೆ ತೂಗುವ ಸೈಟೊಂದು ...ನವಾಗಿ ಸಿಕ್ಕಿದೆ! ಇಂತಹುದೊಂದು ಸೈಟು ನುಂಗಲು ...ಹ ಹೂಡಿದ ತಂತ್ರ, ಕುತಂತ್ರಗಳು ಎಂಥವರಿಗಾದರೂ ...ಶ್ಯ ಹುಟ್ಟಿಸುವಂತಿವೆ. ಅದಕ್ಕಾಗಿ ಈತ ಹಿಡಿದ ದೈನೇಸಿ ...ದಿ ವಾಕರಿಕೆ ಬರಿಸುವಂತಿದೆ.

ವಿವಿಧ ರೀತಿಯಲ್ಲಿ ಅಕ್ಷರಗಳನ್ನು ಕಾಸಾಗಿ ಮಾರ್ಪಡಿಸಿ ...ದಿದ್ದ ಸಿಂಹ ಭಿಕ್ಷೆ ಬೇಡಿಯಾದರೂ ಸರಿಯೇ, ಸೈಟು ದಕ್ಕಿಸಿಕೊಳ್ಳಬೇಕೆಂದು ನಿರ್ಧರಿಸಿಬಿಟ್ಟಿದ್ದ. ಅದರನ್ವಯ ತನ್ನನ್ನು ತಾನು ಪಾತಾಳಕ್ಕಿಳಿಸಿಕೊಂಡು ಸರ್ಕಾರಕ್ಕೊಂದು ಪತ್ರ ಬರೆದ ಸಿಂಹ ಸೈಟಿಗಾಗಿ ವಿನಂತಿಸಿಕೊಂಡ. ಇದರ ನಡುವಲ್ಲೇ ಶೋಭಾ ಕರಂದ್ಲಾಜೆಯ ಕಾಲಿಗೆ ಬಿದ್ದ ಪ್ರತಾಪ ಆಕೆಯ ಕಡೆಯಿಂದ ಭೂಗಳ್ಳ ಮುಖ್ಯಮಂತ್ರಿಯ ಬೆನ್ನುಬಿದ್ದ. ಈ ಪ್ರಕ್ರಿಯೆಗೆ ಚಾಲನೆ ಸಿಗುತ್ತಲೇ ಪ್ರತಾಪ ಸಿಂಹನ ಬೆತ್ತಲೆ ಜಗತ್ತು ಬಣ್ಣ ಬದಲಿಸಿಕೊಂಡಿತ್ತು, ಯಡ್ಡಿ-ಶೋಭಾ ಹೀರೋ-ಹೀರೋಯಿನ್ನುಗಳಾಗಿಯೂ, ಸುಷ್ಮಸ್ವರಾಜ್ ಖಳನಾಯಕಿಯಾಗಿಯೂ ಸಿಂಹನ ಅಂಕಣದಲ್ಲಿ ಕಂಗೊಳಿಸಿದರು.

ಇಂಥ ನಿರ್ಲಜ್ಜ ಬರವಣಿಗೆಯ ಫಲವೆಂಬಂತೆ ಸಿಂಹದ ಲಕ್ಕು ಕುದುರಲಾರಂಭಿಸಿತು. ಮೊದಮೊದಲು ಪ್ರತಾಪ 'ಬೆಂಗ್ಳೂರಲ್ಲೇ ಸೈಟು ಕೊಡ್ಸಿ' ಅಂತ ಕರಂದ್ಲಾಜೆಯ ಸೆರಗು ಹಿಡಿದಿದ್ದ. ಆದರಾಕೆ ಭೂಗಳವಿನಲ್ಲಿ ಪರಿಣತಿ ಪಡೆದ ಗಿರಾಕಿ. ಇಲ್ಲೇ ಕೊಟ್ಟರೆ ತೊಂದರೆಯಾಗುವುದಾಗಿಯೂ, ಮೈಸೂರಲ್ಲಿ ಸೈಟು ಹೊಡೆದು ಆರಾಮಾಗಿರೆಂದೂ 'ಬುದ್ಧಿ'ವಾದ ಹೇಳಿದಳು. ಸಿಂಹ ನಾಯಿ ಮರಿಯಂತೆ ತಲೆಯಾಡಿಸಿ ಸಮ್ಮತಿಸಿತು.

ಇದೆಲ್ಲದರಿಂದಾಗಿ 17-9-2010ರಂದು ಪ್ರತಾಪ ಸಿಂಹನಿಗೆ ಮೈಸೂರಿನ ವಿಜಯನಗರದ ನಾಲ್ಕನೇ ಹಂತ, 2ನೇ ಘಟ್ಟದಲ್ಲಿ '40x 60 ಅಡಿ ಸೈಟು ಮಂಜೂರಾಯಿತು. ಸಿಕ್ಕಿದ್ದು ಅಧಿಕಾರವರ್ಗದ ಬೂಟು ನೆಕ್ಕಿದ ಫಲವಾದ ಭಿಕ್ಷಾನ್ನವಾದರೂ ಘಟಿಂಗ ಪ್ರತಾಪ ಅದರಿಂದ ಸಮಾಧಾನ ಹೊಂದಲಿಲ್ಲ.



ಯಾಕೆಂದರೆ ಆ ಸೈಟು ಸ್ವಲ್ಪ ಒಳಭಾಗದಲ್ಲಿತ್ತು. ಸಿಂಹದ ಕಾಕದೃಷ್ಟಿ ವಿಜಯನಗರ ನಾಲ್ಕನೇ ಹಂತ ರಸ್ತೆಗೆ ಹೊಂದಿಕೊಂಡಿರುವ ಜಮೀನಿನ ಮೇಲಿತ್ತು. ಅದನ್ನೇ ಕೊಡುವಂತೆ ಉಸ್ತುವಾರಿ ಸಚಿವರಾಗಿದ್ದ ಸುರೇಶ್‌ಕುಮಾರ್‌ಗೆ ತಗುಲಿಕೊಂಡ. ಅಲ್ಲೂ ವರ್ಕೌಟ್ ಆಗದಿದ್ದಾಗ ಮತ್ತೆ ಶೋಭಾಳ ಪಾದಕ್ಕೆರಗಿದ ಸಿಂಹ ಕಣ್ಣಿಟ್ಟಿದ್ದ ಸೈಟನ್ನು ಮಂಜೂರು ಮಾಡಿಸಿಕೊಂಡ. ನೆನಪಿರಲಿ ಇದು ಅಖಂಡ ಐವತ್ತು ಲಕ್ಷಗಳಷ್ಟು ಬೆಲೆಬಾಳುವ ಸೊತ್ತು!

ಶೋಭಾ ಕರಂದ್ಲಾಜೆಯ ಕಾಲಿಗೆ ಬಿದ್ದು ಯಡಿಯೂರಪ್ಪನ ಬೂಟು ನೆಕ್ಕಿದ ಸಿಂಹ ಹ್ಯಾಗೋ ಸೈಟು ನುಂಗಿದ. ಆದರದು ಪೂರ್ತಿಯಾಗಿ ಹೊಟ್ಟೆಯೊಳಗಿಳಿಯಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅಧಿಕಾರಿಗಳು ಸಹಕರಿಸಲಿಲ್ಲ. ಅಷ್ಟರಲ್ಲಾಗಲೇ ವಿಜಯಶಂಕರ್ ಮೈಸೂರು ಜಿಲ್ಲಾ ಉಸ್ತುವಾರಿ ಹೊತ್ತಿದ್ದೂ ಅದಕ್ಕೊಂದು ಕಾರಣವಾಗಿದ್ದಿರಬಹುದು. ಇದರಿಂದ ಉರಿದುಹೋದ ಸಿಂಹ ಮೂಡಾದ ಅಧಿಕಾರಿಗಳಿಗೆ ಅಟಕಾಯಿಸಿಕೊಂಡು ರೋಪು ಹಾಕಿದ. ವಿಜಯ್ ಶಂಕರ್ ಬಗೆಗೂ ಹಗುರವಾಗಿ ಮಾತಾಡಿದ್ದ. ಈ ವಿಚಾರ ಲೀಕ್ ಆಗುವುದಕ್ಕೇನೂ ತಡವಾಗಲಿಲ್ಲ.

ಈ ವಿಚಾರ ಗುಸುಗುಸು ಸುದ್ದಿಯಾಗಿ ಹರಡಿ ಟೈಮ್ಸ್ ಆಫ್ ಇಂಡಿಯಾದ ಆಡಳಿತ ವಿಭಾಗದ ಕಿವಿ ತಲುಪುವುದಕ್ಕೂ ಹೆಚ್ಚು ಹೊತ್ತು ಹಿಡಿಯಲಿಲ್ಲ. ತಕ್ಷಣ ಅಲರ್ಟ್ ಆದ ಪತ್ರಿಕೆಯ ಆಡಳಿತ ವಿಭಾಗದ ಅಧಿಕಾರಿಗಳು ಪ್ರತಾಪ ಸಿಂಹನ ಯೋಗ್ಯತೆಯನ್ನು ದಾಖಲೆಗಳ ಸಮೇತ ಅರಿತುಕೊಂಡರು. ತಕ್ಷಣ ಭಯಂಕರ ಅಂಕಣಕಾರ ಪ್ರತಾಪ್ ಸಿಂಹನಿಗೆ ಕೆಲಸ ಬಿಟ್ಟುಹೋಗುವಂತೆ ತಾಕೀತನ್ನೂ ಮಾಡಿದರು. ತನ್ನ 'ಕಿರಿ'ತಗಳಿಗೆಲ್ಲಾ ಪತ್ರಿಕೆಯನ್ನೇ ಆಧಾರವಾಗಿಸಿಕೊಂಡಿದ್ದ ಸಿಂಹ ಹತ್ತಾರಿಸಿಹೋದವನೇ ಸಯಿಟು ವಾಪಸು ಕೊಟ್ಟು ತಲೆ ಉಳಿಸಿಕೊಂಡ.

ಆದರೆ ತದನಂತರ ಆತ ಮಾಡಿದ್ದು ಪಕ್ಕಾ ಹಲಾಲುಕೋರ ಕೆಲಸ. ಬೇರೆಯವರ ಭಿಕ್ಷೆಯಲ್ಲೇ ಉಳ್ಳಾಡಿ ಬದುಕು ಕಟ್ಟಿಕೊಂಡ ಸಿಂಹನಿಗೆ 50 ಲಕ್ಷದ ಸೈಟು ಕೈತಪ್ಪುವುದನ್ನು ಸಹಿಸಲಾದೀತೇ? ಹ್ಯಾಗಾದರೂ ಮಾಡಿ ಅದನ್ನು ತನ್ನದಾಗಿಸಿಕೊಳ್ಳಲೇಬೇಕೆಂಬ ನಿರ್ಧಾರಕ್ಕೆ ಬಂದ ಪ್ರತಾಪ ಅದಕ್ಕೆ ದಾಳವಾಗಿ ಉಪಯೋಗಿಸಿಕೊಂಡಿದ್ದು ತನ್ನ ಭಾವೀ ಹೆಂಡತಿಯನ್ನ!

ಆ ಹುಡುಗಿ ಮೂಡಿಗೆರೆಯ ಕಾಫಿ ಬೆಳೆಗಾರ ಶಾಂತಿನಾಥ ಎಂಬುವವರ ಮಗಳಾದ ಡಾ.ಅರ್ಪಿತ. ಈಕೆ ಉಜಿರೆಯ ಆಯುರ್ವೇದಿಕ್ ಕಾಲೇಜಿನಲ್ಲಿ ಪದವಿ ಪಡೆದವಳು. ಅದೇ ಸಂದರ್ಭದಲ್ಲಿ ಉಜಿರೆಯಲ್ಲೇ ಓದುತ್ತಿದ್ದವನು ಹಾಸನ ಜಿಲ್ಲೆ ಸಕಲೇಶಪುರದ ಪ್ರತಾಪ ಸಿಂಹ. ಈ ಸಂದರ್ಭದಲ್ಲೇ ಸಿಂಹನಿಗೂ-ಅರ್ಪಿತಾಳಿಗೂ ಪ್ರೇಮಾಂಕುರವಾಗಿದೆ. ಇಬ್ಬರೂ ಒಕ್ಕಲಿಗ ಸಮುದಾಯದವರೇ ಆದರೂ ಅರ್ಪಿತಾಳ ಮನೆಯಲ್ಲಿ ಈ ಪ್ರೀತಿಯ ಬಗೆಗೊಂದು ವಿರೋಧವಿತ್ತು.

ಇದೆಲ್ಲದರ ನಡುವೆ ಅರ್ಪಿತಾಳ ತಂದೆ ಆಕ್ಸಿಡೆಂಟ್ ಒಂದರಲ್ಲಿ ತೀರಿಕೊಂಡರು. ಈ ಹೊತ್ತಿಗಾಗಲೇ ವಿಜಯ ಕರ್ನಾಟಕದಲ್ಲಿ ಅಂಕಣ ಗೀಚಲು ಸಿಂಹ ಪ್ರತಾಪ ಶುರುವಿಟ್ಟಿದ್ದ. ಅರ್ಪಿತಾಳೂ ಡಾಕ್ಟರಿಕೆಯ ಪದವಿ ಪೂರೈಸಿದ್ದಳು. ಆದರೆ ಈ ನಡುವೆಯೇ ಒಂದು ಅಪಘಾತ ಸಂಭವಿಸಿತು. ಸಂಬಂಧಿಕರ ಮನೆಗೆ ಕಾರಿನಲ್ಲಿ ತಮ್ಮನೊಂದಿಗೆ ತೆರಳುತ್ತಿದ್ದ ಅರ್ಪಿತಾ ಆಕ್ಸಿಡೆಂಟ್‌ಗೀಡಾದಳು. ಇದರಲ್ಲಿ ಅರ್ಪಿತಾ ಮೊಣಕಾಲ ಕೆಳಗಿನ ಬಲಗಾಲನ್ನ ಸಂಪೂರ್ಣವಾಗಿ ಕಳೆದುಕೊಳ್ಳುವಂತಾಯಿತು. ಇದಾಗಿ ಕೆಲದಿನಗಳಲ್ಲೇ ಹಾಗೂ-ಹೀಗೂ ಪ್ರತಾಪ ಸಿಂಹನೊಂದಿಗೆ ಅರ್ಪಿತಾಳ ಮದುವೆಗೆ ಆಕೆಯ ಮನೆಯಿಂದ ಒಪ್ಪಿಗೆ ಸಿಕ್ಕಿತ್ತು.

ಪ್ರತಾಪ ಸಿಂಹ ಎಂಥಾ ಹಲಾಲುಕೋರನೆಂದರೆ 'ನಾನು ಅಂಗವಿಕಲೇನ ಮದುವೆಯಾಗುತ್ತಿದ್ದೀನಿ ಗೊತ್ತಾ' ಅನ್ನುತ್ತಾ ಬೆಂಗಳೂರು ತುಂಬಾ ಸುತ್ತಾಡಲು ಶುರುವಿಟ್ಟ. ತಿರಾ ಕೈ ತಪ್ಪಿದ ಸೈಟು ಕಬಳಿಸಲೂ ಅದನ್ನೇ ಅಸ್ತ್ರವಾಗಿ ಬಳಸಿಕೊಂಡ. ಅರ್ಪಿತಾಳ ಹೆಸರಲ್ಲಿ ಅಂಗವಿಕರ ಗುರುತಿನ ಚೀಟಿಯನ್ನೂ ಮಾಡಿಸಿದ. ಆಕೆಯನ್ನು ಭಾವೀಪತ್ನಿ ಅರ್ಪಿತಾಳನ್ನು ಯಡಿಯೂರಪ್ಪನ ಮುಂದೆ ಕರೆದೊಯ್ದವನೇ ಆಕೆಯ ತುಂಡಾದ ಮೊಣಕಾಲು ತೋರಿಸಿ ಅನುಕಂಪದ ಆಧಾರದಲ್ಲಿ ಆಕೆಗೆ ಸೈಟು ಕೊಡುವಂತೆ ಬೇಡಿಕೊಂಡ!

ಮುಖ್ಯಮಂತ್ರಿಯ ಮಳ್ಳ ಮನಸ್ಸು ಮರುಗಿದ ಪರಿಣಾಮ ರಣವೇಗದಲ್ಲಿ ಮಂಜೂರು ಪ್ರಕ್ರಿಯೆಗಳೆಲ್ಲ ಮುಗಿದು 28-10-2010ರಂದು ವಿಜಯನಗರದ ನಾಲ್ಕನೇ ಹಂತ ಎರಡನೇ ಘಟ್ಟದಲ್ಲಿರುವ ಸಿಂಹನ ಕಣ್ಣು ಬಿದ್ದಿದ್ದ ಸೈಟು ಅರ್ಪಿತಾಳ ಹೆಸರಿಗೆ ನೋಂದಣಿಯಾಗಿತ್ತು! ಘಟಿಂಗ ಪ್ರತಾಪ 50 ಲಕ್ಷದ ಸೈಟಿಗೆ ಒಡೆಯನಾದ! ಅದಕ್ಕೆ ಕೊಟ್ಟ ಹಣ ಮಾತ್ರ ಕೇವಲ 2,27,700 ರೂಪಾಯಿಗಳು!

ಯಡಿಯೂರಪ್ಪನ ಬೂಟು ನೆಕ್ಕಿದ್ದಕ್ಕೆ ಮತ್ತು ಶೋಭಾ ಕರಂದ್ಲಾಜೆಯ ಪಾದಕ್ಕೆರಗಿದ್ದಕ್ಕೆ ಹಾಗೂ ಅದಕ್ಕೆ ತಕ್ಕುದಾಗಿ ಅಕ್ಷರ ಹಾದರ ನಡೆಸಿದ್ದಕ್ಕೆ ಸಿಂಹನಿಗೆ ಸಿಕ್ಕ ಇನಾಮಿದು!

ಇದು ದೇಶಭಕ್ತನ ನೈಜ ಅವತಾರ ಪತ್ರಕರ್ತನಾದಾತ ಆಳೋ ಮಂದಿಯ ಮರ್ಜಿಗೆ ಬಿದ್ದರೆ ಆತ ಪಿಂಪ್ ಆಗುತ್ತಾನಷ್ಟೇ, ಪತ್ರಕರ್ತನಾಗಲು ಸಾಧ್ಯವಿಲ್ಲ. ತೀರಾ ಪ್ರತಾಪಸಿಂಹನೇ ಮೇಲ್ಕಂಡ ಅನೇಕ 'ಆದರ್ಶ'ಗಳನ್ನು ತನ್ನ ಕಾಲಮ್ಮಿನಲ್ಲಿ ಆಗಾಗ ಕೆತ್ತುತ್ತಿರುತ್ತಾನೆ. ಅದೇ ಸಿಂಹ ಇದೀಗ ತನ್ನ ನಿಯತ್ತು, ವೃತ್ತಿಧರ್ಮಗಳನ್ನೆಲ್ಲಾ ಸರ್ಕಾರಕ್ಕೆ ಅಡ ಇಟ್ಟು ಸೈಟು ದಕ್ಕಿಸಿಕೊಂಡಿದ್ದಾನೆ. ಇದು ಆತ ಲಗಾಯ್ತಿನಿಂದಲೂ ನಡೆಸಿಕೊಂಡು ಬಂದ ದಂಧೆ. ಅದೀಗ ದೊಡ್ಡ ಮಟ್ಟದಲ್ಲಿ ದಾಖಲೆ ಸಮೇತ ಬಯಲಾಗಿದೆಯಷ್ಟೆ.

ಇನ್ನು ಸಿಂಹ ಕೆರೆದದ್ದನ್ನೆಲ್ಲಾ ನಂಬಿ ಓದುವವರ ಬಗೆಗೊಂದರೆಡು ಮಾತು. ಇಂಥವರು ಪ್ರತಾಪ್ ಸಿಂಹನ ದಗಲ್ಬಾಜಿಗಳ ಬಗ್ಗೆ ಬರೆದಾಗಲೆಲ್ಲಾ ಆತನ ಪರ ವಕಾಲತ್ತು ವಹಿಸುತ್ತಾರೆ.

'ಅವ್ನು ಯಾರಿಗೂ ಕೇರ್ ಮಾಡಲ್ಲ ಕಂಡ್ರಿ. ಆತ ಹಿಂದೂಗಳ ಪರ ಅನ್ನೋದು ಸುಳ್ಳು. ಬಿಜೆಪಿ ಪರ ಅನ್ನೋದರಲ್ಲೂ ಅರ್ಥವಿಲ್ಲ. ಅವ್ನು ಬಿಜೆಪಿಯೋರಿಗೇ ಎಷ್ಟು ಸಲ ಉಗಿದಿಲ್ಲ, ಕಾಂಗ್ರೆಸ್‌ನವರನ್ನ ಎಷ್ಟು ಸಾರಿ ಮೆಚ್ಚಿಕೊಂಡಿಲ್ಲ' ಅಂತೆಲ್ಲ ವಕಾಲತ್ತಿನ ಸಂಕೋಲೆಯನ್ನೇ ಸೃಷ್ಟಿಸಿಬಿಡುತ್ತಾರೆ.

ಇಂಥವರು ಹೇಳೋ ಮಾತಿನಲ್ಲಿ ಒಂದಂಶ ಸತ್ಯವಿದೆ. ನಿಜ, ಪ್ರತಾಪ ಸಿಂಹನೆಂಬ ಹಲಾಲುಕೋರ ಯಾರಿಗೂ, ಯಾವುದಕ್ಕೂ ಕೇರ್ ಮಾಡುವವನಲ್ಲ; ಮಾನ ಮರ್ಯಾದೆಗಳಿಗೂ!

ವೃತ್ತಿಧರ್ಮ, ಮೌಲ್ಯ, ಸ್ವಾಭಿಮಾನ-ಇವುಗಳೆಲ್ಲ ಪ್ರತಾಪ ಸಿಂಹನಿಗೆ ಸೂಟ್ ಆಗೋ ವಿಚಾರಗಳಲ್ಲ. ತೀರಾ ಪ್ರೀತಿಸಿದ ಹುಡುಗಿಯ ವೈಕಲ್ಯವನ್ನು ಮುಂದಿಟ್ಟುಕೊಂಡು ಲಾಭ ಪಡೆದ ಲಫಂಗ ಸಿಂಹನನ್ನು ಪತ್ರಕರ್ತನೆಂದಿರಲಿ, ಮನುಷ್ಯ ಅಂತಲೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ!

(ಪುಟ 16 ನೋಡಿ)

ಸೆರಗು ಕಂಡರೆ ಸಿಂಹ!


ಘಟಿಂಗ ಪ್ರತಾಪ ಸಿಂಹ ವಾರಾವಾರ ಒಂದೊಂದು ಸೋಗು ಹಾಕುತ್ತಾನೆ. ತನಗೂ, ತಾನು ಬದುಕುತ್ತಿರುವ ರೀತಿಗೂ ಸಂಬಂಧವೇ ಇಲ್ಲದಿರುವ 'ಆದರ್ಶ'ಗಳನ್ನು 'ಬೆತ್ತಲೆ' ಕಾಲಮ್ಮಲ್ಲಿ ಹರಿಬಿಡುತ್ತಾನೆ. ಅಂಥ ಸೋಗಲಾಡಿತನಗಳಲ್ಲಿ 'ಹಿಂದೂ ಸಹೋದರಿ'ಯರ ಕುರಿತಾದ ಪ್ರೀತಿಯೂ ಒಂದು.

ಯಾರೋ ಮುಸ್ಲಿಂ ಹುಡುಗ ಹಿಂದೂ ಹುಡುಗಿಯನ್ನು ಪ್ರೀತಿಸಿ ಮದುವೆಯಾದರೆ ಈ ಹಲಾಲುಕೋರ 'ಅದು ಲವ್ ಜಿಹಾದ್' ಅಂತ ಗಂಟಲು ಹರಿದುಕೊಳ್ಳುತ್ತಾನೆ. ಹಿಂದೂ ಸಹೋದರಿಯರೇ ಎಚ್ಚರ ಅಂತೆಲ್ಲ ಮುಲುಕಾಡುತ್ತಾನೆ. ಆದರೆ.... ಈ ವೀರ ಸಹೋದರ ಪಕ್ಕಾ ಜೊಲ್ಲು ಗಿರಾಕಿ, ಸೆರಗು ಕಂಡರೆ ನಿಜಕ್ಕೂ ಸಿಂಹ!

ಈತನ ಸ್ತ್ರೀಲೋಲ ಚಾಳಿಯ ಬಗ್ಗೆ ಥರಹೇವಾರಿ ಕಥೆಗಳಿವೆ. ತೀರಾ ಪತ್ರಕರ್ತರ ವಲಯದಲ್ಲೇ ಈ ಬಗೆಗಿನ ರೋಚಕ ಕಥಾಗುಚ್ಛಗಳು ಗುಂಡು ಪಾರ್ಟಿಗಳಲ್ಲಿ ಹೊರಬೀಳುತ್ತಿರುತ್ತವೆ. ಅವುಗಳಲ್ಲಿ ಒಂದು ಘಟನೆ ಸಿಂಹನ ತೆವಲಿಗೆ ಕನ್ನಡಿ ಹಿಡಿಯುವಂತಿದೆ. ಈಗೊಂದೆರಡು ವರ್ಷಗಳ ಹಿಂದೆ ನಡೆದ ಘಟನೆಯಿದು. ಬೆಂಗಳೂರಲ್ಲಿ ಕೆಲಸ ಮಾಡುತ್ತಿದ್ದ ದಕ್ಷಿಣ ಕನ್ನಡದ ಕಡೆಯ ಹುಡುಗಿಯೊಬ್ಬಳು ಪ್ರತಾಪನ ಅಂಕಣವನ್ನು ಇಷ್ಟಪಟ್ಟಿದ್ದಳು. ಅದು ಅಕ್ಷರ ಪ್ರೀತಿಯಷ್ಟೆ. ಇದರ ಸೆಳವಿಗೆ ಸಿಕ್ಕು ಸಿಂಹ ಅಂಕಣ ಗೀಚುವ ಪತ್ರಿಕಾ ಕಚೇರಿಗೆ ಭೇಟಿಯಿತ್ತ ಆಕೆ ಆತನನ್ನು ಭೇಟಿಯಾದಳು. ನೋಡಲು ಚೆಂದಗಿದ್ದ ಆಕೆಯನ್ನು ಬೇರೆಯದೇ ರೀತಿಯಲ್ಲಿ ಅಳೆಯಲು ಶುರುವಿಟ್ಟ ಸಿಂಹ ಬರವಣಿಗೆ ಬಿಟ್ಟುಬೇರೆಲ್ಲಾ ಮಾತುಗಳನ್ನು ಶುರುಹಚ್ಚಿಕೊಂಡ. ಅದಾಗಲೇ ತನಗೆ ಸರಿಯಾಗಿ ಇಕ್ಕಿದ್ದ ಸಂಘದ ಮಂದಿಯನ್ನು ವಾಚಾಮಗೋಚರ ಬೈದ.

ನಂತರ ಅಸಲೀ ವಿಚಾರಕ್ಕೆ ಬಂದ ಪ್ರತಾಪ 'ನಂಗಿನ್ನೂ ಮದ್ವೆ ಆಗಿಲ್ಲ; ನಿಂಗೂ ಆಗಿಲ್ಲ ಅನ್ಸುತ್ತೆ, ನನ್ನ ನೋಡಿದ್ರೆ ಏನನ್ನುತ್ತೆ' ಅಂತೆಲ್ಲ ಪ್ರವರ ಶುರುವಿಟ್ಟುಕೊಂಡವನು 'ಇಲ್ಲೆ ನನ್ನ ರೂಮಿದೆ ಅಲ್ಲಿಗೇ ಬಾ' ಎಂಬಲ್ಲಿಯವರೆಗೆ ಮುಂದುವರೆದ. ಮೈ ಕೈ ಸವರಿ ವಿಕೃತ ಖುಷಿಪಡಲೂ ಯತ್ನಿಸಿದ್ದ!

ಹಿಂದೂ ವೀರ ಪ್ರತಾಪ ಸಿಂಹನ ಇಂಥ ತೆವಲುಗಳ ಪಟ್ಟಿ ಉದ್ದವಿದೆ. ಈ ರೀತಿಯ ತೆವಲುಗಳನ್ನಿಟ್ಟುಕೊಂಡೇ ಹಿಂದೂ ಸಹೋದರಿಯರ ಮಾನ ರಕ್ಷಣೆಯ ಬಗ್ಗೆ ಥಾಸುಗಟ್ಟಲೆ ಬರೆಯುತ್ತಾನೆ. ಭಾಷಣ ಬಿಗಿಯುತ್ತಾನೆ. ಇಂಥಾ ಸಿಂಹಕ್ಕೆ ಯಾವುದರಲ್ಲಿ ಹೊಡೆಯಬೇಕು?




ಅರ್ಪಿತಾ ಹೆಸರಲ್ಲಿ ನೋಂದಣಿ ಪತ್ರ...

ಕಣ್ಮುಚ್ಚಿ ಕೂತಿರುವ ಕಾಗೇರಿ ಅಮಾಯಕ ವಿದ್ಯಾರ್ಥಿಗಳ ಬದುಕಿಗೆ ಬೆಂಕಿ ಹಾಕುತ್ತಿರುವ ಬಡ್ತಿದಾರರು!

'ಹೆಗರಣ ಪುರುಷ' ಯಡ್ಡಿ ಮಹಾತ್ಮನ ಸೋಗಲಾಡಿ ಸಚಿವ ಸಂಪುಟದಲ್ಲಿ 'ನಾಜೂಕಯ್ಯ'ನೆಂದೇ ಗುರುತಿಸಿಕೊಂಡಿರುವ ವಿಶ್ವೇಶ್ವರ ಹೆಗಡೆ ಕಾಗೇರಿಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಅಕಾಡೆಮಿಕ್ ಅವಾಂತರ ಸಾಲುಸಾಲಾಗಿ ನಡೆಯುತ್ತಿದೆ. ಮಂತ್ರಿಯಾಗಿ ಎರಡೂವರೆ ವರ್ಷ ಕಳೆದರೂ ಈ ಒರಿಜಿನಲ್ ಚೆಡ್ಡಿ ಚತುರನಿಗೆ ತನ್ನ ಖಾತೆಯ ಉದ್ದಗಲವೇ ಅರ್ಥವಾಗಿಲ್ಲ! ಚಣ್ಣರ ಮೇಳವೆಂಬ ಸರ್ಕಾರಿ ಸಮಾರಂಭದಲ್ಲಿ 'ಸಣ್ಣವ'ನಾಗಿ ಕಳಾಯಿಸುವ ತೆವಲಿನ ಕಾಗೇರಿ ಅಂತರಂಗದಲ್ಲಿ ಶಿಕ್ಷಣ ಕೇಸರೀಕರಣ ಮಾಡುವ ಅನಾಹುತಕಾರಿ ಅಜೆಂಡಾ ಇಟ್ಟುಕೊಂಡು ಅಂಡಲೆಯುತ್ತಿದ್ದಾರೆ. ತಾನೊಬ್ಬ ಶಿಕ್ಷಣ ತಜ್ಞನೆಂಬ ಅಹಮಿಕೆಯ ಹೆದ್ದು ಕಾಗೇರಿ ಮಾಣಿಗೆ ವಿದ್ಯಾರ್ಥಿಗಳ-ಶಿಕ್ಷಕರ-ಪಾಲಕರ ಅಸಲೀ ಸಂಕಟ-ಸಮಸ್ಯೆಯ ಅರಿವಂತೂ ಒಂಚೂರೂ ಇಲ್ಲ.

ಶಿರಸಿಯನ್ನು ಸ್ವಜಾತಿ ಹೈಗರ ಜಿಲ್ಲೆಯಾಗಿಸುವ ಚಟಕ್ಕೆ ಬಿದ್ದಿರುವ ಕಾಗೇರಿಗೆ ತನ್ನ ಶಿಕ್ಷಣ ಇಲಾಖೆಯಲ್ಲಿ ಏನೇನಾಗುತ್ತಿದೆ ಎಂಬ ಖಬರೇ ಇಲ್ಲ. ಸ್ವಜೇರ್ಣೋದ್ಧಾರ ಸುಖಿತ್ರಾಗೇ ಮಾಡಿಕೊಳ್ಳುತ್ತಿರುವ ಈ ಸ್ವಯಂಘೋಷಿತ ಸಂಭಾವಿತರಿಗೆ ಶಾಲಾಮಕ್ಕಳಿಗೆ ಸರಿಯಾಗಿ ಪಠ್ಯಪುಸ್ತಕವೂ ಪೂರೈಸಲಾಗಲಿಲ್ಲ! ಶಿಕ್ಷಕರು ದಂಗೆಯೆದ್ದರೂ ಕೇರ್ ಮಾಡಲಿಲ್ಲ. ಇಂಥ ಹೇತ್ಲಾಂಡಿ ಶಿಕ್ಷಣ ಮಂತ್ರಿ ಕಾಗೇರಿ ಕಣ್ಣೆದುರೇ ಈಚೆಗೊಂದು 'ಪದೋನ್ನತಿ ಪ್ರಹಸನ' ಜಬರ್ದಸ್ತಾಗಿ ನಡೆದುಹೋಗಿದೆ! ಶಿಕ್ಷಣ ಇಲಾಖೆಯ ಪಂಡಿತೋತ್ತಮರ ಈ ಬಡ್ತಿ ಭಂಡಾಟದಿಂದ ಒಂದಿಷ್ಟು ಶಿಕ್ಷಕ-ಶಿಕ್ಷಕಿಯರಿಗೆ ಭಾಗ್ಯ ಖುಲಾಯಿಸಿದ್ದರೆ, ವಿದ್ಯಾರ್ಥಿಗಳ ಭವಿಷ್ಯ ಮಾತ್ರ ಬರಡಾಗುತ್ತಿದೆ. 'ಪ್ರಮೋಷನ್' ಪಡೆದಿರುವ ಹಲವು ಶಿಕ್ಷಕ/ಶಿಕ್ಷಕಿಯರು 'ಬಡುಗಡೆ'ಯ ಬೇಗುದಿಯಲ್ಲಿ ಪಾಠ ಮಾಡುವುದನ್ನೇ ನಿಲ್ಲಿಸಿ ದೊಡ್ಡ ಸಂಬಳದ ಕನಸು ಕಾಣುತ್ತಿದ್ದಾರೆ! ಇತ್ತ ಹೈಸ್ಕೂಲುಗಳಲ್ಲಿ ಶಿಕ್ಷಕರಿದ್ದೂ ಸತ್ತಂತಾಗಿ ವಿದ್ಯಾರ್ಥಿಗಳು ಅನಾಥರಾಗಿ ಒದ್ದಾಡುತ್ತಿದ್ದಾರೆ!!

ಹಾಗೆ ನೋಡಿದರೆ ಪ್ರೌಢಶಾಲೆಗಳಿಂದ ಪದೋನ್ನತಿ ಪಡೆದು ಪದವಿ ಪೂರ್ವ ಕಾಲೇಜುಗಳಿಗೆ ಉಪನ್ಯಾಸಕರಾಗುವ ಅವಕಾಶ ಕೊಡುವ ನಿಯಮಾವಳಿಯೇ ಮೂರ್ಖತನದ್ದು; ದಡ್ಡ ಬಿಳಿಯಾನೆಗಳ ಬೆಳೆಸುವ ದುಬಾರಿ ಧೋರಣೆಯದು. ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಉಂಟು ಮಾಡುವ, ಅತ್ತ ಜೂನಿಯರ್ ಕಾಲೇಜುಗಳಲ್ಲಿ ಈ 'ಪ್ರಮೋಟಿ'ಗಳಿಂದ ಗುಣಮಟ್ಟದ ಶಿಕ್ಷಣ ನೀಡಲಾಗದ ಮನೆಮುರುಕು ಪದ್ಧತಿಯಿದು. 'ಡಿಗ್ರಿ' ಸರ್ಟಿಫಿಕೇಟ್ ಇದೆ ಎಂಬ ಏಕೈಕ ಕಾರಣಕ್ಕೆ ಹೆಚ್ಚಿನ ಸಂಬಳದ ಅನರ್ಹ ಫಲಾನುಭವಿಗಳ ಸೃಷ್ಟಿಸುವ ಕೆಲಸ ಮಾತ್ರ ಈ ಪದೋನ್ನತಿ ಪರಾಕ್ರಮದಿಂದಾಗುತ್ತಿದೆ ಅಷ್ಟೇ! ದೊಡ್ಡ ಪಗಾರ-ಲೆಕ್ಚರಿಗೆ ಗತ್ತಿನ ಹುದ್ದೆಗೆ ಹೊಕ್ಕಲು ಇಲ್ಲಿರುವ ವಾಮಮಾರ್ಗಕ್ಕೆ ಸರ್ಕಾರವೇ ಸೇವಾ ಜ್ಯೇಷ್ಠತೆ ಎಂಬ 'ಗೌರವ'ದ ಸಿಂಧುತ್ವ ಕೊಡುತ್ತಿದೆ!



ಕಳೆದ ವಾರ ಇಂಥ ಹಲವು 'ಹಿರಿಯ'ರಿಗೆ ಕೌನ್ಸಲಿಂಗ್ ಮೂಲಕ ಪದವಿ ಪೂರ್ವ ಕಾಲೇಜುಗಳಿಗೆ 'ಪ್ರಮೋಟ್' ಮಾಡಲಾಗಿದೆ. ಇಡೀ ರಾಜ್ಯವೇ ಸರ್ಕಾರದ ಡೋಲಾಯಮಾನ ಸ್ಥಿತಿಯಿಂದ ಗೊಂದಲ-ಗಲಾಟೆಯಲ್ಲಿದ್ದಾಗ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾತ್ರ ಅತಿಯಾದ ಚುರುಕುತನ ಪ್ರದರ್ಶಿಸಿ ತರಾತುರಿಯಲ್ಲಿ ಕೌನ್ಸಲಿಂಗ್ ಮಾಡಿಮುಗಿಸಿಬಿಟ್ಟರು. ಇದರಿಂದ ರಾಜ್ಯದ 200 ಪ್ರೌಢಶಾಲೆಗಳ ವಿದ್ಯಾರ್ಥಿಗಳು ಅನಾಥರಾಗುವ ಸ್ಥಿತಿ ಸೃಷ್ಟಿಯಾಗಿದೆ! ಮಕ್ಕಳಿಗೆ ಅಂತಿಮ ಪರೀಕ್ಷೆ ಹತ್ತಿರವಾಗಿರುವ ಈ ಹೊತ್ತಿನಲ್ಲಿ ಏಕಾಏಕಿ ಬಡ್ತಿ ವರ್ಗಾವಣೆ ಕಾರ್ಯಾಚರಣೆಗೆ ಶಿಕ್ಷಣ ಇಲಾಖೆಯ ಹುಚ್ಚು ಅಧಿಕಾರಿಗಳು ಕೈಹಾಕಿರುವುದರಿಂದ ಹೈಸ್ಕೂಲುಗಳ ಅಕಾಡೆಮಿಕ್ ಮೂಡೇ ಹಾಳಾಗಿ ಹೋಗಿದೆ.

ಬಡ್ತಿ ಪಡೆದು ಹೋಗುವ ಅವಸರದಲ್ಲಿರುವ ಹಲವು ದ್ರೋಹಿ ಶಿಕ್ಷಕ/ಶಿಕ್ಷಕಿಯರು ಪಾಠ ಮಾಡುವ ಆಸಕ್ತಿಯನ್ನೇ ಕಳಕೊಂಡುಬಿಟ್ಟಿದ್ದಾರೆ. ತಾವು ಪಡೆಯುತ್ತಿರುವ ಸಂಬಳಕ್ಕೆ ಇರುವಲ್ಲಿ ಇರುವಷ್ಟು ದಿನ ಕರ್ತವ್ಯ ನಿಭಾಯಿಸಬೇಕೆಂಬ ಸಣ್ಣ ನೈತಿಕ ಪ್ರಜ್ಞೆಯೂ ಇಲ್ಲದ ಈ ಗುರು ದೇವ-ದೇವಿಗಳು "ಇಲ್ಲಿರುವುದು ಸುಮ್ಮನೆ... ಅಲ್ಲಿರುವುದು ನಮ್ಮ ಮನೆ..." ಎಂದು ದೊಡ್ಡ ಸಂಬಳದ ದುರಾಸೆಯಲ್ಲಿ ಗುನುಗುತ್ತಿದ್ದಾರೆ. ಇದೆಲ್ಲ ಗೊತ್ತಿದ್ದೂ ಮಂತ್ರಿ ಕಾಗೇರಿ ಇಲಾಖೆಯ ನಾಲಾಯಕ್ ಅಧಿಕಾರಿಗಳು ಕಳ್ಳ ಶಿಕ್ಷಕ/ಶಿಕ್ಷಕಿಯರಿಗೆ ಮೂಗುದಾರ ಹಾಕುತ್ತಿಲ್ಲ; ಅದಕ್ಕಿಂತ ದೊಡ್ಡ ಅಪಚಾರವೆಂದರೆ, ಈ ಅಧಿಕಾರಿಗಳು ಹೊಸ ನೇಮಕಾತಿಯ ಪ್ರಕ್ರಿಯೆಯೂ ಪ್ರಾರಂಭಿಸುತ್ತಿಲ್ಲ! ಪ್ರಮೋಟಿಗಳ ಕಳಿಸಿ ವಿದ್ಯಾರ್ಥಿಗಳ ಹಿತಕಾಪಾಡುವ ಬದಲಿ ವ್ಯವಸ್ಥೆಯನ್ನೂ ಶಿಕ್ಷಣ ಇಲಾಖೆ ಮಾಡುತ್ತಿಲ್ಲ ಏಕೆ?

ಈ ಕರ್ಮಗೇಡಿ ಶಿಕ್ಷಕ/ಶಿಕ್ಷಕಿಯರು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿ-ಮಂತ್ರಿಗಳ ಐಲಾಟದಿಂದ ನಿಷ್ಪಾಪಿ ವಿದ್ಯಾರ್ಥಿಗಳು ಗತಿಗೋತ್ರವಿಲ್ಲದವರಂತೆ ಚಡಪಡಿಸು[...] ಭವಿಷ್ಯ ಬರಡಾಗುವ ಭೀತಿಯಲ್ಲಿ ಕಂಗಾಲಾಗಿಹೋ[...] ತಮ್ಮ ಮಕ್ಕಳ ಪಜೀತಿ ಕಂಡು ಪಾಲಕರಿಗಂತೂ [...] ತೋಚದಂತಾಗಿದೆ. ಪ್ರತಿ ವರ್ಷ ಎಂಬಂತೆ ಬದಲಾಗ[...] ಹತ್ತನೇ ತರಗತಿಯ ಪರೀಕ್ಷಾ ವಿಧಾನದಿಂದ ಕನ್‌ಫ್ಯೂ[...] ಬಿದ್ದಿರುವ ವಿದ್ಯಾರ್ಥಿ ಪಾಲಕರು ಈ ಪದೋನ್ನತಿ [...]ದಿಂದ ಇನ್ನಷ್ಟು ಕಷ್ಟ-ನಷ್ಟಕ್ಕೆ ಈಡಾಗುತ್ತಿದ್ದಾರೆ! [...] ಇಲಾಖೆಯ ಆಗು-ಹೋಗುಗಳ ಮೇಲೆ ಹಿಡಿತವೇ [...] ಮತಿಗೇಡಿ ಮಂತ್ರಿ ಕಾಗೇರಿಗೆ ಶಾಪ ಹಾಕುವುದು [...] ಇನ್ನೇನೂ ಮಾಡಲಾಗದ ದುರಂತದಲ್ಲಿ ವಿದ್ಯಾರ್ಥಿ-ಪಾ[...] ಬಿದ್ದು ಒದ್ದಾಡುತ್ತಿದ್ದಾರೆ.

ಇಷ್ಟೆಲ್ಲ ಅನ್ಯಾಯ-ಅನಾಹುತ ಅಕ್ರಮವಾದರೂ [...] ಕ್ಷೇತ್ರದ ಮಹಾನ್ ಪರಿಕಾರನ ಗೆಟಪ್‌ನಲ್ಲಿ ಕಾಣಿಸಿಕೊ[...] ಮಂತ್ರಿ ಕಾಗೇರಿಗಾಗಲಿ, ಆತನ ಸಲಹೆಗಾರ ಇಲಾಖಾ[...]ಗಳಿಗಾಗಲಿ ಕಾಣಿಸುತ್ತಿಲ್ಲ; ಸಮಸ್ಯೆಗಳು ಎದುರಾದಾಗ [...] ಕೊಂಡು ಹೋಗೋದು ಕಾಗೇರಿ ಜಾಯಮಾನ; ಸ[...] ವಾರದ ಹಿಂದೂ ದೇಶ ಕಟ್ಟುವ ರಾಜಕಾರಣದಲ್ಲಿ [...]ಯಾಗಿರುವ ಸ್ವಾಹಾ ಶೂರ ಕಾಗೇರಿಗೆ ಇಂಥ ಜ[...] ಸಂಗತಿಗಳತ್ತ ಗಮನ ಹರಿಸಲು ಪುರುಸೊತ್ತಾದರೂ [...] ಪಾಪ!

ಕಾಗೇರಿಯಂಥ ಬುದ್ಧಿವಂತ ಮಂತ್ರಿ -ಅಕಾ[...] ಎಕ್ಸ್‌ಪರ್ಟ್‌ಗಳೇ ತುಂಬಿರುವ ಶಿಕ್ಷಣ ಇಲಾಖೆಯ[...] ಫಲಾನುಭವಿ'ಗಳ ತಯಾರಿಸಿ ಗುಡ್ಡೆಹಾಕಿ ಬೊಕ್ಕಸಕ್ಕೆ ದ[...] ಕೊಡುವ ರೀತಿ-ನೀತಿಯಿದೆಯಲ್ಲ, ಅದು ಶುದ್ಧ ಎಡ[...] ಇಲ್ಲಿ ಮಾಸ್ತರಿಕೆಯಿಂದ ಲೆಕ್ಚರಿಕೆಗೆ ನೆಗೆಯಲು ಬರಿ[...] ೪೦ ಮಾರ್ಕ್ 'ಪ್ರತಿಭೆ' ಇದ್ದರೆ ಸಾಕು. ಅದೂ ಹ[...] ತಾವು ಪ್ರೌಢಶಾಲೆಗೆ ನೇಮಕವಾದ ಮೇಲೆ ಇಲಾ[...] ಅನುಮತಿ ಪಡೆಯದೇ 'ಗಳಿಸಿದ' ಸ್ನಾತಕೋತ್ತರ [...] ಶಾಲೆಯಲ್ಲಿ ಸರಿಯಾಗಿ ಡ್ಯೂಟಿಯೂ ಮಾಡದೆ [...] 'ಉತ್ತರ ಪುಸ್ತಕ' ಎಂಬ ಸಿದ್ಧ ಉತ್ತರ ಉರು ಹೊ[...] ಪಡೆದ ಪದವಿಯಿದು. ಬಡ್ತಿಗೆ ಪ್ರೌಢಶಾಲೆಗೆ [...] ದಿನಾಂಕದ ಸೇವಾ ಹಿರಿತನ ಪರಿಗಣಿಸಲ್ಪಟ್ಟಿದ್ದರಿಂದ[...] ನಾಲ್ಕಾರು ವರ್ಷದಲ್ಲಿ ಸ್ನಾತಕೋತ್ತರ ಪದವಿಗಳ ನಾಯಿ[...] ಕೊಡೆ ಶುರುವಾಗಿಹೋಗಿದೆ!! ಇತ್ತೀಚೆಗೆ ಪ್ರಾರಂ[...]ರುವ ಬಾಹ್ಯ ಪದವಿ ದಯಪಾಲಿಸುವ ವಿಶ್ವವಿದ್ಯಾಲ[...] ಜೊತೆಗೆ ಹೈಸೋಟಿಗೆ ಬಿದ್ದಂತೆ ಪದವಿ ಮಾರಾಟಕ್ಕಿಳಿ[...] ರಾಜ್ಯದ ಹಾಗೂ ಹೊರರಾಜ್ಯದ ಯುನಿವರ್ಸಿಟಿಗಳ '[...] ಕ್ರಾಂತಿ' ಯ ಭರಪೂರ ಲಾಭ ಈ ಪದೋನ್ನತಿ [...]ಗಾರರು ಪಡೆದುಕೊಂಡಿದ್ದಾರೆ.

ಗೋಕಾಕ್ ಮಿಲ್ಲಿನ ಗೂಂಡಾಪಡೆ

ಕಾರ್ಮಿಕನ ಕುಟುಂಬದ ಕಣ್ಣೀರಗಾಥೆ

ಪೋಲೀಸ್‌ಗಾರಿಕೆ, ರೌಡಿ ರಾಜಕೀಯ ಮುಂತಾದವುಗಳ ಇಷಾರೆಯಲ್ಲೇ ಮುನ್ನಡೆಯುತ್ತಾ ಬಂದ ಗೋಕಾಕ್ ಮಿಲ್ಲಿಗೆ ರಕ್ತಸಿಕ್ತ ಇತಿಹಾಸವಿದೆ. ಇದರ ಪ್ರತಿ ಕದಲಿಕೆಯ ಹಿಂದೆಯೂ ಬಡ ಕಾರ್ಮಿಕರ ಸಂಕಟದ ಚೀತ್ಕಾರವಿದೆ. ಈ ಭಾಗದಲ್ಲಿ ಮಿಲ್ಲಿನ ಕಾರ್ಮಿಕರ ಬದುಕಿಗೆ ಚಪ್ಪಡಿ ಎಳೆಯುತ್ತಲೇ ಕೊಬ್ಬಿ ಹೋದವರದ್ದೊಂದು ದಂಡೇ ಇದೆ. ಸದ್ಯ ಗೋಕಾಕ್ ಮಿಲ್ಲಿನ ಕರಾಳ ಇತಿಹಾಸದ ಖಾತೆಗೆ ಮತ್ತೊಂದು ಅಮಾನುಷ ಘಟನೆ ಜಮೆಯಾಗಿದೆ.

ಗೋಕಾಕ್ ಮಿಲ್ಲಿನ ಆಡಳಿತ ಮಂಡಳಿ ಬದಲಾದರೂ, ಅದ್ಯಾರೇ ಯೂನಿಯನ್ ಲೀಡರುಗಳಾದರೂ ಹಳೇ ಪಾಳೇಗಾರಿಕೆಯನ್ನು ಮುಂದುವರೆಸಿಕೊಂಡು ಹೋಗುವುದು ರೂಢಿ. ಈಗಿರುವ ಆಡಳಿತ ವರ್ಗ ಕೂಡಾ ಹೊರತಾಗಿಲ್ಲ. ಮಿಲ್ಲಿನ ಕೆಲಸಕ್ಕಾಗಿಯೇ ಜೀವ ತೇಯ್ದು ಇನ್ನಿಲ್ಲವಾದ ಕಾರ್ಮಿಕನೋರ್ವನ ವೃದ್ಧ ಹೆಂಡತಿ, ಮಕ್ಕಳನ್ನು ಖಾಸಗಿ ಗೂಂಡಾಪಡೆ ಬೀದಿಗೆ ತಳ್ಳುವ ಮೂಲಕ ಈ ವಿಚಾರ ಸಾಬೀತಾಗಿದೆ.



ಬಡ ಕಾರ್ಮಿಕರ ಗೋಳಿನ ಕಥೆ

ಗೋಕಾಕ್ ಮಿಲ್ಲಿನ ಆಡಳಿತ ಮಂಡಳಿಯಿಂದ ವೃದ್ಧೆ ಕಸ್ತೂರಿ ಅನುಭವಿಸಿದ ಹಿಂಸೆ, ಪ್ರತೀ ಕಾರ್ಮಿಕ ಕುಟುಂಬವನ್ನೂ ಹಾದುಹೋಗಿದೆ. ಅಖಂಡ 70 ರಷ್ಟು ಕುಟುಂಬಗಳು ಇಂಥಾದ್ದೇ ದೌರ್ಜನ್ಯಕ್ಕೊಳಗಾಗುತ್ತಿವೆ.


ಇಲ್ಲಿನ ಕಾರ್ಮಿಕರಲ್ಲಿ ಎರಡ್ಮೂರು ತಲೆಮಾರುಗಳು ಮಿಲ್ಲಿಗಾಗಿ ಜೀವ ತೇಯ್ದಿವೆ. ಆ ಕೆಲಸವನ್ನೇ ಉಸಿರಾಡಿಕೊಂಡಿವೆ. ಆದರೆ ಅವರಿಗೆಲ್ಲಾ ಮಿಲ್ಲಿನ ಕಡೆಯಿಂದ ಸಿಗುತ್ತಿರುವ ಸಾರ್ವತ್ರಿಕ ಫೆಸಿಲಿಟಿಯೆಂದರೆ ಹಿಂಸೆ, ಗೂಂಡಾಗಿರಿಗಳು ಮಾತ್ರ. ಇಲ್ಲಿನ ಆಡಳಿತ ವರ್ಗವೆಂಬುದು ಬಡ ಕಾರ್ಮಿಕರ ಎದೆ ಮೇಲೇ ಸುಗ್ಗಿಯ ಕೂಳು ಮೆಲ್ಲುತ್ತಿವೆ. ಅವರಿಗೆ ದಕ್ಕಬೇಕಾದ ಕನಿಷ್ಠ ಸವಲತ್ತುಗಳನ್ನೂ ನೀಡದೇ ತಾವೇ ತಿಂದು ಕೊಬ್ಬಿ ಹೋಗುತ್ತಿದೆ. ಇದರ ವಿರುದ್ಧ ದನಿಯೆತ್ತುವವರು ಒಂದೋ ಬೀದಿಗೆ ಬೀಳಬೇಕು, ಇಲ್ಲವಾದರೆ ಸಾವಿನ ಮನೆ ಸೇರಬೇಕು! ಇದು ಮಿಲ್ಲಿನ ಕ್ರೌರ್ಯದ ಪರಮಾವಧಿ.

ಕಸ್ತೂರಿಯ ಬದುಕು ಕಾರ್ಮಿಕರ ಕುಟುಂಬದ ರೋದನೆಗೆ ಕನ್ನಡಿಯಾದರೆ, ಪಾಲಿ ಕೆಲಸ ಮಾಡುತ್ತಿರುವವರ ಬದುಕೂ ಕ್ಷಣ, ಕ್ಷಣದ ಹಿಂಸೆಗೆ ಪಕ್ಕಾಗುತ್ತಲೇ ಸಾಗಬೇಕಾಗಿದೆ.

ಈ ಭಾಗದ ಜನಪರ ಸಂಘಟನೆಗಳು ತಕ್ಷಣ ಅಖಾಡಕ್ಕಿಳಿದು ಕಾರ್ಮಿಕರನ್ನು ರಕ್ಷಿಸಬೇಕಿದೆ.

ಹೀಗೊಂದು ಅಮಾನುಷ ದೌರ್ಜನ್ಯಕ್ಕೆ ಸಿಕ್ಕಿ ಕಂಗಾಲಾಗಿರುವವರು ಕಸ್ತೂರಿ ಖಾನಪ್ಪನವರ. ಇದರ ಗಂಡ ತಮ್ಮಣ್ಣಾ ಅಖಂಡ 25 ವರ್ಷ ಗೋಕಾಕ್ ಮಿಲ್ಲಿಗಾಗಿ ದುಡಿದು ಈಗ್ಗೆ ಹದಿನಾರು ವರ್ಷಗಳ ಹಿಂದೆ ಅನಾರೋಗ್ಯದಿಂದ ಅಸುನೀಗಿದ್ದರು. ಕಸ್ತೂರಿಯವರಿಗೆ ಉಳಿದದ್ದು ಮೂವರು ಗಂಡು ಮಕ್ಕಳು ಮತ್ತು ಮಿಲ್ಲಿನದ್ದೊಂದು ಶಿಥಿಲ ರೂಮು ಮಾತ್ರ. ಈ ತಿಂಗಳ ಮೊದಲ ದಿನವೇ ಈ ರೂಮಿಗೆ ನುಗ್ಗಿದ ಮಿಲ್ಲಿನ ಆಡಳಿತ ವರ್ಗದ ಗೂಂಡಾ ಪಡೆ ಅಸಹಾಯಕ ವೃದ್ಧ ಕಸ್ತೂರಿಗೆ ಥಳಿಸಿ ಇಡೀ ಮನೆಯನ್ನು ಜಖಂಗೊಳಿಸಿ ದುಷ್ಟತನ ಮೆರೆದಿದೆ.

ಕಸ್ತೂರಿ ತನ್ನ ಕೊನೆ ಮಗನೊಂದಿಗೆ ಗೋಕಾಕ್ ಫಾಲ್ಸ್ ಗ್ರಾಮದ ಮಿಲ್‌ನ ಕ್ವಾಟ್ರರ್ಸ್‌ನಲ್ಲಿ ವಾಸವಿದ್ದರು. ಗಂಡ ಅನಾರೋಗ್ಯದಿಂದ ಅಸುನೀಗಿದ ಬಳಿಕ ಮಿಲ್‌ನ ಆಡಳಿತ ವರ್ಗ ಯಾವುದೇ ರೀತಿಯ ನೆರವು ನೀಡಿಲ್ಲ. ಬೇರೆಲ್ಲಾ ಇರಲಿ, ನ್ಯಾಯಯುತವಾಗಿ 25 ವರ್ಷದ ದುಡಿಮೆಗೆ ದಕ್ಕಬೇಕಾದ ಪಿಎಫ್ ಹಾಗೂ ಇತರೇ ಸೌಕರ್ಯಗಳೂ ಸಿಕ್ಕಿಲ್ಲ. ಅಖಂಡ 25 ವರ್ಷ ಮಿಲ್ಲಿಗಾಗಿ ಬೆವರು ಬಸಿದು ದುಡಿದಿದ್ದನಲ್ಲಾ ತಮ್ಮಣ್ಣ? ಆ ಕಾಸು ಸಂಸಾರ ನಿರ್ವಹಣೆ ಹಾಗೂ ತನ್ನದೇ ಅನಾರೋಗ್ಯದಿಂದ ಕರಗಿಹೋಗಿತ್ತು. ಅಂಥ ಸಂಕಟದಲ್ಲೇ ಆತ ಕೊನೆಯುಸಿರೆಳೆದದ್ದೂ ಆಯಿತು. ತೀರಾ ನ್ಯಾಯಯುತವಾಗಿ ಬರಬೇಕಿರುವ ದುಡ್ಡಿಗಾಗಿ ಪಟ್ಟುಹಿಡಿದ ಕಸ್ತೂರಿ ತನ್ನ ಮೂವರು ಗಂಡು ಮಕ್ಕಳೊಂದಿಗೆ ಮಿಲ್ಲಿನ ಕ್ವಾಟ್ರರ್ಸ್‌ನಲ್ಲೇ ನೆಲೆ ನಿಂತರು. ಆದರೆ ಮಿಲ್ಲಿನ ಗೂಂಡಾ ಪಡೆ ಎತ್ತಂಗಡಿ ಮಾಡಲು ಪದೇಪದೇ ಪ್ರಯತ್ನಿಸುತ್ತಲೇ ಇತ್ತು.



ಹೀಗೆ ಒಂದು ರೀತಿಯಲ್ಲಿ ಬೀದಿಗೆ ಬಿದ್ದಂತಾದ ಬದುಕನ್ನು ಮಿಲ್ಲಿನ ಕಡೆಯಿಂದ ಎಂದಾದರೂ ನ್ಯಾಯ ದೊರಕಬಹುದೆಂಬ ಹಂಬಲಿಕೆಯಿಂದಲೇ ದಿನದೂಡ ಹತ್ತಿದ ಕಸ್ತೂರಿಗೆ ಕಿರುಕುಳದ ಹೊರತಾಗಿ ಬೇರೇನೂ ದ[...] ಇದೆಲ್ಲದರ ನಡುವೆಯೇ ತುತ್ತಿನ ಚೀಲ ತುಂಬಿಸಲು[...] ಹಿರಿಯ ಮಕ್ಕಳಿಬ್ಬರು ಬೆಂಗಳೂರಿನತ್ತ ಹೊರಟು[...] ನೌಕರಿ ಅಂತೊಂದನ್ನು ಹಿಡಿದರು. ಕೊನೆಯ ಮಗನ[...] ಬದುಕಲು ಶುರುವಿಟ್ಟ ಕಸ್ತೂರಿ ಅಂಗನವಾಡಿ [...] ಕೆಲಸ ಶುರು ಮಾಡಿದರು.

ಇದಾದದ್ದೇ ಮಿಲ್ಲಿನ ದುಷ್ಟರಿಗೆ ಈ ಹೆಂಗುಸು ಕ್ವಾ[...] ಖಾಲಿ ಮಾಡೋದಿಲ್ಲ ಅಂತ ಮನದಟ್ಟಾಗಿದ[...] ಹಿನ್ನೆಲೆಯಲ್ಲಿ ವ್ಯವಸ್ಥಿತ ಸಂಚೊಂದನ್ನು ರೂಪಿಸಿದ [...] ಮಂಡಳಿ ಕಸ್ತೂರಿಯವರನ್ನು ಗೋಕಾಕ್ ಫಾಲ[...] ಬೇರೆಡೆಗೆ ವರ್ಗಾ ಮಾಡಿಸಿತು. ಹಾಗಾದರೂ ಕ್ವಾ[...] ಬಿಟ್ಟು ತೊಲಗಲೆಂಬುದು ದುಷ್ಟರ ಇಂಗಿತ. ಕಸ್ತೂರಿ ಬೇರೆ ಊರಿನ ಕೆಲಸಕ್ಕೆ ದಿನನಿತ್ಯ ಅಲೆದಾ[...] ವಿನಃ ಕ್ವಾಟ್ರರ್ಸ್ ಬಿಟ್ಟು ಕದಲಲಿಲ್ಲ.

ಇದರಿಂದ ಕುದ್ದು ಹೋದವನು ಗೋಕಾಕ್ ಆಡಳಿತ ಮಂಡಳಿಯ ಮ್ಯಾನೇಜಿಂಗ್ ಡೈ[...] ಎಚ್.ಎಸ್. ಭಾಸ್ಕರ. ಸದ್ಯ ಮಿಲ್ಲೊಳಗಿನ ದುಷ್ಟ[...] ದಂಡನಾಯಕನಾಗಿರುವ ಈತ ಜನರಲ್ ಮ್ಯಾ[...] ರವೀಶ್, ಲೇಬರ್ ಆಫೀಸರ್ ವಿ.ಕೆ. ಪೂಜಾರಿ [...]ರೊಂದಿಗೆ ಸೇರಿ ಸಂಚು ಹೆಣೆಯಲಾರಂಭಿಸಿದ. ಮಿಲ್ಲೊಳಗಿನ ವಿವಿಧ ವಿಭಾಗಗಳ ದುಷ್ಟ ಅಧಿಕಾ[...] ಕೈ ಜೋಡಿಸಿದರು. ಬಹುಹಿಂದಿನಿಂದಲೇ ಈ [...] ಜಾರಿಯಲ್ಲಿತ್ತಾದರೂ ಅದು ಕಾರ್ಯರೂಪಕ್ಕೆ ಬ[...] ನವೆಂಬರ್ ಒಂದನೇ ತಾರೀಖು.

ಪದವಿ ಆಕಾಂಕ್ಷಿಗಳ ಯಾವುದೇ ಪೂರ್ವಾಪರಗಳನ್ನು ಗಣಿಸದೆ, ಶಿಕ್ಷಣ ಇಲಾಖೆಯ ಪೂರ್ವಾನುಮತಿಯೂ ಪಡೆದುಕೊಳ್ಳದೆ ಡಿಗ್ರಿ ಬಿಕರಿ ಮಾಡಲಾಗಿದೆ. ಪದೋನ್ನತಿಗೆ ಸ್ಕೂಲುಗಳಲ್ಲಿ ಬೋಧಿಸುವ ವಿಷಯದಲ್ಲೇ ಸ್ನಾತಕೋತ್ತರ ಪದವಿ ಬೇಕೆಂಬ ಕಾನೂನಿನಿಂದಾಗಿ ಸುಲಭವಾಗಿ ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ ಎಂಬೆರಡು ವಿಷಯಗಳ ಎಂ.ಎ. ಡಿಗ್ರಿಗಳು ಬಿಸಿಬಿಸಿಯಾಗಿ ಹಂಚಲ್ಪಟ್ಟವು. ಇಂಥ ಮಾಸ್ಟರ್ ಡಿಗ್ರಿದಾರರಲ್ಲಿ ಬಹುತೇಕರು ಥಾರ್ಟಿ ಪರ್ಸೆಂಟೇಜ್ ಪರಾಕ್ರಮಿಗಳು!

ಇನ್ನಾದರೂ ಸರ್ಕಾರ ಪೆದ್ದರಿಗೆ ಹುದ್ದೆ ಕರುಣಿಸುವ ಈ ನೀತಿ ಬದಲಿಸದಿದ್ದರೆ ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಗುಣಮಟ್ಟ ಕುಸಿದು ಎಕ್ಕುಟ್ಟಿಹೋಗುವುದು ಗ್ಯಾರಂಟಿ! ಆಂತರಿಕವಾಗಿ ಸ್ನಾತಕೋತ್ತರ ಪದವಿ ಪಡೆದ ಹೈಸ್ಕೂಲು ಶಿಕ್ಷಕ/ಶಿಕ್ಷಕಿಯರಿಗೆ ಮೊದಲು ಪ್ರಾಶಸ್ತ್ಯ ಕೊಡಬೇಕು. ಅಲ್ಲದೇ ಅವರು ಪದವಿ ಪಡೆದ ಇಸವಿಯನ್ನು ಸೇವಾಹಿರಿತನಕ್ಕೆ ಕಡ್ಡಾಯವಾಗಿ ಪರಿಗಣಿಸಬೇಕು. ಜತೆಗೆ ಸಂಬಂಧಿಸಿದ ವಿಷಯದ ಎಂಫಿಲ್, ಡಿಪ್ಲೊಮಾ ಅಥವಾ ಪಿಎಚ್.ಡಿ.ಗಳನ್ನು ಪರಿಗಣಿಸುವಂತಾಗಬೇಕು. ಬಾಹ್ಯವಾಗಿ ಸ್ನಾತಕೋತ್ತರ ಡಿಗ್ರಿ ಪಡೆದವರ ಶೇ.40ರ ಗಡಿ ನೋಡು ವುದು ಬಿಟ್ಟು ಮೆರಿಟ್‌ಗೆ ಮಣೆ ಹಾಕುವಂತಾಗಬೇಕು. ಈ ಅರ್ಹತೆಯಂತೆ ಪ್ರೌಢ ಶಾಲೆಯಲ್ಲಿ ಕನಿಷ್ಠ ಹತ್ತು ವರ್ಷ ಕೆಲಸ ಮಾಡಿದವರಿಗಷ್ಟೇ ಪದೋನ್ನತಿ ಕೊಡುವ ಕಟ್ಟುಪಾಡು ನಿಯಮ ಶಿಕ್ಷಣ ಇಲಾಖೆ ಜಾರಿಗೊಳಿಸಬೇಕಿದೆ.

ನೇರ ನೇಮಕಾತಿಯಲ್ಲಿ ಹಲವು ನಿಬಂಧನೆ-ಪರೀಕ್ಷೆ ಎದುರಿಸಿ ಪದವಿಪೂರ್ವ ಕಾಲೇಜು ಉಪನ್ಯಾಸಕರಾಗಿ ಆಯ್ಕೆಯಾಗುವವರಿಗೆ ಹೋಲಿಸಿದರೆ ಈ ಶೇಕಡಾ ನಲವತ್ತರ ಸರ್ಟಿಫಿಕೇಟ್ ಮತ್ತು ಹೈಸ್ಕೂಲಿಗೆ ಸೇರಿದ ದಿನಾಂಕದ ಸೇವಾ ಹಿರಿತನದ 'ಯೋಗ್ಯತೆ'ಯಲ್ಲಿ ಪದವಿ ಪೂರ್ವ ಕಾಲೇಜಿಗೆ ಬಡ್ತಿ ಪಡೆದು ವಕ್ಕರಿಸುವವರು ಹೆಡ್ಡನೇ ಸರಿ! ಇಂಥ ಅನರ್ಹರ ಉಪನ್ಯಾಸಕರಾಗಿ ಮಾಡುವುದರಿಂದ ಪ್ರತಿಭಾನ್ವಿತರಿಗಷ್ಟೇ ಅಲ್ಲ ಜೂನಿಯರ್ ಕಾಲೇಜು ವಿದ್ಯಾರ್ಥಿಗಳಿಗೂ ಅನ್ಯಾಯ-ವಂಚನೆ ಮಾಡಿದಂತಾಗುತ್ತದೆ! ಎಲ್ಲಕ್ಕಿಂತ ಮುಖ್ಯವಾಗಿ ಈ ಪದೋನ್ನತಿ ಪ್ರಕ್ರಿಯೆ ಏಪ್ರಿಲ್-ಮೇ ತಿಂಗಳಲ್ಲೇ ಮುಗಿಸಿಬಿಡಬೇಕು. ಇದರಿಂದ ಪ್ರೌಢಶಾಲಾ ಮಕ್ಕಳಿಗೆ ಆಗುವ ತೊಂದರೆ-ಮೋಸವೂ ತಪ್ಪುತ್ತದೆ.

ಶಿಕ್ಷಣ ಇಲಾಖೆಯ ಪಂಡಿತರಿಗಿದು ಅರ್ಥವಾದೀತಾ? 'ಕ್ರಾಂತಿಕಾರಿ' ಕಾಗೇರಿ ಇತ್ತ ಗಮನ ಹರಿಸಿಯಾರಾ?

• ನಹುಶ

ಅಂದು ಬೆಳಗ್ಗೆ ಹತ್ತು ಗಂಟೆ ಸುಮಾರಿಗೆ ಒಂದಿಡೀ ದುಷ್ಟಪಡೆ ಭಾಸ್ಕರನ ಮುಂದಾಳತ್ವದಲ್ಲಿ ಕಸ್ತೂರಿಯ ಮನೆ ಮೇಲೆ ಜಮಾವಣೆಗೊಂಡಿತ್ತು. ಮಿಲ್ಲಿನ ಸೆಕ್ಯೂರಿಟಿ ಗಾರ್ಡ್‌ಗಳನ್ನು ಈ ಘನಕಾರ್ಯಕ್ಕೆ ಕರೆತರಲಾಗಿತ್ತು ತದನಂತರ ಏಕಾಏಕಿ ಮನೆಯೊಳಗೆ ನುಗ್ಗಿ ಇದ್ದ ಸಾಮಾನು ಸರಂಜಾಮುಗಳನ್ನೆಲ್ಲಾ ಬೀದಿಗೆಸೆದರು. ತಡೆಯಲು ಬಂದ ವೃದ್ಧೆ ಕಸ್ತೂರಿಗೆ ಥಳಿಸಿ, ಮನೆಯ ಛಾವಣಿ ಹೆಂಚು, ಕಿಟಕಿಗಳನ್ನೆಲ್ಲಾ ಕಿತ್ತು ಎಸೆದರು. ಅರೆಗಳಿಗೆಯಲ್ಲೇ ಆ ಮನೆಯನ್ನು ಯಾರೂ ವಾಸಿಸದಂತಹ ಪರಿಸ್ಥಿತಿಗೆ ತಂದಿಟ್ಟರು. ವೃದ್ಧೆ ಕಸ್ತೂರಿಯ ವಿನಂತಿ, ದೈನ್ಯತೆಗಳೆಲ್ಲ ಅಕ್ಷರಶಃ ಮೂಕ ರೋದನೆಯಂತಾಯಿತು.

ಇನ್ನೂ ದುರಂತದ ಸಂಗತಿಯೆಂದರೆ ಈ ಭಾಗದ ಪೊಲೀಸ್ ಮಂದಿ ಮಿಲ್ಲಿನ ಕುಳಗಳ ಎಂಜಲು ಕಾಸಿಗೆ ಬಲಿ ಬಿದ್ದಂತಿದೆ. ಕಸ್ತೂರಿ ಮನೆ ಕಳೆದುಕೊಂಡು ಮಿಲ್ಲಿನ ಮಂದಿಯ ದೌರ್ಜನ್ಯದ ವಿರುದ್ಧ ದೂರು ನೀಡಿದರೆ ಗೋಕಾಕ್ ಟೌನ್ ಪೊಲೀಸರು ಸೌಜನ್ಯದಿಂದ ಮಾತಾಡಿಸಲೂ ಇಲ್ಲ. ಬದಲಾಗಿ ಈ ಕೇಸು ನಮ್ಮ ವ್ಯಾಪ್ತಿಗೆ ಬರೋದಿಲ್ಲ ಅಂತೆಲ್ಲ ಸಬೂಬು ಹೇಳಿ ಸಾಗಹಾಕಿದರು.

ಈ ಸಂಬಂಧ ಕಸ್ತೂರಿಯವರ ಹಿರಿಮಕ್ಕಳು ಅಜಯ್ ಕುಮಾರ್ ಸಿಂಗ್‌ರವರಿಗೆ ಮನವಿಯನ್ನು ಸಲ್ಲಿಸಿದ್ದಾನೆ. ತಮ್ಮ ತಾಯಿಗೆ ರಕ್ಷಣೆ ಕೊಡಿಸಬೇಕೆಂದು ನಿವೇದಿಸಿಕೊಂಡಿದ್ದಾರೆ. ಆದರೆ ಎರಡೆರಡು ಬಾರಿ ಅಹವಾಲು ಸಲ್ಲಿಸಿದರೂ ಯಾವ ಪ್ರಯೋಜನವೂ ಆಗಿಲ್ಲ.

ಇದಕ್ಕೆ ಏನನ್ನಬೇಕು? ಗೋಕಾಕ್ ಮಿಲ್ಲಿನ ಆಡಳಿತ ಮಂಡಳಿಯ ದುಷ್ಟತನಕ್ಕೆ ಯಾವ ಶಿಕ್ಷೆಯೂ ಇಲ್ಲವೆ. ಅಷ್ಟಕ್ಕೂ ಕಸ್ತೂರಿಯವರಾಗಲಿ, ಅವರ ಮಕ್ಕಳಾಗಲಿ ಮಿಲ್ಲಿನ ಕ್ವಾರ್ಟರ್ಸ್ ಮೇಲೆ ಅಧಿಪತ್ಯ ಸಾಧಿಸಲೆತ್ನಿಸುತ್ತಿಲ್ಲ, ತಮ್ಮಣ್ಣ 25 ವರ್ಷ ದುಡಿದಿದ್ದಾನಲ್ಲಾ? ಅದಕ್ಕೆ ತಕ್ಕುದಾಗಿ ಬರಬೇಕಾದ ಸವಲತ್ತುಗಳನ್ನು ಕೊಡಿ ಅಂತಷ್ಟೇ ಕೇಳುತ್ತಿದ್ದಾರೆ. ಇದು ನ್ಯಾಯವೂ ಹೌದು. ಆದರೆ ಅನ್ಯಾಯದ ಅಸ್ತ್ರ ಹಿಡಿದು ಕಾರ್ಮಿಕರನ್ನು ಬಗ್ಗುಬಡಿಯುತ್ತಲೇ ಬಂದ ಆಡಳಿತ ಮಂಡಳಿಗೆ ಇದ್ಯಾವುದು ಕಾಣಿಸುತ್ತಿಲ್ಲ.

ರಾಜ್ಯದ ಕಾರ್ಮಿಕ ಸಚಿವಾಲಯ, ಕಾರ್ಮಿಕ ಪರ ಸಂಘಟನೆಗಳೂ ಕಣ್ಮುಚ್ಚಿ ಕೂತಂತಿದೆ. ಅವು ಇನ್ನಾದರೂ ಕಣ್ತೆರೆದರೆ ಬರೀ ಕಸ್ತೂರಿ ಕುಟುಂಬಕ್ಕಲ್ಲ, ಮಿಲ್ಲಿನ ದೌರ್ಜನ್ಯಕ್ಕೊಳಗಾಗಿರುವ 70-80 ಕಾರ್ಮಿಕ ಕುಟುಂಬಗಳಿಗೂ ನ್ಯಾಯ ಒದಗಿಸಿದಂತಾಗುತ್ತದೆ.

ಕಾರಜೋಳನ ಶಿಷ್ಯ ಸೊಗಲದ

ಸಬ್‌ರಿಜಿಸ್ಟ್ರಾರ್ ಕಚೇರಿಯೀಗ ಎತ್ತುವಳಿ ಅಡ್ಡೆ!



ಗೋವಿಂದ ಕಾರಜೋಳನ ಉಸ್ತುವಾರಿಯಲ್ಲಿ ಬಾಗಲಕೋಟೆ ಜಿಲ್ಲೆ ಕಂಗಾಲಾಗಿದೆ. ಈ ಮಹಾಶಯನ ಸ್ವಂತ ಕ್ಷೇತ್ರ ಮುಧೋಳ ಸಕಲ ದಂಧೆಗಳ ಕಾರಸ್ಥಾನವಾಗಿ ಬದಲಾಗಿದೆ. ಸರ್ಕಾರಿ ಕಚೇರಿಗಳಂತೂ ಹಣಬಾಕ ಅಧಿಕಾರಿಗಳಿಂದಲೇ ಪಿತಗುಡಲಾರಂಭಿಸಿವೆ. ಇದೆಲ್ಲಕ್ಕಿಂತಲೂ ಮುಖ್ಯವಾಗಿ ಸಬ್‌ರಿಜಿಸ್ಟ್ರಾರ್ ಕಚೇರಿಯೆಂಬುದು ಅಕ್ಷರಶಃ ಎತ್ತುವಳಿಯ ಅಡ್ಡೆಯಾಗಿಬಿಟ್ಟಿದೆ.



ಇದಕ್ಕೆ ಮೂಲಕಾರಣ ಸಬ್‌ರಿಜಿಸ್ಟ್ರಾರ್ ಸುಭಾಷ್ ಸೊಗಲದನೆಂಬ ಸೋಗಲಾಡಿ ಆಸಾಮಿ. 2006 ರಲ್ಲಿ ಇಲ್ಲಿಗೆ ಬಂದು ವಕ್ಕರಿಸಿದ ಸೊಗಲದ ಗೋವಿಂದ ಕಾರಜೋಳನ ಪಕ್ಕಾ ಶಿಷ್ಯ. ಇಂಥಾ ಹಿನ್ನೆಲೆಯಿಟ್ಟುಕೊಂಡು ಎಗ್ಗಿಲ್ಲದೆ ನುಂಗಲು ನಿಂತಿರುವ ಸೊಗಲದ ಆಗಾಗ 'ನಾ ಜಗದೀಶ ಶೆಟ್ಟರಗ ನೆಂಟ ಅದೇನಿ' ಅನ್ನುತ್ತಾ ಅಮಾಯಕರನ್ನ ಬೆದರಿಸುವುದೂ ಇದೆ!

ಸುಭಾಷ್ ಸೊಗಲದನ ಅಂದಾದುಂದಿಗಳು ಹಲವಾರು ಅಕ್ರಮಗಳಿಗೆ ಕಾರಣವಾಗಿ ಜನಸಾಮಾನ್ಯರ ನೆಮ್ಮದಿ ಕಿತ್ತುಕೊಂಡಿವೆ. ಜೊತೆಗೆ ಆತನ ಕೈಕೆಳಗೇ ಕೆಲಸ ಮಾಡುವವರಿಗೂ ಉಸಿರುಗಟ್ಟಿಸುವ ಹಂತ ತಲುಪಿದೆ. ಇಲ್ಲಿನ ಕೆಲ ನಿಷ್ಠಾವಂತ ಬಾಂಡ್ ರೈಟರ್ಸ್‌ಗಳಂತೂ ಸೊಗಲದನ ಕಿರಿಕಿರಿಯಿಂದ ರೋಸಿಹೋಗಿ ಆತನನ್ನು ಎತ್ತಂಗಡಿ ಮಾಡಿಸುವಂತೆ ಕಾರಜೋಳನಿಗೆ ಅಹವಾಲು ಸಲ್ಲಿಸಿದ್ದರು. ಕಾರಜೋಳ ಎಂಥಾ ಮನೆಮುರುಕ ಕೆಲಸ ಮಾಡಿದನೆಂದರೆ, ಅಹವಾಲಿನ ಪ್ರತಿಯನ್ನು ತನ್ನ ಶಿಷ್ಯ ಸೊಗದವನಿಗೆ ಕಳಿಸಿ ದೂರು ನೀಡಿದ ಬಾಂಡ್ ರೈಟರ್ಸ್ ಬಗ್ಗೆ ಎಚ್ಚರದಿಂದಿರುವಂತೆ ಸೂಚಿಸಿದ!

ಈತ ಮಾಡುವ ಅಡ್ನಾಡಿ ಕೆಲಸಗಳು ಹೇಗಿರುತ್ತವೋ ನೋಡಿ. ಮುಧೋಳ ತಾಲ್ಲೂಕಿನ ವಜ್ರಮಟ್ಟಿ ಗ್ರಾಮದಲ್ಲಿ ಬಸಯ್ಯ ಮಠಪತಿಗೆ ಸೇರಿದ ಫಲವತ್ತಾದ ನೀರಾವರಿ ಜಮೀನೊಂದಿದೆ. ಸರ್ವೆ ನಂ. 20/2A ನಲ್ಲಿರುವ ಇದನ್ನು ಸೊಗಲದ ಒಂದೇ ದಿನದಲ್ಲಿ ಒಣಬೇಸಾಯ ಜಮೀನೆಂದು ಪರಿವರ್ತನೆ ಮಾಡಿ ಈರನಗೌಡ ಪಾಟೀಲ್ ಎಂಬುವರಿಂದ ಪರಭಾರೆ ಖರೀದಿಸಲು ಬಿ.ಎಂ. ತೆಗ್ಗೆ ಎಂಬ ಬಾಂಡ್ ರೈಟರನಿಗೆ ಆದೇಶಿಸಿದ್ದ. ಈ ಬಗ್ಗೆ ಕಮಿಷನರ್‌ಗೆ ದೂರೊಂದು ಹೋಗಿ ಬಡಪಾಯಿ ಬಾಂಡ್‌ರೈಟರ್ ತೆಗ್ಗಿಗೆ ನೋಟಿಸ್ ಜಾರಿಯಾಯಿತು. ಇದರ ತನಿಖೆಯನ್ನು ನಿಜವಾದ ಕಳ್ಳ ಸೊಗಲದನೇ ಮಾಡಬೇಕಿತ್ತು! ದುರಂತವೆಂದರೆ ಕೆಲಸ ಕಳಕೊಳ್ಳುವ ಹೆದರಿಕೆಯಲ್ಲಿದ್ದ ತೆಗ್ಗೆಯನ್ನೂ ಬೆದರಿಸಿದ ಸೊಗಲದ ಆತನಿಂದಲೂ ಕಮಾಯಿಸಿ ತಿಪ್ಪೆ ಸಾರಿಸಿದ.

ಇನ್ನು ಮುಧೋಳ ತಾಲ್ಲೂಕಿನ ಯಡಹಳ್ಳಿ ಗ್ರಾಮದ 24 ಎಕರೆ ಜಮೀನು 1982 ರಲ್ಲಿ ದಲಿತರಿಗಾಗಿ ಹಸ್ತಾಂತರವಾಗಿತ್ತು. ಈ ಜಮೀನು ಫಲವತ್ತಾಗಿರುವುದರಿಂದ ಕಾರಜೋಳನ ಕಾಕದೃಷ್ಟಿ ಅದರ ಮೇಲಿತ್ತು. ಅದಕ್ಕೂ ಹಿಂದೆ ಅನೇಕ ಖದೀಮರು ಅದನ್ನು ಕಬ್ಜಾ ಮಾಡಿಕೊಳ್ಳಲು ಹವಣಿಸಿದ್ದರು. ಆದರೆ ಈ ಸೊಗಲದ ತಹಶೀಲ್ದಾರ್ ಶಂಕರಗೌಡ ಸೋಮನಾಳನನ್ನ ಕರೆದು ಫಲಾನುಭವಿಗಳಿಗೆ ಪರಭಾರೆ ಮಾಡಿ ಅಂತ ಆದೇಶಿಸಿ ನಾಟಕವಾಡಿದ.



ಇದನ್ನರಿಯದ ದಲಿತರು ಬಲು ಆಸೆಯಿಂದ ಆ ಜಮೀನು ಹಂಚಿಕೊಂಡು ಕೃಷಿ ಕೆಲಸ ಶುರುವಿಟ್ಟರು.

ಆದರೆ ಬೆಳೆ ಕಟಾವಿಗೆ ಬಂತೆನ್ನುವಷ್ಟರಲ್ಲಿ ಈ ಭೂಮಿ ಕಾರಜೋಳನ ಚೇಲಾಗಳಾದ ಮುತ್ತಪ್ಪ ದೊನ್ನು ಹಾಗೂ ಮುತ್ತಪ್ಪ ಕುಮಾರ ಎಂಬವರ ಹೆಸರಿಗೆ ರಿಜಿಸ್ಟ್ರಾರ್ ಆಗಿತ್ತು. ಇದರ ವಿರುದ್ಧ ದನಿಯೆತ್ತಿದ ದಲಿತರಿಗೆ ಕಾರಜೋಳ ಧಮಕಿ ಹಾಕಿದ. ಈ ಸಂಬಂಧ ಈಗಲೂ RT5 ಕೇಸು ನಡೆಯುತ್ತಿದೆ. ಆದರೆ ಆ ಫಲವತ್ತಾದ ಜಮೀನನ್ನು ಕಾರಜೋಳನ ಚೇಲಾಗಳೇ ಅನುಭವಿಸುತ್ತಿದ್ದಾರೆ. ಸದ್ಯ ಉಸ್ತುವಾರಿ ಸಚಿವನೇ ಈ ಪರಿ ಕಳ್ಳನಾಗಿರುವುದರಿಂದ ಅದರ ರಕ್ಷಣೆಗೆ ಸೊಗಲದನಂಥ ಖದೀಮರ ಅವಶ್ಯಕತೆ ಇಲ್ಲದಿರುತ್ತದೆಯೇ?

ಸೊಗಲದನ ಕೈಕೆಳಗೆ ಎಂತೆಂಥಾ 'ಪವಾಡ'ಗಳು ನಡೆಯುತ್ತವೆಂಬುದಕ್ಕೆ ಜೈನಗರ ಮುಧೋಳ ಶಹರದಲ್ಲಿನ ಜಮೀನೊಂದು ಸ್ಪಷ್ಟ ಸಾಕ್ಷಿಯಂತಿದೆ. ಸರ್ವೆ ನಂ. 538/2 ರಲ್ಲಿರುವ ಈ ಸೈಟನ್ನು ಗಂಗಾಧರ ಕೊಲಕಾರ್ ಎಂಬುವವರು ಕಾನೂನು ರೀತಿಯಲ್ಲಿ ಖರೀದಿಸಿದ್ದರು. ನಂತರ ಆ ಸೈಟ್ ಆಧಾರದಲ್ಲೇ ಗ್ರಾಮೀಣ ಬ್ಯಾಂಕ್‌ನಿಂದ 75 ಸಾವಿರ ಸಾಲ ಪಡೆದಿದ್ದ. ನಂತರ ಈ ಸೈಟನ್ನು ಗಂಗಾಧರ ರಮೇಶ್ ಮ್ಯಾಗೇರಿಯೆಂಬಾತನಿಗೆ ಪರಭಾರೆ ಮಾಡಿದ್ದ. ಇದಾದ ಕೆಲದಿನಗಳಲ್ಲಿ ರಮೇಶ್ ಈ ಸೈಟಿನ ಮೇಲೆ ಅಖಂಡ ಒಂದು ಲಕ್ಷ ರೂ. ಸಾಲ ಪಡೆದು ಈ ಸೈಟನ್ನು ಪ್ರಕಾಶ್ ಮುಧೋಳ ಎಂಬಾತನಿಗೆ ಮಾರಿದ. ಈ ಹಳೇ ಸೈಟಿನ ಹೊಸಾ ಧಣಿಯೂ ಒಂದಷ್ಟು ಸಾಲ ಎತ್ತಿದ. ಗಮನೀಯ ಅಂಶವೆಂದರೆ ಮೂಲ ಮಾಲೀಕ ಗಂಗಾಧರ ಕೊಲಕರ್ ಈವರೆಗೂ ಹಕ್ಕು ಬದಲಾವಣೆಗಾಗಿ 'ಜೆ' ಫಾರ್ಮ್‌ಗೆ ಸಹಿ ಮಾಡಿಲ್ಲ!

ದುರಂತವೆಂದರೆ ಕಾರಜೋಳ ಹಾಗೂ ಆತನ ವಸೂಲಿ ಪಟಾಲಂನ ಮರ್ಜಿಗೆ ಪೊಲೀಸ್ ಇಲಾಖೆಯೂ ಬಲಿಯಾಗಿದೆ. ಈ ವಂಚಕರಿಂದ ತೊಂದರೆಗೀಡಾದ ಯಾರಾದರೂ ದೂರು ನೀಡಿದರೆ ಪೊಲೀಸರು ಕೆಟ್ಟಕೊಳಕು ಮಾತಾಡಿ ಕೆಲವೊಮ್ಮೆ ಲಾಠಿ ರುಚಿಯನ್ನೂ ತೋರಿಸುತ್ತಾರೆ!

ಬಾಗಲಕೋಟೆಯನ್ನು ಕಾರಜೋಳನ ಖದೀಮ ಪಡೆಯಿಂದ ಬಚಾವು ಮಾಡುವವರ್‍ಯಾರು?

• ಮೇಘರಾಜ್

ಸೊಗಸುಗಾರ ಸೊಗಲದ!

ಹೆಡಚಿ ಹಣ ಕೈ ಸೇರುತ್ತಲೇ ಯಾವುದೇ ಮನುಷ್ಯನಿಗೆ ಇಲ್ಲಸಲ್ಲದ ಚಟ, ಶೆವಲುಗಳೆಲ್ಲ ತಲೆ ತುಂಬಿಕೊಳ್ಳುತ್ತವೆ. ಬಕೀಟುಗಿರಿ ಮೂಲಕವೇ ಎಲ್ಲವನ್ನು ಮಾಡಿಕೊಂಡ ಸಬ್‌ರಿಜಿಸ್ಟ್ರಾರ್ ಸೊಗಲದವನೂ ಪಕ್ಕಾ ಸೊಗಸುಗಾರ!

ಮೂಲತಃ ಪಶುವೈದ್ಯನಾದ ಈತ ಸೆಗಣಿಯಲ್ಲೂ ಕಾಸು ಹುಡುಕುವ ನಿಷ್ಣಾತ. ಇಂಥವನು ಸಬ್‌ರಿಜಿಸ್ಟ್ರಾರ್ ಹುದ್ದೆಗೆ ವಕ್ಕರಿಸಿಕೊಂಡಿದ್ದು 2004 ರಲ್ಲಿ. ಇಂಥಾ ಮಾಜಿ ದನದ ಡಾಕ್ಟರು ಈಗ ಅಖಂಡ 15 ಕೋಟಿ ಮೊತ್ತದ ಆಸ್ತಿಯ ಒಡೆಯ ಎಂಬ ಸುದ್ದಿ ಇದೆ. ಗೋಕಾಕ್ ತಾಲ್ಲೂಕಿನ ಸೊಗಲದ ಕೌಜಲಗಿಯಲ್ಲಿ ಇತ್ತೀಚೆಗೆ 20 ಲಕ್ಷ ಮೌಲ್ಯದ ಮನೆ ಕಟ್ಟಿಸಿದ್ದಾನಂತೆ. 30 ಎಕರೆ ನೀರಾವರಿ ಜಮೀನಿಗೂ ಮಾಲೀಕನಾಗಿದ್ದಾನಂತೆ. ಇದಲ್ಲದೆ ಹುಬ್ಬಳ್ಳಿ-ಧಾರವಾಡದಲ್ಲಿ 12 ಸೈಟ್‌ಗಳನ್ನು ಖರೀದಿಸಿದ್ದಾನಂತೆ.

ಭ್ರಷ್ಟರ ಬೇಟೆಗೆ ನಿಂತಿರುವ ಲೋಕಾಯುಕ್ತರು ಇತ್ತ ಗಮನಹರಿಸಿದರೆ ಒಳಿತು.

ಶಿವಮೊಗ್ಗ ಯುವರಾಜನ ಹೆಣ್ಣಿನ ಬೇಟೆ!

ಕೆಳಹಂತದ ಮಹಿಳಾ ಪೊಲೀಸ್ ಒಬ್ಬರು "ನಾನಂತವಳಲ್ಲ, ನನ್ನ ಬಿಟ್‌ಬಿಡಿ" ಎಂದು ಗೋಗರೆಯುತ್ತಾರೆ!

ಇನ್ನೊಬ್ಬ ಮಹಿಳೆ.... ಆಕೆಯೂ ಪೊಲೀಸ್, ಅಧಿಕಾರಿ ಲೆವೆಲ್‌ನವರು. "ಯಾಕೆ ಬಾಯಿಗೆ ಬಂದಂಗೆ ಮಾತಾಡ್ತೀರಿ, ನಾನಿದನ್ನ ಸಹಿಸಲ್ಲ ಹುಷಾರ್!" ಎಂದು ಘರ್ಜಿಸುತ್ತಾರೆ!!

ಶಿವಮೊಗ್ಗೆಯ ಉದಯೋನ್ಮುಖ ರಾಜಕಾರಣಿಯೊಬ್ಬನ ಹೆಂಗಸರ ಬೇಟೆಯ ಸೈಡ್ ರೀಲ್‌ಗಳಿವು.

ಅಪ್ಪ ಅನಿಸಿಕೊಂಡವನ ಕೈಲಿ ದೊಡ್ಡ ಮಟ್ಟದ ಅಧಿಕಾರವಿದೆ. ಜೊತೆಗೆ ಹೆಂಗಸರೂ ಅಂಟಿಕೊಂಡಿರುತ್ತಾರೆ. ಅಪ್ಪನ ಕೈಲಿದ್ದ ಅಧಿಕಾರ, ಆ ಮೂಲಕ ದೋಚಿಕೊಂಡ ಹಣದ ಮೂಲಕ ಮಗನೂ ಎಲೆಕ್ಷನ್ ಗೆದ್ದ. ಕಳ್ಳತನವನ್ನೇ ಫುಲ್‌ಟೈಂ ಕೆಲಸ ಮಾಡಿಕೊಂಡ ಈ ಯಾವ ರಾಜಕಾರಣಿ ಊರು ತುಂಬಾ ಕಣ್ಣಿಗೆ ಬಿದ್ದ ಜಾಗವನ್ನೆಲ್ಲಾ ಖರೀದಿಸಿದ. ಇಷ್ಟಬಂದಲ್ಲೆಲ್ಲಾ ಬಿಲ್ಡಿಂಗ್ ಎಬ್ಬಿಸಿದ. ಜೊತೆಗೆ ಪುಂಡರ ಪಟಾಲಂ ಒಂದನ್ನು ಜೊತೆಗಿರಿಸಿಕೊಂಡ. ಆಮೇಲೆ ಈ ಪುಣ್ಯಾತ್ಮನಿಗೆ ಹೆಂಗಸರನ್ನು ಖರೀದಿಸುವ ಚಪಲ ಶುರುವಾಯಿತು. ಇವನೊಮ್ಮೆ ಶಿವಮೊಗ್ಗೆಯ ಐಬಿಯಲ್ಲಿ ಬಂದಿಳಿದಾಗ ಸೆಕ್ಯುರಿಟಿಗೆಂದು ಪೊಲೀಸರು ಬಂದರು. ಆ ಗುಂಪಿನಲ್ಲಿ ಚಿಕ್ಕ ವಯಸ್ಸಿನ ಮಹಿಳಾ ಪೊಲೀಸ್ ಒಬ್ಬರಿದ್ದರು. ನೋಡಲು ಆಕರ್ಷಕವಾಗಿದ್ದ ಆಕೆಯನ್ನು ಗಮನಿಸಿದ ಯುವ ನಾಯಕನಿಗೆ ಮರುಳಾಗಿದೆ: ಹೀಗೆ ಮೈತುಂಬಾ ಸೌಂದರ್ಯ ತುಂಬಿಕೊಂಡಿರುವಾಕೆ ಜುಜುಬಿ ಪೊಲೀಸ್ ಆಗಿ ಜೀವನ ಕಳೆಯಬೇಕಲ್ಲ ಎಂದು ಕೊರಗಿದ ಯುವ ರಾಜಕುಮಾರ ತಾನು ಶಿವಮೊಗ್ಗೆಗೆ ಹೋದಾಗಲೆಲ್ಲ ಆಕೆಯೂ ತನ್ನ ಕಣ್ಣಿಗೆ ಬೀಳುವಂತೆ ಡ್ಯೂಟಿಗೆ ನಿಯೋಜಿಸಿಕೊಳ್ಳುತ್ತಿದ್ದ. ಕೊನೆಗೊಮ್ಮೆ ಆಕೆಗೆ 'ಭಾಗ್ಯಲಕ್ಷ್ಮಿ' ಯೋಜನೆಯ ಸವಲತ್ತು ಕೊಡಿಸಲೇಬೇಕೆಂದು ತೀರ್ಮಾನಿಸಿ ಕರೆಸಿಕೊಂಡ.

"ನೀನು ಎಷ್ಟು ದಿನಾಂತ ಪೊಲೀಸ್ ಆಗಿರ್ತೀಯಾ, ನನ್ನ ಜೊತೆ ಬೆಂಗಳೂರಿಗೆ ಬಾ, ಅಲ್ಲಿ ನಿನಗೇನು ಬೇಕೊ ಎಲ್ಲ ಅನುಕೂಲ ಮಾಡಿಕೊಡ್ತೀನಿ" ಅಂದಿದ್ದಾನೆ.


ತಕ್ಷಣ ಆಕೆಗೆ ಈ ದುರುಳನ ಮಾತಿನ ಮರ್ಮ ಅರ್ಥವಾಗಿ ಹೋಗಿದೆ. ತನ್ನನ್ನು ತಿಂದು ಬಿಸಾಡುವ ಭಾಗ್ಯಲಕ್ಷ್ಮಿ ಸ್ಕೀಮು ಆಕೆಗೆ ಬೇಡವಾಗಿತ್ತು, ಹಾಗಾಗಿ "ನಾನಂತವಳಲ್ಲ, ನನ್ನ ಬಿಟ್‌ಬಿಡಿ, ನನಗೆ ಈಗ ಇರೋದೇ ಸಾಕು" ಅಂತ ಗೋಗರೆದು ಪಾರಾಗಿದ್ದಾಳೆ.

ಇದಾದ ಕೆಲದಿನಗಳಲ್ಲೇ ಯುವ ರಾಜಕುಮಾರ ಮರಳಿ ಯತ್ನವ ಮಾಡು ಎನ್ನುವಂತೆ ಇನ್ನೊಬ್ಬ ಮಹಿಳೆಯತ್ತ ತನ್ನ ಕಾಗೆ ಕಣ್ಣು ಹಾಕಿದ. ಆಕೆ ಅಧಿಕಾರಿಯಾಗಿದ್ದವರು. ಯುವ ರಾಜಕುಮಾರ ಒಂದು ಹೆಜ್ಜೆ ಮುಂದೆ ಬಂದ ತಕ್ಷಣ ತಾನೇ ನಾಲ್ಕು ಹೆಜ್ಜೆ ಮುಂದೆ ನುಗ್ಗಿ "ಒಳ್ಳೆಯವರ ಮಕ್ಕಳಿಗೂ ಕಳ್‌ನನ್ ಮಕ್ಕಳಿಗೂ ವ್ಯತ್ಯಾಸ ಗೊತ್ತಿದ್ದಾಕೆ. ಒದೆ ಬೀಳುತ್ತೆ ಹುಷಾರ್!" ಎಂದಿದ್ದಾರೆ.

ಇದರಿಂದ ಹೆದರಿದ ಯುವ ರಾಜ ಈಗ ಶಿವಮೊಗ್ಗೆಯಲ್ಲಿ ತನ್ನ ಹೆಣ್ಣಿನ ಶಿಕಾರಿಗೆ ಬಿಡುವು ಕೊಟ್ಟಿದ್ದಾನೆ.

ಈ ದಿಟ್ಟ ಮಹಿಳೆಯರಲ್ಲಿ ಯಾರಾದರೊಬ್ಬರು ಆ ಲೋಫರ್‌ನ ಕಪಾಳಕ್ಕೆರಡು ಬಾರಿಸಿದ್ದಿದ್ದರೆ ಅವನ್ಯಾರೆಂದು ಇಷ್ಟು ಹೊತ್ತಿಗೆ ಜಗಜ್ಜಾಹೀರಾಗಿರುತ್ತಿತ್ತು.

ಪ್ರಶಸ್ತಿಗಳನ್ನು 'ಹಂಚಿದ' ಭಾರ್ಗವ ಸಮಿತಿ



ಹಿರಿಯ ನಿರ್ದೇಶಕ ಭಾರ್ಗವ ನೇತೃತ್ವದ ಪ್ರಶಸ್ತಿ 'ಹಂಚಿಕಾ' ಸಮಿತಿಯು 2008-09ರ ಚಲನಚಿತ್ರ ಪ್ರಶಸ್ತಿಗಳನ್ನು ಉದ್ಯಮದವರಿಗೆ ಸೂಕ್ತವಾಗಿ 'ಹಂಚಿದೆ'. ಆದರೆ ವಾಸ್ತವವಾಗಿ ಈ ಸಮಿತಿಗೆ ಪ್ರಶಸ್ತಿಗಳಿಗೆ ಸೂಕ್ತವಾದ ಚಿತ್ರಗಳನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ನೀಡಲಾಗಿತ್ತು ತಮ್ಮ ಮೇಲಿನ ಜವಾಬ್ದಾರಿಯನ್ನು ಅರಿಯದ ಈ ಸಮಿತಿಯು ಅದರ ಬದಲಿಗೆ 'ಹಂಚಿಕೆ'ಯ ಕೆಲಸವನ್ನು ಮಾಡಿ ಮುಗಿಸಿದೆ.


ಸ್ವಜನಪಕ್ಷಪಾತ, ಅಯೋಗ್ಯರಿಗೆ ಪ್ರಶಸ್ತಿ ಹಂಚಿಕೆ ತರಹದ ನಿರ್ಧಾರಗಳಲ್ಲದೆ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿಗೆ ತಾನೇ ಆಯ್ಕೆ ಮಾಡಿದ್ದ ಕೆ.ಎಸ್.ಆರ್.ದಾಸ್ ಅವರ ಹೆಸರನ್ನು ಪತ್ರಿಕಾಗೋಷ್ಠಿಯಲ್ಲೇ ಕೈಬಿಟ್ಟು ಗಿರೀಶ್ ಕಾರ್ನಾಡರಿಗೆ ಆ ಪ್ರಶಸ್ತಿಯನ್ನು ಘೋಷಿಸಿದ ಈ ಸಮಿತಿ ಒಂದು ಹೊಸ 'ಇತಿಹಾಸ'ವನ್ನು ಸೃಷ್ಟಿಸಿದೆ. ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರನ್ನು ಸಂತೋಷಗೊಳಿಸಲು ಪ್ರಶಸ್ತಿಗಳು ಇತ್ಯರ್ಥವಾಗುವುದಾದರೆ ಇನ್ನುಮುಂದೆ ಆಯ್ಕೆ ಸಮಿತಿಯ ಅಗತ್ಯವಾದರೂ ಏನಿದೆ?



ಈ ಬಾರಿ ಸುಮಾರು 75ಕ್ಕೂ ಹೆಚ್ಚು ಚಲನಚಿತ್ರಗಳು ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿದ್ದವು. ಆದರೆ ಪ್ರತಿ ವರ್ಷ ರಾಜ್ಯ ಸರ್ಕಾರ ನೀಡುವುದು ಕೇವಲ 28 ಪ್ರಶಸ್ತಿಗಳನ್ನು ಮಾತ್ರ. ಆದ್ದರಿಂದ ಭಾರ್ಗವ ನೇತೃತ್ವದ ಸಮಿತಿ ತನ್ನೆಲ್ಲಾ ಜಾಣ್ಮೆಯನ್ನು ಪ್ರದರ್ಶಿಸಿ ಸುಮಾರು 22 ಚಿತ್ರಗಳಿಗೆ ಪ್ರಶಸ್ತಿಗಳನ್ನು ಹಂಚುವ ಮುಖಾಂತರ 'ದಾಖಲೆ' ನಿರ್ಮಿಸಿದೆ.

ಈ ಹಿಂದೆ ಗರಿಷ್ಠವೆಂದರೂ ನಾಲ್ಕೈದು ಸಿನಿಮಾಗಳು ಒಂದಕ್ಕಿಂತ ಹೆಚ್ಚು ಪ್ರಶಸ್ತಿಗಳನ್ನು ಬಾಚಿಕೊಳ್ಳುತ್ತಿದ್ದವು. ಅದರಲ್ಲೂ ಮೊದಲ, ಎರಡನೇ ಮತ್ತು ಮೂರನೇ ಅತ್ಯುತ್ತಮ ಚಿತ್ರಗಳು ಎಂದು ನಿರ್ಧರಿಸಲ್ಪಟ್ಟ ಸಿನಿಮಾಗಳು ಹೆಚ್ಚು ಸಂಖ್ಯೆಯಲ್ಲಿ ಪ್ರಶಸ್ತಿಗಳನ್ನು ಪಡೆಯುತ್ತಿದ್ದವು.

ಆದರೆ ಈ ಬಾರಿ ಅತ್ಯುತ್ತಮ ಪ್ರಶಸ್ತಿ ಪಡೆದ 'ಕಬಡ್ಡಿ' ಚಿತ್ರಕ್ಕೆ ಸಿಕ್ಕಿದ್ದು ಒಂದೇ ಒಂದು ಎಕ್ಸ್‌ಟ್ರಾ ಪ್ರಶಸ್ತಿ, ಅದನ್ನು ಹೂ. ಪಟ್ಟಣಶೆಟ್ಟಿ ಮತ್ತು ನರೇಂದ್ರಬಾಬು ನಡುವೆ 'ಅತ್ಯುತ್ತಮ ಸಂಭಾಷಣೆ' ಬರೆದದ್ದಕ್ಕೆ ಜಂಟಿಯಾಗಿ ಹಂಚಲಾಗಿದೆ. ವಾಸ್ತವವಾಗಿ ಅತ್ಯುತ್ತಮ ಪ್ರಶಸ್ತಿ ಪಡೆದ ಚಿತ್ರಕ್ಕೆ ಕಥೆ ಅಥವಾ ಚಿತ್ರಕಥೆಗೂ ಪ್ರಶಸ್ತಿ ದೊರೆಯಲೇಬೇಕು. ಆದರೆ ಆಯ್ಕೆ ಸಮಿತಿ ಇದ್ಯಾವುದನ್ನೂ ಪರಿಗಣಿಸದೇ ಕೇವಲ ಸಂಭಾಷಣೆ ಚೆನ್ನಾಗಿದೆ ಎಂಬ ಕಾರಣಕ್ಕೆ ಈ ಚಿತ್ರಕ್ಕೆ ಮೊದಲ ಅತ್ಯುತ್ತಮ ಪ್ರಶಸ್ತಿ ನೀಡಿದಂತಿದೆ.






ದ್ವಿತೀಯ ಅತ್ಯುತ್ತಮ ಪ್ರಶಸ್ತಿ ಪಡೆದ 'ಜೋಶ್' ಚಿತ್ರದ ವ್ಯಥೆ ಇನ್ನೊಂದು ರೀತಿಯದ್ದು. ಅದೇನೆಂದರೆ ಈ ಚಿತ್ರದ ನಿರ್ದೇಶಕ ಶಿವಮಣಿ ಈ ಸೆಕೆಂಡ್ ಪ್ರೈಜ್‌ಗಷ್ಟೇ ಸಮಾಧಾನ ಪಡಬೇಕಾಗಿದೆ. ಏಕೆಂದರೆ ಇದರ ಹೊರತಾಗಿ ಈ ಚಿತ್ರಕ್ಕೆ ಮತ್ತೊಂದು ಪ್ರಶಸ್ತಿ ಸಿಕ್ಕಿಲ್ಲ. ಶಿವಮಣಿ ಅವರ ಗಾಯದ ಮೇಲೆ ಬರೆ ಎಳೆದಂತೆ ಮೊದಲ ಮೂರು ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನೇ ಪಡೆಯದ 'ನೀನ್ಯಾರೇ' ಮತ್ತು 'ಜಂಗ್ಲಿ' ಚಿತ್ರಗಳು ತಲಾ ಎರಡೆರಡು ಪ್ರಶಸ್ತಿಗಳನ್ನು ಬಾಚಿಕೊಂಡಿವೆ.


ಇನ್ನು ತೃತೀಯ ಪ್ರಶಸ್ತಿ ಪಡೆದ 'ಶಂಕರ ಪುಣ್ಯಕೋಟಿ' ಚಿತ್ರಕ್ಕೆ ಒಂದು ಎಕ್ಸ್‌ಟ್ರಾ ಪ್ರಶಸ್ತಿ ದೊರೆತಿದೆ. ಅದು ದೊರೆತಿರುವುದು ಅತ್ಯುತ್ತಮ ಕಂಠದಾನ ಮಾಡಿದ ಕಲಾವಿದೆ ಆಶಾಗೆ. ಇದಕ್ಕೆಲ್ಲ ಕಾರಣ ಭಾರ್ಗವ ನೇತೃತ್ವದ ಆಯ್ಕೆ ಸಮಿತಿಯ 'ಪ್ರಶಸ್ತಿ ಹಂಚುವ' ಸಿದ್ಧಾಂತ.

ಎಂದಿನಂತೆ 'ವಿಶೇಷ ಸಾಮಾಜಿಕ ಪರಿಣಾಮ ಬೀರುವ ಚಿತ್ರ ಪ್ರಶಸ್ತಿ'ಯನ್ನು ಈ ಬಾರಿ ಬಹಳಷ್ಟು ಜನ ನೋಡಿ ಅದರಿಂದ ಪ್ರಭಾವಿತರಾಗದ ಚಿತ್ರವಾದ 'ಮುಖಪುಟ'ಕ್ಕೆ ಸಮಿತಿ ನೀಡಿದೆ. ಹಾಗಂತ ಈ ಚಿತ್ರ ಬಿಡುಗಡೆಯೇ ಆಗಿಲ್ಲ ಎಂದಲ್ಲ, ಬೆಂಕಿಪೊಟ್ಟಣ ದಷ್ಟಿರುವ 'ಕೈಲಾಸ್' ಚಿತ್ರ ಮಂದಿರದಲ್ಲಿ ಈ ಚಿತ್ರ ತೆರೆ ಕಂಡಿದ್ದು ಬಿಟ್ಟರೆ ಪ್ರದರ್ಶನಗೊಂಡ ಉದಾಹರಣೆ ಇಲ್ಲ. ಅಂದರೆ ಇದನ್ನು ಬೆರಳೆಣಿಕೆಯಷ್ಟು ಜನ ಮಾತ್ರ ನೋಡಿದ್ದಾರೆ. ಜನರು ಈ ಚಿತ್ರವನ್ನು ನೋಡೇ ಇಲ್ಲ ಎಂದಮೇಲೆ ಅದು ಹೇಗೆ ಸಮಾಜದ ಮೇಲೆ ಪರಿಣಾಮ ಬೀರುತ್ತದೋ ಸಮಿತಿಯವರೇ ಹೇಳಬೇಕು.

ಅತ್ಯುತ್ತಮ ನಟ ಪ್ರಶಸ್ತಿಯನ್ನು ಈ ಬಾರಿ ಯಾರಿಗೆ ಕೊಡಬೇಕು ಎಂಬ ವಿಷಯದಲ್ಲಿ ಮೊದಲಿಗೆ ಸಮಿತಿಯ ಎಲ್ಲರೂ ಓಟು ಕೊಟ್ಟಿದ್ದು 'ಮುಸ್ಸಂಜೆ ಮಾತು' ಚಿತ್ರದಲ್ಲಿನ ನಟನೆಗಾಗಿ ಸುದೀಪ್‌ಗೆ. ಆದರೆ ಕೊನೆಗಳಿಗೆಯಲ್ಲಿ ಆ ಪ್ರಶಸ್ತಿ ಸುದೀಪ್‌ರ ಕೈಯಿಂದ ಹೇಗೆ ತಪ್ಪಿಹೋಯಿತು ಗೊತ್ತಾ? "ಈ ಹುಡುಗನಿಗೆ ಹಿಂದೆ ರಾಜ್ಯ ಪ್ರಶಸ್ತಿ ದೊರೆತಿದೆ. ಅದಕ್ಕಾಗಿ ಈ ಬಾರಿ ಆತನಿಗೆ ಬೇಡ, ಹೊಸ ಹುಡುಗ ಯೋಗೇಶ್‌ಗೆ ಕೊಡೋಣ" ಎಂದು ಒಬ್ಬ ಸದಸ್ಯ ಸಲಹೆ ನೀಡಿದ್ದೇ ತಡ ಎಲ್ಲರೂ ಅದಕ್ಕೆ ತಲೆಯಾಡಿಸಿದರು. ಅಂದರೆ ರಾಜ್ಯ ಪ್ರಶಸ್ತಿ ಒಮ್ಮೆ ಸಿಕ್ಕಿದವರಿಗೆ ಮತ್ತೊಮ್ಮೆ ಸಿಗಬಾರದೇ? ಅಥವಾ ಪ್ರಶಸ್ತಿಗಳ ಉದ್ದೇಶ ಹೊಸ ಹುಡುಗರನ್ನು ಪ್ರೋತ್ಸಾಹಿಸುವುದೇ? ಈ ಪ್ರಶ್ನೆಗಳಿಗೆ ಸಮಿತಿಯ ಅಧ್ಯಕ್ಷ ಭಾರ್ಗವ ಉತ್ತರಗಳನ್ನು ಕೊಡಬೇಕಾಗಿದೆ.



ಅತ್ಯುತ್ತಮ ನಟಿ ಆಯ್ಕೆ ವಿಷಯದಲ್ಲಿ ನೇರವಾದ ಹಣಾಹಣಿ ಇದ್ದದ್ದು ಹೊಸ ಹುಡುಗಿ ರಾಧಿಕಾ ಪಂಡಿತ್ ಮತ್ತು ರಮ್ಯಾ ನಡುವೆ. ಈಗಾಗಲೇ ತನ್ನ ಚೊಚ್ಚಲ 'ಮೊಗ್ಗಿನ ಮನಸ್ಸು' ಚಿತ್ರದಲ್ಲಿನ ನಟನೆಗೆ ಎರಡು ಫಿಲ್ಮ್‌ಫೇರ್ ಪ್ರಶಸ್ತಿಗಳನ್ನು ಪಡೆದಿರುವ ರಾಧಿಕಾ ಪಂಡಿತ್ ಈಗ ರಾಜ್ಯದಿಂದ ಅತ್ಯುತ್ತಮ ನಟಿ ಪ್ರಶಸ್ತಿಯನ್ನೂ ಪಡೆದುಕೊಂಡಿದ್ದಾಳೆ. ಹಾಗೆ ನೋಡಿದರೆ 'ಮುಸ್ಸಂಜೆ ಮಾತು' ಚಿತ್ರದಲ್ಲಿ ಮನೋಜ್ಞವಾದ ನಟನೆ ನೀಡಿದ್ದ ರಮ್ಯಾಳಿಗೆ ಪ್ರಶಸ್ತಿ ಮಿಸ್ಸಾಗಲು ಮುಖ್ಯ ಕಾರಣ ಆಕೆಯ ಪಾತ್ರಕ್ಕೆ ಕಂಠದಾನ ಮಾಡದಿರುವುದು.



ಪ್ರಾದೇಶಿಕ ಭಾಷಾ ಚಿತ್ರಗಳಲ್ಲಿ ಶಿವಧ್ವಜ್ ನಿರ್ದೇಶನದ 'ಗಗ್ಗರ' ಎಂಬ ತುಳು ಚಿತ್ರ ರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಪ್ರಶಸ್ತಿ ಪಡೆದ ಹಿರಿಮೆಯನ್ನು ಹೊಂದಿದೆ. ಆದರೆ ಭಾರ್ಗವ ನೇತೃತ್ವದ ರಾಜ್ಯ ಸಮಿತಿಗೆ ಈ ಚಿತ್ರ ನಾಲಾಯಕ್ ಎಂದೆನಿಸಿರುವುದು ಆಚ್ಚರಿ ಮೂಡಿಸುತ್ತದೆ. "'ಗಗ್ಗರ' ಚಿತ್ರಕ್ಕೆ ಹೇಗೂ ರಾಷ್ಟ್ರ ಪ್ರಶಸ್ತಿ ದೊರಕಿ[...] ಅದಕ್ಕೆ, ಅದರ ಬದಲಿಗೆ ಕೊಡವ ಭಾಷೆಯ 'ಪೋ[...] ಮನಸ್' ಚಿತ್ರಕ್ಕೆ ಮತ್ತು ಲಂಬಾಣಿ ಭಾಷೆಯ 'ಪೋ[...] ಚಿತ್ರಕ್ಕೆ ಪ್ರಶಸ್ತಿಗಳನ್ನು ನೀಡಿದರೆ ಚೆನ್ನ" ಎಂಬ ಅರ್ಥಹೀ[...] ನಿರ್ಧಾರಕ್ಕೆ ಬಂದಿದೆ ಭಾರ್ಗವ ಸಮಿತಿ. ಆದರೆ 'ಗಗ್[...] ಚಿತ್ರ ತಂಡಕ್ಕೆ ಬೇಸರವಾಗಬಾರದು ಎಂದು ಆ ಚಿತ್ರದ[...] ನಟಿಸಿರುವ ಎಂ.ಕೆ.ಮಠರ ಅವರಿಗೆ ಅತ್ಯುತ್ತಮ ಪೋಷ[...] ನಟ ಪ್ರಶಸ್ತಿಯನ್ನು ಸಮಿತಿ ದಯಪಾಲಿಸಿದೆ. ಬರಗೂ[...] ರಾಮಚಂದ್ರಪ್ಪ ನಿರ್ದೇಶನದ ಚಿತ್ರ 'ಉಗ್ರಗಾಮಿ' ಮೊದ[...] ಮೂರು ಪ್ರಶಸ್ತಿಗಳಲ್ಲಿ ಯಾವುದಾದರೊಂದನ್ನು ಗೆಲ್ಲಬಹುದ[...] ಎಂಬ ನಿರೀಕ್ಷೆಯಿತ್ತು. "ಬರಗೂರು ರಾಮಚಂದ್ರಪ್ಪ ಅವರ[...] ಪ್ರಶಸ್ತಿ ನೀಡದಿದ್ದರೆ ಅವರು ಕೋರ್ಟ್‌ನಲ್ಲಿ ಕೇಸ್ ಹಾಕ[...] ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಸುತ್ತಾರೆ" ಎಂದು ಆ[...] ಸಮಿತಿಯಲ್ಲಿದ್ದ ಒಬ್ಬ ಮಹಾನುಭಾವ ಹೇಳಿದ್ದೇ ತ[...] ಎಲ್ಲರೂ ಬರಗೂರರಿಗೆ ಅತ್ಯುತ್ತಮ ಕಥೆ ಪ್ರಶಸ್ತಿ ನೀಡ[...] ನಿರ್ಧರಿಸಿದ್ದಾರೆ.

ಅತ್ಯುತ್ತಮ ಮಕ್ಕಳ ಚಿತ್ರ ಆಯ್ಕೆಯಲ್ಲೂ ಭಾರ್ಗ[...] ಯಾಕೋ ಮಕ್ಕಳಾಟವಾಡಿದ್ದಾರೆ. ಈ ಪ್ರಶಸ್ತಿಗೆ ಅತಿ ಹೆ[...] ಲಾಬಿ ನಡೆಯುತ್ತದೆ. ಇದಕ್ಕೆ ಕಾರಣ: ಅತ್ಯುತ್ತಮ ಮಕ್[...] ಚಿತ್ರ ಪ್ರಶಸ್ತಿ ಪಡೆದ ಸಿನಿಮಾಗೆ ರಾಜ್ಯ ಸರ್ಕಾರ 25 ಲ[...] ರೂ. ಸಬ್ಸಿಡಿಯನ್ನು ಘೋಷಿಸಿರುವುದು. ಈ ವಿಭಾಗದ[...] ಈ ಬಾರಿ ಕೂಡ್ಲು ರಾಮಕೃಷ್ಣ, ರಾಮದಾಸನಾಯ[...] ಭಾರತಿ ಶಂಕರ್ ಹಾಗೂ ಶಿವರಾಜು ಅವರ ನಾ[...] ಚಿತ್ರಗಳು ಕಣದಲ್ಲಿದ್ದವು. ಈ ನಾಲ್ವರಲ್ಲಿ ಕೊನೆಗೂ ಗೆದ್ದ[...] ಶಿವರಾಜು ನಿರ್ದೇಶನದ 'ಚೈತನ್ಯ' ಚಿತ್ರ. ಅಲ್ಲಿಗೆ ಮೂವ[...] ನಿರ್ಮಾಪಕರ ಕಥೆ ಗೋವಿಂದಾ.....

ಪ್ರತಿ ಬಾರಿಯೂ ರಾ[...] ಪ್ರಶಸ್ತಿ ಆಯ್ಕೆ ಸಮಿತಿಗಳು [...] ತರಹದ ಗೊಂದಲ ಮ[...] ವಿವಾದಕ್ಕೆ ಈಡಾಗುವುದ[...] ಮುಖ್ಯ ಕಾರಣ ಈ ಪ್ರಶಸ್ತಿಗಳಿ[...] ಸರ್ಕಾರ ಸ್ಪಷ್ಟವಾದ ನೀತಿ ಮತ್[...] ಮಾನದಂಡಗಳನ್ನು ರೂಪಿಸದ[...] ಇರುವುದು. ಉದಾಹರಣೆಗೆ, [...] ಹಿಂದೆ ಪ್ರಶಸ್ತಿ ಪಡೆದವರ[...] ಮತ್ತೊಮ್ಮೆ ಪ್ರಶಸ್ತಿ ಪಡೆಯಬಾ[...]ದೆಂಬ ನೀತಿಯಂತೂ ಇಲ್ಲವೇ ಇಲ್ಲ. ಹಾಗೆಯೇ ರಾ[...] ಪ್ರಶಸ್ತಿ ಪಡೆದವರಿಗೆ ರಾಜ್ಯ ಪ್ರಶಸ್ತಿ ನೀಡಬಾರದೆಂಬ ರೂಲ[...] ಇಲ್ಲ. ಅದೇ ರೀತಿ, ಹೊಸಬರನ್ನು ಪ್ರೋತ್ಸಾಹಿಸಲ[...] ಪ್ರಶಸ್ತಿಗಳನ್ನು ನೀಡಬೇಕೆಂಬ ಅಂಶ ಕೂಡಾ ಎಲ್ಲೂ ಇ[...] ಆದರೂ ಇದೆಲ್ಲವನ್ನು ಆಯ್ಕೆ ಸಮಿತಿಯವರು ತವ[...] ಮೂಗಿನ ನೇರಕ್ಕೆ ಮಾಡಿಕೊಳ್ಳುವ ಅನುಕೂಲ ಶಾಸ್ತ್ರಗಳ[...] ಇಂತಹ ಅನುಕೂಲ ಶಾಸ್ತ್ರ ಮತ್ತು ಸಮರ್ಥನೆಗಳಿಂದಾಗಿಯ[...] ಅರ್ಹರು ಪ್ರಶಸ್ತಿ ವಂಚಿತರಾಗಿ, ಅನರ್ಹರು ಪ್ರಶಸ್ತಿಗಳನ[...] ಪಡೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಪ್ರಶಸ್ತಿಗಳು ತವ[...] ಮೌಲ್ಯವನ್ನು ಕಳೆದುಕೊಳ್ಳುತ್ತಿವೆ.

ಈ ಕಾರಣಕ್ಕಾಗಿ ಆಯ್ಕೆ ಸಮಿತಿಯನ್ನು ದೂರುವ ಬದಲ[...] ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಸ್ಪಷ್ಟವಾ[...] ರೀತಿ-ನೀತಿ-ನಿಯಮಗಳನ್ನು ರೂಪಿಸಿ ಇನ್ನು ಮುಂದೆ ಇಂತ[...] ಗೊಂದಲಗಳು ಸೃಷ್ಟಿಯಾಗದಂತೆ ನೋಡಿಕೊಳ್ಳಬೇಕಿದೆ.

● ಶ್ರೇಣಿ[...]

ಡಬ್ಬಿಂಗ್ ವೀರರಿಗೆ ಜೀವಮಾನ ಸಾಧನೆ ಪ್ರಶಸ್ತಿ!



ವಿಷ್ಣುವರ್ಧನ್ ಪ್ರಶಸ್ತಿಯನ್ನು ಇದೇ ಮೊದಲ ಬಾರಿಗೆ ಆಯ್ಕೆ ಸಮಿತಿ ಇಬ್ಬರಿಗೆ ಹಂಚಿದೆ. ಹಾಗೆ ನೋಡಿದರೆ ಈ ಪ್ರಶಸ್ತಿ ಜೀವಮಾನ ಸಾಧನೆಗಾಗಿ ನೀಡುವಂತಹದ್ದು. ಆದ್ದರಿಂದ ಈ ಪ್ರಶಸ್ತಿಯನ್ನು ಈ ಬಾರಿ ಒಬ್ಬರಿಗೆ ನೀಡಿ ಇನ್ನೊಬ್ಬರಿಗೆ ಮುಂದಿನ ಬಾರಿ ನೀಡಬಹುದಿತ್ತು. ಆದರೆ ಹಾಗೆ ಮಾಡುವ ಬದಲಿಗೆ ಈ ಪ್ರಶಸ್ತಿಯನ್ನು ಇಬ್ಬರಿಗೆ ಹಂಚಿ, ತನ್ನ ಹಂಚುವ ಮನೋವೃತ್ತಿಯನ್ನು ಇಲ್ಲೂ ಕೂಡಾ ಭಾರ್ಗವ ನೇತೃತ್ವದ ಆಯ್ಕೆ ಸಮಿತಿ ತೋರಿಸಿದೆ.

ಇದರ ಹಿಂದೆ ಒಂದು ಬಲವಾದ ಕಾರಣವೂ ಇದೆ. ಅದೇನೆಂದರೆ ಈ ಬಾರಿ ಏನೇ ಆದರೂ ವಿಷ್ಣುವರ್ಧನ್ ಪ್ರಶಸ್ತಿಯನ್ನು ಈ ಬಾರಿ ಅಜಂತಾ ಸಂಸ್ಥೆಯ ಅಜಂತಾ ರಾಜು ಅವರಿಗೆ ನೀಡಲೇ ಬೇಕು ಎಂದು ಆಯ್ಕೆ ಸಮಿತಿಯ ಸದಸ್ಯರಲ್ಲೊಬ್ಬರಾದ ಮಾರುತಿ ಹಠ ಹಿಡಿದು ಕುಳಿತರಂತೆ.

ಅಂದಹಾಗೆ, ಮಾರುತಿ ಮತ್ತು ಅಜಂತಾ ರಾಜು ಸ್ನೇಹಿತರು ಮಾತ್ರವಲ್ಲ ಇವರಿಬ್ಬರು ಪಾಲುದಾರಿಕೆಯಲ್ಲಿ ಸಿನಿಮಾವನ್ನು ಕೂಡಾ ನಿರ್ಮಿಸಿರುವವರು. ಅದರಲ್ಲೂ ಇತ್ತೀಚೆಗೆ ಮಾರುತಿ, ಅಜಂತಾ ರಾಜು ಮತ್ತು ಕೆ.ಸಿ.ಎನ್.ಚಂದ್ರಶೇಖರ್ ಪಾಲುದಾರಿಕೆಯಲ್ಲಿ ನಿರ್ಮಿಸಿದ 'ಶ್ವೇತನಾಗ' ಎಂಬ ಚಿತ್ರ ಡಬ್ಬಿಂಗ್ ಮಾಡಿದ ಚಿತ್ರವೆಂದು ಸಾಬೀತಾಗಿ ಉದ್ಯಮದಲ್ಲಿ ದೊಡ್ಡ ರಾದ್ಧಾಂತಕ್ಕೆ ಕಾರಣವಾಗಿತ್ತು. ಆದರೀಗ ಇಂತಹ ಡಬ್ಬಿಂಗ್ ವೀರರಿಗೇ ಭಾರ್ಗವ ಸಮಿತಿ 'ಜೀವಮಾನ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಿದೆ. ಅಷ್ಟೇ ಅಲ್ಲದೆ, ಈ ಡಬ್ಬಿಂಗ್ ವೀರರೊಂದಿಗೆ ಆರ್.ಎನ್.ಕೆ.ಪ್ರಸಾದ್‌ರಂತಹ ದೊಡ್ಡ ವ್ಯಕ್ತಿ ಈ ಪ್ರಶಸ್ತಿಯನ್ನು ಹಂಚಿಕೊಳ್ಳಬೇಕಾಗಿ ಬಂದಿದೆ.

ಇದೆಂತಹ ದುರಂತ ನೋಡಿ!

ಎಲ್ಲರಿಗೂ ಅವಮಾನ



ಪತ್ರಕರ್ತರ ಪ್ರಶ್ನೆಗಳನ್ನು ನಿಭಾಯಿಸುವಲ್ಲಿ ವಿಫಲರಾದ ಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಭಾರ್ಗವ ಅವರಿಂದಾಗಿ ಒಂದು ಅನಗತ್ಯ ವಿವಾದ ಹುಟ್ಟಿಕೊಂಡಿತು.

ಮೊದಲು ಪ್ರಶಸ್ತಿ ಆಯ್ಕೆ ಸಮಿತಿ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಗೆ ನಿರ್ಮಾಪಕ ಕಂ ನಿರ್ದೇಶಕ ಕೆ.ಎಸ್.ಆರ್. ದಾಸ್‌ರನ್ನು ಆಯ್ಕೆ ಮಾಡಿತ್ತು, ದಾಸ್ ಅವರ ಜೊತೆಗೆ ಬೇರ್‍ಯಾವ ನಿರ್ದೇಶಕರ ಹೆಸರು ಚರ್ಚೆಗೆ ಬಂತು ಎಂದು ಪತ್ರಕರ್ತರು ಪ್ರಶ್ನೆ ಕೇಳಿದಾಗ, "ಗಿರೀಶ್ ಕಾರ್ನಾಡ್‌ರ ಹೆಸರು ಚರ್ಚೆಗೆ ಬಂತು. ಆದರೆ ಪದ್ಮಶ್ರೀ, ಪದ್ಮಭೂಷಣ ಮೊದಲಾದ ದೊಡ್ಡ ದೊಡ್ಡ ಪ್ರಶಸ್ತಿಗಳನ್ನು ಪಡೆದಿರುವ ಕಾರ್ನಾಡ್ ಈ ಚಿಕ್ಕ ಪ್ರಶಸ್ತಿಯನ್ನು ಪಡೆಯುತ್ತಾರೋ ಇಲ್ಲವೋ ಎಂಬ ಕಾರಣಕ್ಕೆ ದಾಸ್ ಅವರನ್ನು ಆಯ್ಕೆ ಮಾಡಿದೆವು" ಎಂದು ಭಾರ್ಗವ ಹೇಳಿದ್ದೇ ಗೊಂದಲ ಶುರುವಾಯಿತು.

ಮೊದಲನೆಯದಾಗಿ, ಪುಟ್ಟಣ್ಣ ಕಣಗಾಲ್ ಹೆಸರಿನ ಪ್ರಶಸ್ತಿಯನ್ನು 'ಚಿಕ್ಕ ಪ್ರಶಸ್ತಿ' ಎಂದು ಭಾರ್ಗವ ಬಣ್ಣಿಸಿದ್ದಕ್ಕೆ ಪತ್ರಕರ್ತರು ಅವರನ್ನು ತರಾಟೆಗೆ ತೆಗೆದುಕೊಂಡರು. ಎರಡನೆಯದಾಗಿ, ಕಾರ್ನಾಡರಂತೆ ಈಗಾಗಲೇ ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳನ್ನು ಪಡೆದಿರುವ ಬಿ.ಸರೋಜಾದೇವಿಯವರನ್ನು ಹಾಗಾದರೆ ಯಾಕೆ ಡಾ.ರಾಜ್‌ಕುಮಾರ್ ಪ್ರಶಸ್ತಿಗೆ ಆಯ್ಕೆ ಮಾಡಿದ್ದಿರಿ ಎಂದು ಪತ್ರಕರ್ತರು ಮರುಪ್ರಶ್ನಿಸಿದಾಗ ಭಾರ್ಗವ ಕಸಿವಿಸಿಯಾದರು. ಮೂರನೆಯದಾಗಿ, ದಾಸ್ ಅವರನ್ನು ಯಾವ್ಯಾವ ಕಾರಣಕ್ಕೆ ಆಯ್ಕೆ ಮಾಡಿದ್ದೀರಿ ಎಂದೂ ಪತ್ರಕರ್ತರು ಪ್ರಶ್ನಿಸಿದರು. ಇದ್ಯಾವುದನ್ನೂ ಸಮರ್ಥಿಸಿಕೊಳ್ಳಲು ಸಾಧ್ಯವಾಗದೆ ಭಾರ್ಗವ ಅವರು ನಿಂತಕಾಲಲ್ಲೇ ದಾಸ್ ಬದಲಿಗೆ ಕಾರ್ನಾಡರಿಗೆ ಈ ಪ್ರಶಸ್ತಿಯನ್ನು ಪ್ರಶಸ್ತಿಯನ್ನು ಘೋಷಿಸಿದರು.



ಆದರೀಗ ಗಿರೀಶ್ ಕಾರ್ನಾಡ್ ತಾವು ಈ ಪ್ರಶಸ್ತಿಯನ್ನು ಸ್ವೀಕರಿಸುವುದಿಲ್ಲ ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಇದೇ ಹೊತ್ತಿಗೆ ಕೆ.ಎಸ್.ಆರ್.ದಾಸ್ ಕೂಡ ನೊಂದುಕೊಂಡು "ಪ್ರಶಸ್ತಿ ನೀಡಿದ್ದು ಅವರೇ, ವಾಪಸ್ಸು ಪಡೆದುಕೊಂಡಿದ್ದೂ ಅವರೇ. ನಾನೇನು ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿಲ್ಲ, ಈ ಮೂಲಕ ಅವರಿಗೆ ಅವರೇ ಅವಮಾನ ಮಾಡಿಕೊಂಡಿದ್ದಾರೆ" ಎಂದು ನೋವು ಮತ್ತು ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಮತ್ತೊಂದೆಡೆ ಪುಟ್ಟಣ್ಣ ಕಣಗಾಲ್ ಅವರ ಪತ್ನಿ ಈ ವಿವಾದದ ಬಗ್ಗೆ ಪ್ರತಿಕ್ರಿಯಿಸುತ್ತಾ "ನಮ್ಮೆಜಮಾನರ ಹೆಸರನ್ನು ಫುಟ್ಬಾಲ್ ತರಹ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಎಸೆಯುತ್ತಿದ್ದಾರೆ. ದಯವಿಟ್ಟು ಹೀಗೆ ಅವಮಾನ ಮಾಡಬೇಡಿ. ಅದರ ಬದಲಿಗೆ ನಮ್ಮೆಜಮಾನರ ಹೆಸರಿನಲ್ಲಿರುವ ಪ್ರಶಸ್ತಿಯನ್ನು ನಿಲ್ಲಿಸಬಿಡಿ" ಎಂದು ಮನವಿ ಮಾಡಿದ್ದಾರೆ.

ಹೀಗೆ ಈ ಒಂದು ಅನಗತ್ಯ ವಿವಾದದಿಂದಾಗಿ ಈಗ ದಾಸ್ ಅವರಿಗೂ, ಕಾರ್ನಾಡರಿಗೂ, ದಿ. ಪುಟ್ಟಣ್ಣ ಕಣಗಾಲ್‌ರವರಿಗೂ ಏಕಕಾಲದಲ್ಲಿ ಅವಮಾನವಾಗಿದೆ. ಇದೆಂತಹ ರಾಡಿ....

ಪಡುಬಿದ್ರಿ ಪೊಲೀಸು ಠಾಣೆಯಲ್ಲಿ ಮನರಂಜನೆ: ಆರೋಪಿಗಳಿಗೆ ಚಿತ್ರಹಿಂಸೆ ಮತ್ತು ಇತರ ಕಾರ್ಯಕ್ರಮಗಳು

ಇತ್ತೀಚೆಗೆ ಉಡುಪಿ ಜಿಲ್ಲೆಯ ಪಡುಬಿದ್ರಿಯಲ್ಲಿ ಪೊಲೀಸರು, 'ಸಂಶಯದ ಆಧಾರದಲ್ಲಿ' ಇಬ್ಬರು ತರುಣರನ್ನು ಠಾಣೆಗೆ ಒಯ್ದು ಹಲವು ಗಂಟೆಗಳ ಕಾಲ ಅವರ 'ವಿಚಾರಣೆ' ನಡೆಸಿ ನಂತರ ಬಿಡುಗಡೆಗೊಳಿಸಿದರು. ಈ ಸುದ್ದಿಯಲ್ಲಿ ವಿಶೇಷವೇನಿದೆ ಎಂದು ಅನ್ನಿಸಿದರೆ, ಸದ್ಯದ ಪರಿಸ್ಥಿತಿಯಲ್ಲಿ ಅದು ಸಹಜವೇ. ವಿಚಾರಣೆಯ ನೆವದಲ್ಲಿ ಪೊಲೀಸರು ಆರೋಪಿಗಳಿಗೆ ಬೈದು, ಹೊಡೆದು ಹಿಂಸೆ ಕೊಟ್ಟರು ಎಂಬ ಸುದ್ದಿಯಲ್ಲಿ ಸಹ ವಿಶೇಷವೇನೂ ಇಲ್ಲ. ದೇಶದ ಜೈಲುಗಳಲ್ಲಿ ಸಾವಿರಾರು ವಿಚಾರಣಾಪೂರ್ವ ಕೈದಿಗಳು ಕೊಳೆಬಿದ್ದಿದ್ದಾರೆ. ತಮ್ಮ ಮೇಲೆ ಇರುವ ಆರೋಪಗಳೇನು ಎಂಬುದು ಸಹ ಗೊತ್ತಿಲ್ಲದೆ, ತಮ್ಮ ಆಯುಷ್ಯದ ಬಹುಭಾಗವನ್ನು ಜೈಲಿನಲ್ಲಿ ಕಳೆದ ಅಮಾಯಕರ ಸಂಖ್ಯೆಯೂ ದೊಡ್ಡದಿದೆ. ಹಾಗಿರುತ್ತ ಎಫ್ಐಆರ್ ದಾಖಲಿಸುವುದು ಮ್ಯಾಜಿಸ್ಟ್ರೇಟರ ಎದುರು ಹಾಜರುಪಡಿಸುವುದು ಇತ್ಯಾದಿ ಗಳಿಗೆ ಹೋಗದೆ ಈ ತರುಣರನ್ನು ಕೇವಲ 'ವಿಚಾರಿಸಿಕೊಂಡು' ಮನೆಗೆ ಕಳುಹಿಸಿದ್ದಕ್ಕೆ ಪಡುಬಿದ್ರಿ ಪೊಲೀಸರನ್ನು ಮೆಚ್ಚಬೇಕು. ಈ ಪ್ರಕರಣದ ವಿವರಗಳು ಪತ್ರಿಕೆಯ ರಂಜನೆ, ಬೋಧನೆ ಮತ್ತು ಪ್ರಚೋದನೆಯ ಉದ್ದೇಶಗಳಿಗೆ ಹೇಳಿ ಮಾಡಿಸಿದಂತಿವೆ. ಆ ಕಾರಣಕ್ಕೆ ಪೊಲೀಸರು ನಮ್ಮ ಕೃತಜ್ಞತೆಗೆ ಪಾತ್ರರು.

ಉಡುಪಿ-ಮಂಗಳೂರು ಹೆದ್ದಾರಿಯಲ್ಲಿ ಕಾಪುವಿನ ನಂತರ, ಪಡುಬಿದ್ರಿಗೆ ಮೊದಲು ಸಿಗುವ ಊರು ಉಚ್ಚಿಲ.



ಅದು ಪಡುಬಿದ್ರಿ ಪೊಲೀಸು ಠಾಣೆಗೆ ಒಳಪಟ್ಟಿದೆ. ಮೊನ್ನೆ ನವೆಂಬರ್ 30, ಮಂಗಳವಾರ ಬೆಳಗ್ಗೆ 11 ರ ಸುಮಾರಿಗೆ, ಉಚ್ಚಿಲದ ಇಬ್ಬರು ತರುಣರು, ಮೊಹಮ್ಮದ್ ಶಮೀಮ್ ಹಾಗೂ ಇಮ್ರಾನ್, ಕಾಪುವಿನ ಕಡೆ ಬೈಕಿನಲ್ಲಿ ಹೋಗುತ್ತಿದ್ದರು. ಕಾಪು ಮಾರಿಗುಡಿ ಸಮೀಪ, ಕಾಪು ಪೊಲೀಸು ಠಾಣೆಯ ಸಿಬ್ಬಂದಿ ಶಿವಣ್ಣ ಮತ್ತು ಇನ್ನೊಬ್ಬರು (ಹೆಸರು ತಿಳಿದುಬಂದಿಲ್ಲ) ಬೈಕನ್ನು ತಡೆದು, ಅದರ ಕೀ ಕಸಿದುಕೊಂಡು, ಅವರಿಬ್ಬರನ್ನೂ ಅಲ್ಲೇ ಸಮೀಪದ ಕಾಂಗ್ರೆಸ್ ಕಚೇರಿ 'ರಾಜೀವ ಭವನ'ದ ಹಿಂಬದಿಯಲ್ಲಿರುವ ಒಂದು ಕಟ್ಟಡಕ್ಕೆ ಕರೆದೊಯ್ದರು. ಸ್ವಲ್ಪ ಹೊತ್ತಿನ ನಂತರ ಅಲ್ಲಿಗೆ ಬಂದ ಪಡುಬಿದ್ರಿ ಪೊಲೀಸು ಠಾಣೆಯ ಲೋಕೇಶ, ಸುರೇಶ ಮತ್ತು ಬಾಲಕೃಷ್ಣ ಆ ತರುಣರನ್ನು ವಶಕ್ಕೆ ತೆಗೆದುಕೊಂಡು ಉಚ್ಚಿಲದ ಆಸುಪಾಸಿನಲ್ಲಿ ಇತ್ತೀಚೆಗೆ ಆದ ಕಳವು ಮತ್ತಿತರ ಅಪರಾಧಗಳನ್ನು ತಾವು ನಡೆಸಿದ್ದು ಎಂದು ಒಪ್ಪಿಕೊಳ್ಳಲು ಒತ್ತಾಯಿಸಿದರು. ಶಮೀಮ್ ಮತ್ತು ಇಮ್ರಾನ್, ತಾವು ಅಂತಹ ಯಾವ ಅಕೃತ್ಯವನ್ನೂ ಮಾಡಿಲ್ಲ ಎಂದು ಹೇಳಿದಾಗ, ಪೊಲೀಸರು ಇವರ ಕೆಪ್ಪೆಗೆ ಭಾರಿಸಿದರು. ಆನಂತರವೂ ಈ ತರುಣರು ತಮ್ಮ ಮೇಲೆ ಹೊರಿಸಿದ ಆರೋಪವನ್ನು ನಿರಾಕರಿಸಿದಾಗ, ಪಡುಬಿದ್ರಿ ಪೊಲೀಸರು, ಇವರನ್ನೂ ಇವರ ಹೆತ್ತವರನ್ನೂ ಜೊತೆಗೆ ಮುಸ್ಲಿಮ್ ಸಮುದಾಯವನ್ನು ಪೊಲೀಸು ಭಾಷೆಯಲ್ಲಿ ಬೈಯ್ಯುತ್ತ "ಉಚ್ಚಿಲದಲ್ಲಿ ನಿಮ್ಮ ಸಂತಾನ ನಿರ್ಮೂಲ ಮಾಡುತ್ತೇವೆ; ಸಾರಾಯಿ, ಗಾಂಜಾ ಕೇಸಿನಲ್ಲಿ ನಿಮ್ಮನ್ನು ಫಿಟ್ ಮಾಡುತ್ತೇವೆ" ಎಂದು ಮುಂತಾಗಿ ಬೆದರಿಕೆ ಹಾಕುತ್ತ ತಮ್ಮ ವಿಚಾರಣೆಯನ್ನು ಮುಂದುವರಿಸಿದರು. ಈ ನಡುವೆ, 'ಸಂಶಯಿತ'ರನ್ನು ಪೊಲೀಸರು ತಮಗೆ ದೇವರು ಕೊಟ್ಟ ಕೈ ಹಾಗೂ ಇಲಾಖೆ ಒದಗಿಸಿದ ಲಾಠಿಗಳಿಂದ ಸಹ ಸಾಕಷ್ಟು ವಿಚಾರಿಸಿಕೊಂಡರು.

ಈ ಪ್ರಕಾರವಾಗಿ ವಿಚಾರಣೆಯ ಮೊದಲ ರೌಂಡ್ ಮುಗಿದನಂತರ ಪೊಲೀಸರು ಶಮೀಮ್ ಮತ್ತು ಇಮ್ರಾನ್‌ರನ್ನು ಪಡುಬಿದ್ರಿ ಪೊಲೀಸು ಠಾಣೆಗೆ ಕರೆದುಕೊಂಡು ಹೋಗಿ, ಠಾಣೆಯ ಮೊದಲ ಅಂತಸ್ತಿನ ಖಾಲಿ ಕೊಠಡಿ ಒಂದರಲ್ಲಿ ತಮ್ಮ ಡ್ಯೂಟಿ ಮುಂದುವರಿಸಿದರು. ಬೈಗುಳ ಹಾಗೂ ಹೊಡೆತದ ಮಾಮೂಲಿ ಕಾರ್ಯಕ್ರಮದ ಜೊತೆ ಈ ರೌಂಡಿನಲ್ಲಿ ವಿವಿಧ ವಿನೋದಾವಳಿಯೂ ಇದ್ದು ಪಡುಬಿದ್ರಿ ಪೊಲೀಸರ ಪ್ರತಿಭಾ ಪ್ರದರ್ಶನಕ್ಕೆ ಅವಕಾಶವಾಯಿತು. ಮೊದಲಿಗೆ ಶಮೀಮ್ ಮತ್ತು ಇಮ್ರಾನ್‌ರ ಮೊಬೈಲುಗಳನ್ನು ಕಸಿದುಕೊಂಡು ಅವುಗಳಲ್ಲಿ ಸ್ಟೋರ್ ಆಗಿದ್ದ ಹೆಸರುಗಳನ್ನು ಗಟ್ಟಿಯಾಗಿ ಹೇಳುತ್ತ ಪ್ರತಿಯೊಂದು ಹೆಸರಿನ ಕುರಿತು ತನಿಖೆ ನಡೆಸುತ್ತ ಅಕಸ್ಮಾತ್ ಹೆಂಗಸರ ಹೆಸರು ಬಂದರೆ "ಇದು ಯಾರು?..... ಮಗನೆ, ನಿನ್ನ ಲವರಾ?" ಎಂದು ಒಬ್ಬ ಪಿ.ಸಿ. ಕೇಳುವುದು, ಉಳಿದವರು ಈ ಕುಶಾಲಿಗೆ ಹೋ ಎಂದು ನಗುವುದು-ಈ ಐಟಮ್ ಸುಮಾರು ಹೊತ್ತು ನಡೆಯಿತು. ಎಲ್ಲ ಹೆಂಗಸರನ್ನೂ "ಲವರ್"ಗಳ ಹಾಗೆ ಕಾಣುವ ಪಡುಬಿದ್ರಿ ಪೊಲೀಸರು ಯಾವ ತಳಿಯ ಪ್ರಾಣಿಗಳಾಗಿರಬಹುದು? ಅವರು ಮಸ್ತು ಮಜಾ ತೆಗೆದುಕೊಂಡ ಮುಂದಿನ ಕಾರ್ಯಕ್ರಮ ಸಂದೇಹವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ಶಮೀಮ್ ಮತ್ತು ಇಮ್ರಾನ್‌ರ ಮೊಬೈಲುಗಳು ಸ್ವಿಚ್ ಆಫ್‌ಗೊಳಿಸಿದ್ದರಿಂದ ಅವರ ಮನೆಯವರಿಗೆ ಅವರನ್ನು ಸಂಪರ್ಕಿಸಲು ಸಾಧ್ಯವಾಗಿರಲಿಲ್ಲ. ಪೊಲೀಸರು ಈ ಮೊಬೈಲ್‌ಗಳಿಂದ ಶಮೀಮ್ ಮತ್ತು ಇಮ್ರಾನ್‌ರ ಮನೆಗಳಿಗೆ ಕಾಲ್ ಮಾಡುವುದು, ಆ ಕಡೆಯಿಂದ ಹಲೋ ಎಂದು ಕೇಳುತ್ತಿದ್ದ ಹಾಗೆಯೇ ಕಟ್ ಮಾಡುವುದು-ಇದನ್ನು ಹಲವು ಬಾರಿ ನಡೆಸಿದರು. ಬೆಳಗ್ಗೆ 11 ಗಂಟೆಗೆ ಮನೆ ಬಿಟ್ಟು ಬೈಕಿನಲ್ಲಿ ಹೋದ ಹುಡುಗರ ಬಗ್ಗೆ ಸಂಜೆಯಾದರೂ ಯಾವ ಸುಳಿವೂ ಇಲ್ಲದೆ ಮೊದಲೇ ಆ ಮನೆಯವರು ಆತಂಕದಲ್ಲಿದ್ದರು; ಈಗ ಈ ಮೊಬೈಲ್‌ಗಳ ಎರ್ರಾಬಿರ್ರಿ ಕಾಲ್‌ಗಳಿಂದ ಅವರು ತಮ್ಮ ಹುಡುಗರಿಗೆ ಗಂಭೀರವಾದ ಅಪಘಾತವಾಗಿದೆ ಎಂದೇ ಭಾವಿಸಿ ಗಾಬರಿ ಬಿದ್ದರು. ಇಮ್ರಾನ್‌ರ ತಾಯಿ ಬೀಫಾತಿಮಾರಿಗೆ ಹೃದಯಾಘಾತವಾಗಿ ಅವರನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು. ಇಮ್ರಾನ್‌ರ ಮೊಬೈಲ್‌ನಲ್ಲಿ ರಾಷ್ಟ್ರಗೀತೆ ಸ್ಟೋರ್ ಆಗಿತ್ತು, ಅದನ್ನು ಆಲಿಸಿದ ಒಬ್ಬ ಪೊಲೀಸ್ "........ ಮಗನೆ, ನೀನು ಕೆಎಫ್‌ಡಿಯಾ?" ಎಂದು ಅವರನ್ನು ಕೇಳಿದ. ಆದರೆ ಈ ಬಗ್ಗೆ ನಾವು ಪಡುಬಿದ್ರಿ ಪೊಲೀಸರನ್ನು ಆಕ್ಷೇಪಿಸುವ ಹಾಗಿಲ್ಲ, ಆ ಪ್ರಶ್ನೆಗೆ ಒಂದು ಹಿನ್ನೆಲೆ ಇದೆ. ಸಾಮಾನ್ಯವಾಗಿ ಹೆಚ್ಚಿನ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಮೊದಲಾಗಲಿ, ಕೊನೆಗಾಗಲಿ ರಾಷ್ಟ್ರಗೀತೆ ಹಾಡುವುದಿಲ್ಲ, ಆದರೆ ಕೆಎಫ್‌ಡಿ ಅಥವಾ ಆನಂತರದ ಪಾಪ್ಯುಲರ್ ಫ್ರಂಟ್ ಸಂಘಟನೆಯ ಹೆಚ್ಚಿನ ಕಾರ್ಯಕ್ರಮಗಳು ರಾಷ್ಟ್ರಗೀತೆಯೊಂದಿಗೆ ಮುಗಿಯುತ್ತವೆ; ಒಮ್ಮೊಮ್ಮೆ ಕಾರ್ಯಕ್ರಮದ ಮೊದಲಿಗೆ, "ಸಾರೇ ಜಹಾಂ ಸೆ ಅಚ್ಛಾ...." ಹಾಡನ್ನು ಕೂಡ ನುಡಿಸುವುದುಂಟು. ಹಾಗಾಗಿ ಇಮ್ರಾನ್‌ರ ಮೊಬೈಲ್‌ನಲ್ಲಿ ಸ್ಟೋರ್ ಆಗಿದ್ದ ರಾಷ್ಟ್ರಗೀತೆಯ ಬಗ್ಗೆ ಪಡುಬಿದ್ರಿ ಪೊಲೀಸರ ಸಂದೇಹ ಸಕಾರಣವಾಗಿದ್ದು ಅವರು ಕೇಳಿದ ಪ್ರಶ್ನೆ ಆ ಸಂದರ್ಭಕ್ಕೆ ಉಚಿತವಾಗಿಯೇ ಇದೆ. ಆದರೆ ಮುಸ್ಲಿಮರ ಕಷ್ಟ ನೋಡಿ! ರಾಷ್ಟ್ರನಿಷ್ಠೆಯ ಪರೀಕ್ಷೆಯಲ್ಲಿ ಅವರು ರಾಷ್ಟ್ರಗೀತೆಗೆ ಗೌರವ ತೋರಿಸಿದರೂ ನಾ ಪಾಸು; ತೋರದಿದ್ದರೂ ನಾ ಪಾಸು!

ಶಮೀಮ್, ಉಡುಪಿಯ ಟ್ಯುಟೋರಿಯಲ್ ಕಾಲೇಜೊಂದರಲ್ಲಿ ವಿದ್ಯಾರ್ಥಿ; ಇಮ್ರಾನ್ ಪಿಯುಸಿವರೆಗೆ ಓದಿದ್ದು ವೃತ್ತಿಯಲ್ಲಿ ಡ್ರೈವರ್. ಅವರ ಅಣ್ಣ ಇಕ್ಬಾಲ್, ಬೆಂಗಳೂರಿನಲ್ಲಿ ವಾರ್ತಾ ಭಾರತಿ ಪತ್ರಿಕೆಯಲ್ಲಿ ಪತ್ರಕರ್ತರು. ಇಮ್ರಾನ್ ಈ ಪ್ರಕರಣದ ಬಗ್ಗೆ ನನ್ನೊಂದಿಗೆ ಮಾತಾಡುತ್ತ "ಮೂರು ವರ್ಷದಿಂದ ನಾನು ಉಚ್ಚಿಲದಲ್ಲಿ ಗಾಡಿ ಓಡಿಸುತ್ತಿದ್ದೇನೆ. ಮೊದಲು, ನಾಗಾರ್ಜುನ ಸೈಟಿಗೆ (ಅಲ್ಲಿಗೆ ಸಮೀಪದ ನಾಗಾರ್ಜುನ ವಿದ್ಯುತ್ ಸ್ಥಾವರ) ರೆಗ್ಯುಲರ್ ಟ್ರಿಪ್ ಮಾಡುತ್ತಿದ್ದೆ, ಅವತ್ತಿನಿಂದ ಪಡುಬಿದ್ರಿ ಪೊಲೀಸರಿಗೆ ನಾನು ಯಾರು ಎಂದು ಗೊತ್ತು, ಶಮೀಮ್ ಯಾರು ಎಂದು ಗೊತ್ತು, ಆದರೂ ನಮ್ಮನ್ನು ಸ್ಟೇಷನ್ನಿಗೆ ಎಳೆದು ಕೊಂಡುಹೋಗಿ ಹೊಡೆದರಲ್ಲ! ನಾವು ಇನ್ನು ಇವರ ಕೈಯಲ್ಲಿ ಬದುಕುಲಿರುಂಟಾ?" ಎಂದು ಕೇಳಿದರು.

ಅವತ್ತು ರಾತ್ರಿ 7.30 ರ ಸುಮಾರಿಗೆ, ಶಮೀಮ್ ಮತ್ತು ಇಮ್ರಾನ್ ಪೊಲೀಸು ಠಾಣೆಯಲ್ಲಿ ಇರುವ ವಿಷಯ ಗೊತ್ತಾಗಿ, ಇಮ್ರಾನ್‌ರ ಅಣ್ಣ ಝುಕೀರ್ ಠಾಣೆಗೆ ಬಂದು ಇಬ್ಬರನ್ನೂ ಬಿಡಿಸಿಕೊಂಡು ಹೋದರು. ಹೋಗುವ ಮೊದಲು ಠಾಣೆಯಲ್ಲಿ ಸುರೇಶ ಎಂಬ ಪೊಲೀಸು ಸಿಬ್ಬಂದಿ ಬರೆದ ಹೇಳಿಕೆಗೆ ಇಬ್ಬರಿಂದಲೂ ಸಹಿ ತೆಗೆದುಕೊಳ್ಳಲಾಯಿತು. ಸಹಿ ಮಾಡುವ ಮೊದಲು ಇಮ್ರಾನ್ ಹೇಳಿಕೆಯನ್ನು ಓದಲು ಶುರು ಮಾಡಿದಾಗ, ಸುರೇಶ, "ಅದರಲ್ಲಿ ಓದಲಿಕ್ಕೆ ಏನುಂಟು? ನೀನು ಭಾರೀ ಕಲಿತವನಾ?" ಎಂದು ಗದರಿಸಿ, ಒತ್ತಾಯದಲ್ಲಿ ಸಹಿ ತೆಗೆದುಕೊಂಡ. ತಾವು ಸಹಿ ಮಾಡಿದ ಹೇಳಿಕೆಯ ಒಕ್ಕಣೆ ಏನು ಎಂದು ಶಮೀಮ್ ಮತ್ತು ಇಮ್ರಾನ್‌ಗೆ ಈಗಲೂ ಗೊತ್ತಿಲ್ಲ.

ಪಡುಬಿದ್ರಿ ಪೊಲೀಸರು, ಅಪರಾಧಗಳ ತನಿಖೆಗೆ ಸಂಬಂಧಿಸಿದ ಕ್ರಿಮಿನಲ್ ಕಾಯ್ದೆಯನ್ನು ಉಲ್ಲಂಘಿಸಿರುವುದು ಇದೇನೂ ಮೊದಲ ಬಾರಿ ಅಲ್ಲ. ಪಾಸ್‌ಪೋರ್ಟ್ ಅರ್ಜಿಯ ದೃಢೀಕರಣ ಮುಂತಾದ ಕಾರಣಗಳಿಗೆ ಪೊಲೀಸು ಠಾಣೆಗೆ ಬರುವ ಮುಸ್ಲಿಮರನ್ನು "ನೀವು ಯಾಕೆ ಇಲ್ಲಿದ್ದೀರಿ? ಪಾಕಿಸ್ತಾನಕ್ಕೆ ಹೋಗಿ; ಅಫ್ಘಾನಿಸ್ತಾನಕ್ಕೆ ಹೋಗಿ; ಅಲ್ಲೇ ಕಾಯಂ ಇದ್ದು ಬಿಡಿ" ಎಂದು ಮುಂತಾಗಿ ಹೀಯಾಳಿಸುವುದು ಆ ಠಾಣೆಯಲ್ಲಿ ತೀರಾ ಸಾಮಾನ್ಯ. ಈ ಹಿಂದೆ ನಡೆದ ಒಂದು ಪ್ರಕರಣದಲ್ಲಿ ಪಡುಬಿದ್ರಿ ಪೊಲೀಸರು ವರ್ತಿಸಿದ ರೀತಿ, ಅವರ ಮೂರ್ಖತನ ಮತ್ತು ಮುಸ್ಲಿಮರ ಅಸಹಾಯಕತೆ, ಎರಡಕ್ಕೂ ಉದಾಹರಣೆ ಎಂಬಂತಿದೆ. 2007 ರ ಅಕ್ಟೋಬರ್‌ನ ಒಂದು ದಿನ, ಭಜರಂಗದಳದ ಪಡುಬಿದ್ರಿಯ ದೊಣ್ಣೆನಾಯಕನೊಬ್ಬನಿಗೆ ಯಾರೋ ಇಬ್ಬರು ಪಲ್ಸರ್ ಬೈಕಿನಲ್ಲಿ ಮುಖಕ್ಕೆ ಮಸುಕು ಹಾಕಿಕೊಂಡು ಬಂದು ಹಲ್ಲೆ ನಡೆಸಿದರು. ಅಪರಾಧಿಗಳನ್ನು ಪತ್ತೆಹಚ್ಚುವುದರಲ್ಲಿ ವಿಫಲರಾದ ಪಡುಬಿದ್ರಿ ಪೊಲೀಸರ ವಿರುದ್ಧ ಭಜರಂಗಿಗಳು ಭಾರೀ ಪ್ರತಿಭಟನೆ ನಡೆಸಿದರು. ವಾಸ್ತವವಾಗಿ ಈ ಹಲ್ಲೆಗೆ ರೋಲ್‌ಕಾಲ್‌ನಲ್ಲಿ ಸಂಗ್ರಹವಾದ ಹಣವನ್ನು ಹಂಚಿಕೊಳ್ಳುವ ಬಗ್ಗೆ ಭಜರಂಗಿಗಳ ನಡುವೆಯೇ ನಡೆದ ಜಗಳ ಕಾರಣವಾಗಿದ್ದರೂ ಹಲ್ಲೆಯ ನೆವದಲ್ಲಿ ಮುಸ್ಲಿಮರನ್ನು ಬಲಿ ಹಾಕಲು ಪೊಲೀಸರ ಮೇಲೆ ಭಜರಂಗಿಗಳು ಭಾರೀ ಒತ್ತಡ ಹೇರಿದರು; ಅವರನ್ನು ತೃಪ್ತಿಪಡಿಸಲು ಪೊಲೀಸರು ಸ್ಥಳೀಯ ಕಾಲೇಜೊಂದರ ತರುಣ ಅಧ್ಯಾಪಕ ಅಬ್ದುಲ್ ಹುಸೇನ್ ಖಾದರ್ ಅವರನ್ನು ವಶಕ್ಕೆ ತೆಗೆದುಕೊಂಡು ಎರಡು ದಿನ ಅವರನ್ನು ವಿವಿಧ ಪೊಲೀಸು ಠಾಣೆಗಳಿಗೆ ಅಲೆದಾಡಿಸಿ, ನಂತರ ಉಡುಪಿಯ ಸರ್ಕಲ್ ಇನ್ಸ್‌ಪೆಕ್ಟರ್‌ರ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು. ಖಾದರ್, ಖ್ಯಾತ ವ್ಯಂಗ್ಯಚಿತ್ರಕಾರ ಪಿ. ಮಹಮ್ಮದ್ ಅವರ ಸಹೋದರ. ಅವರನ್ನು ವಶಕ್ಕೆ ತೆಗೆದುಕೊಂಡು ತನಿಖೆ ಮಾಡಲು ಪೊಲೀಸರಿಗೆ ಇದ್ದ ಏಕಮಾತ್ರ ಸಾಕ್ಷ್ಯಾಧಾರವೆಂದರೆ ಅವರ ಬಳಿ ಇದ್ದ ಪಲ್ಸರ್ ಬೈಕು! ಖಾದರ್‌ರ ಅಕ್ರಮ ಬಂಧನದ ಬಗ್ಗೆ ಕೋಮು ಸೌಹಾರ್ದ ವೇದಿಕೆಯ ಪರವಾಗಿ ನಾವು ಉಡುಪಿಯ ಸರ್ಕಲ್ ಇನ್ಸ್‌ಪೆಕ್ಟರ್ ಅವರನ್ನು ಪ್ರಶ್ನಿಸಿದಾಗ, ಅವರು, "ನಾವು ಅವರನ್ನು ಬಂಧಿಸಿಲ್ಲ; ಸುಮ್ಮನೆ ವಿಚಾರಣೆಗೆ ಕರೆಸಿಕೊಂಡಿದ್ದೇವೆ. ಇವತ್ತು ರಿಲೀಸ್ ಮಾಡುತ್ತೇವೆ. ನಾವು ಖಾದರ್ ಜೊತೆ ಗೌರವದಿಂದ ನಡೆದುಕೊಂಡಿದ್ದೇವೆ" ಎಂದು ಉತ್ತರಿಸಿದರು. ಅದು ನಿಜವಿದ್ದರೂ ಇದ್ದೀತು. ಯಾಕೆಂದರೆ ನಾವು ಹೋದಾಗ ಖಾದರ್ ಸರ್ಕಲ್ ಇನ್ಸ್‌ಪೆಕ್ಟರ್‌ರ ಕಚೇರಿಯಲ್ಲಿ ಒಂದು ಕುರ್ಚಿಯ ಮೇಲೆ ಕೂತಿದ್ದರು. ಪೊಲೀಸು ಕಚೇರಿಯಲ್ಲಿ ವಿಚಾರಣೆಗೆ ಕರೆಸಿದವರಿಗೆ ಕುರ್ಚಿ ಕೊಡುವುದು ಎಂದರೆ ಸಣ್ಣ ಮಾತಾಯಿತಾ? ಖಾದರ್‌ಗೆ ಪೊಲೀಸು ಕಚೇರಿಯಲ್ಲಿ ಕೂರಲು ಕುರ್ಚಿ ಸಿಕ್ಕರೂ, ಪೊಲೀಸರು ಅವರನ್ನು ಬಂಧಿಸಿದ ಕಾರಣಕ್ಕೆ ತಮ್ಮ ಉದ್ಯೋಗವನ್ನೇ ಕಳೆದುಕೊಂಡರು. ಶಮೀಮ್ ಮತ್ತು ಇಮ್ರಾನ್‌ರಿಗೆ ಆ ಭಯವಿಲ್ಲ, ಆದರೆ ತಾವು ಮುಸ್ಲಿಮರಾಗಿರುವುದರಿಂದಲೇ ಈ ನಾಡಿನಲ್ಲಿ ತಮಗೆ ಇಂತಹ ಪಾಡು ಬಂದಿರುವುದು ಎಂದು ಅವರು ಭಾವಿಸಿದಂತೆ ನನಗೆ ಕಂಡಿತು.

ಈ ಭಾವನೆ ಇರುವುದು ಮುಸ್ಲಿಮರ ಪೈಕಿ ಕೇವಲ ಶಮೀಮ್ ಮತ್ತು ಇಮ್ರಾನ್‌ಗೆ ಮಾತ್ರವಲ್ಲ.

● ಜಿ. ರಾಜಶೇಖರ

▶▶ 10

ಪಿಆರ್‌ಓ ಆಗಿದ್ದ ಮಾಜಿ ಎಬಿವಿಪಿ ಸದಸ್ಯ ಸುಭಾಷ್ ಸಿಂಗ್ ಜಮಾದಾರನ ವಿರುದ್ಧ ಜಗಳ ತೆಗೆದ. ಇದರಿಂದ ಸಿಟ್ಟಿಗೆದ್ದ ಸುಭಾಷ್ ವಿಕ ಮ್ಯಾನೇಜ್‌ಮೆಂಟಿಗೆ ಯತಿರಾಜನ ಇನ್ನೋವಾ ಕಾರ್ ಮಾಲೀಕತ್ವದಿಂದ ಆರಂಭಿಸಿ ಸಮಸ್ತ ಹಣ, ಆಸ್ತಿ ಡೀಲುಗಳ ಮಾಹಿತಿ ಸಂಗ್ರಹಿಸಿ ದೂರುಕೊಟ್ಟ. ಆದರೆ ಭಟ್ಟರು ಯತಿರಾಜನ ಪರ ನಿಂತು ಕೆಟ್ಟ ಹೆಸರಿನಲ್ಲಷ್ಟೆ ಪಾಲು ಪಡೆಯುವಂತಾಯಿತು. ಬೆಂಗಳೂರು ಕಚೇರಿಯ 'ತ್ಯಾಗ' ಮಯಿಯೊಬ್ಬನೇ ಹತ್ತು ಕೋಟಿ ರೂಪಾಯಿ ತನಕ ಹಣ ಮಾಡಿಕೊಂಡರು. ಭಟ್ಟರು ಅವನನ್ನು ಕರೆದು ಗದರಲೂ ಇಲ್ಲ, ಶಿಕ್ಷಿಸಲೂ ಇಲ್ಲ. ಈ ಗ್ಯಾಂಗ್‌ನ ಡೀಲ್‌ಗಳೆಷ್ಟು ಜೋರಾಗಿದ್ದವೆಂದರೆ ಬಿಜೆಪಿ ನಾಯಕ ಅರವಿಂದ ಲಿಂಬಾವಳಿಯೇ ತನ್ನ ಆಪ್ತರ ಬಳಿ 'ವಿಜಯ ಕರ್ನಾಟಕದವರಿಗೆ ದುಡ್ಡು ಕೊಟ್ಟೂ ಕೊಟ್ಟು ನನಗೆ ಸಾಕಾಗಿದೆ' ಎಂದು ಗೋಳಾಡಿದ್ದರು.

ಆಪರೇಷನ್ ವಿಭಟ್ಟ

ವಾಸ್ತವವಾಗಿ ಟೈಮ್ಸ್ ಮಾಲೀಕರಿಗೆ ವಿಕ ಖರೀದಿಸಿದಾಗಲೇ ವಿಭಟ್ಟರು ಬೇಕಿಲ್ಲ ಎಂಬ ನಿಲುವಿತ್ತು, ಆದರೆ ಮುನ್ನೂರು ಕೋಟಿ ಸುರಿದುಕೊಂಡಿದ್ದ ಪತ್ರಿಕೆ. ಅಕಸ್ಮಾತ್ ಭಟ್ಟರನ್ನು ಹೊರಹಾಕಿದರೆ ಅವರು ಕನಿಷ್ಠ ಹದಿನೈದು ಜನರನ್ನು ತಮ್ಮೊಂದಿಗೆ ಕರೆದೊಯ್ಯುವ ಆತಂಕವಿತ್ತು, ಆಗ ರಿಸ್ಕ್ ಯಾಕೆಂದು ಮಾಲೀಕರು ಸುಮ್ಮನಿದ್ದರು. ಆದರೆ ವಿಕ ಪೂರ್ತಿ ಕೇಸರಿಮಯವಾಗಿ ಜನರ ದೂರುಗಳು ಜಾಸ್ತಿಯಾದವು. ವಿಭಟ್ಟರ ಡಾಕ್ಟರೇಟ್ ಗೌರವ ವಿಚಾರವೂ ವಿವಾದವಾಯಿತು. ನ್ಯಾಯಮೂರ್ತಿ ಸಲ್ಡಾನ ರಾಜ್ಯಪಾಲರಿಗೆ ವಿಭಟ್ಟರ ವಿರುದ್ಧ ಪತ್ರ ಬರೆದು ದೂರಿದ್ದರು. ಈ ಮಧ್ಯೆ ವಿಭಟ್ಟರು ಮಂತ್ರವಾದಿ



ಚಂದ್ರಸೇಖರ ಸ್ವಾಮಿಯ ಮರ್ಸಿಡೀಸ್ ಬೆಂಝ್ ಕಾರ್ ಕೊಂಡು ಓಡಾಡುತ್ತಿದ್ದರು. ಅವರ ಹೆಸರಿನಲ್ಲಿ ತಿಂಗಳಿಗೊಂದು ಪುಸ್ತಕ ಪ್ರಿಂಟಾಗುತ್ತಿತ್ತು, ಅದರಲ್ಲಿ ಬಹುತೇಕವನ್ನು **Ghost Writers** ಬರೆದು ಕೊಡುತ್ತಿದ್ದರು. ಭಟ್ಟರ ಶಿಷ್ಯನ ಪ್ರತಾಪ ಸಿಮ್ಮು ಸೈಟು ಕದ್ದು ಸಿಗೇಬಿದ್ದ ಇನ್ನೊಬ್ಬ ಶಿಷ್ಯ ನಾಗಮಂಗಲ ಪ್ರಕಾಶ ತಾಯಿ ಹೆಸರಲ್ಲಿ ಸೈಟು ಕಬಳಿಸಿ ಸಿಕ್ಕುಬಿದ್ದ.

ಇನ್ನು ಸಾಕು ಅನ್ನಿಸಿರಬೇಕು, ಟೈಮ್ಸ್‌ನ ಮುಖ್ಯಾಧಿಕಾರಿ ಸುನೀಲ್ ರಾಜಶೇಖರ್ 'ವ್ಯಕ್ತಿಗಿಂತಾ ಸಂಸ್ಥೆ ಮುಖ್ಯ' ಅಂದರು. ಈ ಟೈಮ್ಸ್ ಸಂಸ್ಥೆಯೊಳಗೇ ಸಿಬ್ಬಂದಿಯ ಮೇಲೆ ನಿಗಾ ಇಡುವ ತನಿಖಾ ತಂಡವೊಂದಿದೆ. **Whistle blower policy** ಇದೆ. ಇಲ್ಲೆಲ್ಲಾ ವಿಭಟ್ಟರ ವಿರುದ್ಧ ರಾಶಿರಾಶಿ ದೂರುಗಳಿದ್ದವು.

ಕೊನೆಗೆ ಟೈಮ್ಸ್‌ನ ಬೋರ್ಡ್ ಮೀಟಿಂಗ್ ನಡೆದು ಭಟ್ಟರಿಗೆ 'ಗೇಟ್‌ಪಾಸ್'ನ ನಿರ್ಣಯ ಆಗೇ ಹೋಯಿತು. ಇದು ಒಂದರ್ಥದಲ್ಲಿ ಡಿಸ್‌ಮಿಸ್ ಆಗಿದ್ದರೂ ವಿಭಟ್ಟರ ಗೌರವ ಕಳೆಯದಂತೆ ರಾಜೀನಾಮೆ, ಉನ್ನತ ವ್ಯಾಸಂಗದ ಬಣ್ಣ ನೀಡಲಾಗಿದೆ. ಕೊನೆ ಪ್ರಯತ್ನವೆಂಬಂತೆ ಭಟ್ಟರು ರವಿಶಂಕರ್, ವೀರೇಂದ್ರ ಹೆಗ್ಗಡೆಯ ರೆಕಮೇಂಡೇಷನ್ನಿಗೆ ಯತ್ನಿಸಿ ಸೋತರು.

ಧನ್ಯವಾದ ಭಟ್ಟರೆ

ವಿಶ್ವೇಶ್ವರ ಭಟ್ಟ ಕೋಮುವಾದಿ ಪತ್ರಕರ್ತ ಎಂಬುದರಲ್ಲಿ ಅನುಮಾನವೇ ಇಲ್ಲ, ಹೀಗಿದ್ದಾಗಲೂ ಪತ್ರಿಕೆಯೊಂದು ಲವಲವಿಕೆಯಿಂದ ಕೂಡಿರುವಂತೆ ಅನೇಕ ಪ್ರಯೋಗ, ಹೊಸ ಲಯ ನೀಡಿದ್ದು ಸುಳ್ಳಲ್ಲ. ಅವರೀಗ ಉನ್ನತ ವ್ಯಾಸಾಂಗಕ್ಕೆ ಅಮೇರಿಕಾಗೆ ಹೋಗುತ್ತೇನೆ ಅಂದಿದ್ದಾರೆ. ನಮಗೆ ತಿಳಿದಿರುವಂತೆ ಅಮೆರಿಕಾದ ಯಾವ ಮೂಲೆಯಲ್ಲೂ ಕೋಮುವಾದಿ ಜರ್ನಲಿಸಂನ ಉನ್ನತ ಕೋರ್ಸ್‌ಗಳಿಲ್ಲ, ನಿಷ್ಪಕ್ಷಪಾತ ಪತ್ರಿಕೋದ್ಯಮದ ಎಲಿಮೆಂಟರಿ ಶಾಲೆಗಳೂ ಇಲ್ಲ.

ಹೀಗಿದ್ದಾಗ ವಿಭಟ್ಟರು ಅಲ್ಲೇನು ಮಾಡಲು ಸಾಧ್ಯ.

ಅದೇನೆ ಇರಲಿ.

'ರಾಜೀನಾಮೆ' ಕೊಟ್ಟದ್ದಕ್ಕಾಗಿ ವಿಶ್ವೇಶ್ವರ ಭಟ್ಟರಿಗೆ ಧನ್ಯವಾದಗಳು. ಇದರಿಂದ ಕರ್ನಾಟಕಕ್ಕೆ ನಿಜಕ್ಕೂ ಒಳ್ಳೆಯದಾಗಲಿದೆ. ಅದೇ ರೀತಿ ಭಟ್ಟರನ್ನು ಡಿಸ್‌ಮಿಸ್ ಮಾಡಿದ ಟೈಮ್ಸ್ ಮಾಲೀಕರಿಗೂ ಥ್ಯಾಂಕ್ಸ್. ಇದರಿಂದ ಅವರ ಸಂಸ್ಥೆಗೂ ಒಳಿತಾಗಲಿ. ವಿಜಯ ಕರ್ನಾಟಕ ಜನ ಮೆಚ್ಚುವಂತ ದಿನಪತ್ರಿಕೆಯಾಗಿ ಮುಂದುವರೆಯಲಿ. ●

ಆಫ್ರಿಕಾ ಸರಣಿಗೊಂದು ಮುನ್ನೋಟ

ಡಿಸೆಂಬರ್ 16 ರಿಂದ ಪ್ರಾರಂಭವಾಗುವ ದಕ್ಷಿಣ ಆಫ್ರಿಕಾ ವಿರುದ್ಧದ ಅತ್ಯಂತ ಮಹತ್ವದ ಟೆಸ್ಟ್ ಸರಣಿಯನ್ನು ಭಾರತ ಗೆಲ್ಲುವುದೇ ಎಂಬ ಪ್ರಶ್ನೆ ಕ್ರೀಡಾಪ್ರೇಮಿಗಳನ್ನು ಕಾಡುತ್ತಿದೆ. ಗೆಲ್ಲಲಿ-ಬಿಡಲಿ; ಭಾರತವಂತೂ ಹಿಂದೆಂದಿಗಿಂತಲೂ ಹೆಚ್ಚಿನ ಆತ್ಮವಿಶ್ವಾಸ ಹಾಗೂ ಭರವಸೆಯೊಂದಿಗೆ ಆಫ್ರಿಕಾ ಖಂಡಕ್ಕೆ ಪ್ರಯಾಣಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಫಾರ್ಮ್‌ನಲ್ಲಿರುವ ನಮ್ಮ ಅನುಭವಿ ಬ್ಯಾಟಿಂಗ್ ಪಡೆ ಹಾಗೂ ಜಾಹೀರ್ ಖಾನ್ ನೇತೃತ್ವದ ಮಧ್ಯಮ ವೇಗಿಗಳು ಈ ಬಾರಿ ಇಪ್ಪತ್ತು ವಿಕೆಟ್ ಕೀಳುವ ಸಾಮರ್ಥ್ಯ ಪಡೆದಿದ್ದಾರೆ ಎಂಬ ಆಶಾಭಾವನೆ.

ನಿರೀಕ್ಷೆಯಂತೆ ಐ.ಸಿ.ಸಿ. ನಂ. 1 ರ್‍ಯಾಂಕಿಂಗ್ ಪಟ್ಟ ಹೊಂದಿದ ಭಾರತ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿಯನ್ನು ಗೆದ್ದುಕೊಂಡಿದೆ. ಮೊದಲ ಎರಡು ಟೆಸ್ಟ್‌ಗಳಲ್ಲಿ ತಿಣುಕಾಡಿದ ಭಾರತ ಮೂರನೆಯ ಟೆಸ್ಟ್‌ನಲ್ಲಿ ದಿಗ್ವಿಜಯ ಸಾಧಿಸಿದ್ದಲ್ಲದೇ ಏಕದಿನ ಪಂದ್ಯಗಳನ್ನೂ ನಿರಾಯಾಸವಾಗಿ ಗೆದ್ದು ಸಂತೋಷದಿಂದ ಬೀಗುತ್ತಿದೆ. ಸದ್ಯದಲ್ಲೇ ವಿದೇಶಿ ನೆಲದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಅತ್ಯಂತ ಮುಖ್ಯ ಸರಣಿಯನ್ನು ಭಾರತ ಆಡಬೇಕಾದ್ದರಿಂದ ಈ ಸರಣಿಯ ಮುನ್ನೋಟ ಹಾಗೂ ನಮ್ಮ ತಂಡದ ಬಲಾಬಲಗಳನ್ನು ಅರಿಯುವುದು ಅತ್ಯಗತ್ಯ.



ಭಾರತ ನ್ಯೂಜಿಲೆಂಡ್ ವಿರುದ್ಧದ ಸರಣಿಯನ್ನು ಗೆದ್ದುಕೊಂಡಿದ್ದದು ತೀರಾ ಗಮನಾರ್ಹ ಸಾಧನೆಯೇನಲ್ಲ. ಫಾರ್ಮ್‌ನಲ್ಲಿಲ್ಲದ ಆಟಗಾರರು, ದುರ್ಬಲ ಬಾಂಗ್ಲ ವಿರುದ್ಧದ ಹೀನಾಯ ಸೋಲು ಹಾಗೂ ಗಾಯಾಳುಗಳ ಸಮಸ್ಯೆಯಿಂದ ಬಳಲುತ್ತಿದ್ದ ನ್ಯೂಜಿಲೆಂಡ್ ತಂಡವನ್ನು ಸ್ವದೇಶಿ ನೆಲದಲ್ಲಿ ಸೋಲಿಸುವುದು ನಂಬರ್ 1 ರ್‍ಯಾಂಕಿಂಗ್ ಪಟ್ಟ ಹೊತ್ತ ತಂಡಕ್ಕೆ ಕಷ್ಟಕರವಾಗಿರಬೇಕಾಗಿರಲಿಲ್ಲ. ಟೆಸ್ಟ್ ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಭಾರತ ಗೆಲುವಿಗಾಗಿ ತಿಣುಕಾಡಿದ ಪರಿ ನೋಡಿದರೆ ಈ ನಂಬರ್ 1 ಪಟ್ಟ ಕೇವಲ ಕಾರ್ಪೋರೇಟ್ ಕಂಪೆನಿಗಳ ಬೂಟಾಟಿಕೆಯ ಮುಖವಾಡವೇ ಎಂಬ ಸಂಶಯ ಕ್ರೀಡಾಪ್ರೇಮಿಗಳಲ್ಲಿ ಉದ್ಭವಿಸಿದ್ದು ಸಹಜ. ನೀರಸ ಪಿಚ್‌ಗಳಲ್ಲಿ ಭಾರತದ ಸ್ಪಿನ್ ಪಡೆ ಹೆಚ್ಚಿನ ಮೋಡಿಯನ್ನೇನು ಮಾಡದ್ದರಿಂದ ಎದುರಾಳಿ ತಂಡದ 20 ವಿಕೆಟ್‌ಗಳನ್ನು ಕೀಳಲು ನಂಬರ್ 1 ತಂಡಕ್ಕೆ ಸಾಧ್ಯವಾಗಲಿಲ್ಲ ಎಂಬುದೂ ಗಮನಾರ್ಹ ವಿಚಾರವೇ. ಇದರರ್ಥ ಭಾರತ ಕಳಪೆ ತಂಡವೆಂದಲ್ಲ, ಸಮಕಾಲೀನ ಕ್ರಿಕೆಟ್ ಸಂದರ್ಭದಲ್ಲಿ ಭಾರತ ಒಂದು ಸದೃಢವಾದ ತಂಡವೆಂಬುದೂ ನಿಜವೇ. ಆದರೆ ಸ್ವದೇಶಿ ನೆಲದಲ್ಲಿ ಬ್ಯಾಟಿಂಗ್ ಸದೃಢವಾಗಿದೆಯಾದರೂ, ಪುಟಿದೇಳುವ ವಿದೇಶಿ ನೆಲದಲ್ಲಿ ಇವರು ಹೇಗೆ ಆಡುತ್ತಾರೆ ಎಂಬುದನ್ನು ಕಾಲವೇ ನಿರ್ಧರಿಸಬೇಕು.

ಯಾವುದೇ ತಂಡಕ್ಕೆ ಪಂದ್ಯ ಗೆದ್ದುಕೊಡುವ ನಿರ್ಣಾಯಕ ಶಕ್ತಿ ನೀಡುವುದು ಅದರ ಬೌಲಿಂಗ್ ಸಂಘಟನೆ ಹಾಗೂ ದಾಳಿ. ನಮ್ಮ ಬೌಲಿಂಗ್ ವಿಭಾಗವನ್ನು ಗಮನಿಸಿದರೆ ಇದೊಂದು ಅತ್ಯುತ್ತಮ ತಂಡಗಳಲ್ಲೊಂದಾಗಿದ್ದರೂ, ಸಾರ್ವಕಾಲಿಕ ಶ್ರೇಷ್ಠ ತಂಡ ನಮ್ಮದಲ್ಲ ಎಂಬುದು ಸ್ಪಷ್ಟವಾಗುತ್ತದೆ. ಒಂದು ಸಾರ್ವಕಾಲಿಕ ಶ್ರೇಷ್ಠ ತಂಡಕ್ಕೆ ಯಾವುದೇ ಪಿಚ್ - ಪರಿಸ್ಥಿತಿಯಲ್ಲೂ 20 ವಿಕೆಟ್ ಕಿತ್ತು ಎದುರಾಳಿಗಳನ್ನು ಸದೆ ಬಡಿಯುವ ಸಾಮರ್ಥ್ಯವಿರಬೇಕು. ಎದುರಾಳಿ ಬ್ಯಾಟ್ಸ್‌ಮನ್‌ಗಳೂ ಕೂಡಾ ಈ ಆಕ್ರಮಣಕಾರಿ ಬೌಲಿಂಗ್ ದಾಳಿಯನ್ನು ಹೇಗೆ ಎದುರಿಸಬೇಕು? ಎನ್ನುವ ಮಾನಸಿಕ ತೊಳಲಾಟದಲ್ಲಿ ಇರುವಂತೆ ಮಾಡುವ ಸಾಮರ್ಥ್ಯ ಬೌಲಿಂಗ್ ದಾಳಿಗಿರಬೇಕಾಗುತ್ತದೆ. 1970-80ರ ದಶಕದ ಕ್ಲೈವ್‌ಲಾಯ್ಡ್‌ನ ವೆಸ್ಟಿಂಡೀಸ್ ಪಡೆಗೆ ಇದ್ದ ದೊಡ್ಡ ಅಸ್ತ್ರವೇ ಅದರ ಕೋರೈಸುವ ವೇಗಿಗಳ ದಂಡು. ರಾಬರ್ಟ್ಸ್, ಹೋಲ್ಡಿಂಗ್, ಗಾರ್ನರ್, ಕ್ರಾಫ್ಟ್ ಹಾಗೂ ಮಾರ್ಷಲ್‌ರನ್ನು ಎದುರಿಸುವುದು ಯಾವುದೇ ಬ್ಯಾಟ್ಸ್‌ಮನ್‌ಗೆ ಸುಲಭವಾಗಿಲ್ಲದಿದ್ದರಿಂದಲೇ ಲಾಯ್ಡ್ ಪಡೆ 15-20 ವರ್ಷಗಳ ಕಾಲ ಅನಭಿಷಿಕ್ತ ಸಾಮ್ರಾಟರಾಗಿ ಮೆರೆಯಿತು. 1990 ದಶಕದ ಆಸ್ಟ್ರೇಲಿಯಾದ ಬೌಲಿಂಗ್ ದಾಳಿಗೂ ಈ ರೀತಿಯ ಮೊನಚು ಹಾಗೂ ಪೆನಿಟ್ರೇಶನ್ ಶಕ್ತಿ ಇತ್ತು, ಮುಖ್ಯವಾಗಿ ಮೆಗ್‌ಗ್ರಾಥ್ ಹಾಗೂ ಶೇನ್‌ವಾರ್ನ್ ಯಾವುದೇ ಪರಿಸ್ಥಿತಿಯಲ್ಲೂ ತಂಡವನ್ನು ವಿಜಯದ ಕಡೆಗೆ ಕೊಂಡೊಯ್ಯುತ್ತಿದ್ದರು. ಉದಾಹರಣೆಗೆ: 2006ರಲ್ಲಿ ಇಂಗ್ಲೆಂಡ್ ಅಡಿಲೆಡ್ ಓವೆಲ್ ಟೆಸ್ಟ್‌ನಲ್ಲಿ ಮೊದಲ ಇನ್ನಿಂಗ್ಸ್‌ನಲ್ಲಿ 520 ರನ್ ಗಳಿಸಿದರೂ ಶೇನ್ ವಾರ್ನ್ 2ನೇ ಇನ್ನಿಂಗ್ಸ್‌ನಲ್ಲಿ ಅಸಾಮಾನ್ಯ ಬೌಲಿಂಗ್ ಮಾಡಿ ತಂಡಕ್ಕೆ ಜಯ ತಂದಿಟ್ಟದ್ದು ಇನ್ನೂ ಮನಸ್ಸಿನಲ್ಲಿ ಹಸಿರಾಗಿಯೇ ಇದೆ. ಆ ಕಾಲದ ವಿಂಡೀಸ್ ತಂಡದ ಬೌಲಿಂಗ್ ಬಗ್ಗೆಯೂ ಇಂತಹುದೇ ನೂರಾರು ದಂತಕತೆಗಳಿವೆ. ಈ ಹಿನ್ನಲೆಯಲ್ಲಿ ಈಗಿನ ಭಾರತದ ಬೌಲಿಂಗ್ ದಾಳಿಯನ್ನು ಕುರಿತು ಈ ಮಾತುಗಳನ್ನು ಹೇಳುವುದು ಸ್ವಲ್ಪ ಕಷ್ಟವೇ ಸರಿ.



ವಯಸ್ಸಾಗುತ್ತಿರುವ ಜಾಹಿರ್‌ಖಾನ್ ಹೊರತುಪಡಿಸಿದರೆ ಉಳಿದಿರುವ ಶರ್ಮಾ-ನೆಹರಾ-ಶ್ರೀಶಾಂತ್ ಯಾವಾಗ ಫಾರ್ಮ್ ಹಾಗೂ ಫಿಟ್‌ನೆಸ್ ಕಳೆದುಕೊಳ್ಳುತ್ತಾರೆ ಎಂದು ಹೇಳುವುದು ಕಷ್ಟ. **Fast bowlers always hunt in pairs** ಎಂಬುದು ಹಳೆಯ ನಾಣ್ಣುಡಿ. ಆದರೆ, ಈಗಿನ ನಮ್ಮ ತಂಡದಲ್ಲಿ ಕನ್ಸಿಸ್ಟೆಂಟ್ ಆಗಿ ವಿಕೆಟ್ ಬೇಟೆಯಾಡುವ ಹಾಗೂ ಎದುರಾಳಿಗಳ ಮನಸ್ಸಿನಲ್ಲಿ ಹೆದರಿಕೆ ಹುಟ್ಟಿಸುವ ವೇಗಿಗಳ ಜೋಡಿ ನಮ್ಮಲ್ಲಿಲ್ಲ. ಇನ್ನು ಸ್ಪಿನ್ ವಿಭಾಗದಲ್ಲೂ ಇದೇ ಕತೆ. ಕುಂಬ್ಳೆ ನಂತರ ಸ್ಪಿನ್ ದಾಳಿಯ ನೇತೃತ್ವ ವಹಿಸಿರುವ ಹರ್ಭಜನ್‌ಸಿಂಗ್ ಇತ್ತೀಚೆಗೆ ಹೆಚ್ಚಿನದ್ದೇನೂ ಸಾಧಿಸಿದಂತಿಲ್ಲ. ಈತ ವಿದೇಶಿ ನೆಲದಲ್ಲಿ ಎಷ್ಟರಮಟ್ಟಿಗೆ ಪಂದ್ಯ ಗೆದ್ದುಕೊಡುವ ಬೌಲರ್ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಪ್ರಜ್ಞಾನ್ ಓಜಾ ಇನ್ನೂ ಅನನುಭವಿ. ಒಟ್ಟಿನಲ್ಲಿ ಹೇಳುವುದಾದರೆ ಭಾರತದ ಬೌಲಿಂಗ್ ಬೌಲರ್‌ಗಳಿಗೆ ನೆರವಾಗುವ ಪಿಚ್ ಇಲ್ಲದಿದ್ದರೆ ತನ್ನ ಮೊನಚನ್ನು ಕಳೆದುಕೊಳ್ಳುವುದು ಶತಸಿದ್ಧ. ಈ ಮಾತು ಎಲ್ಲಾ ತಂಡಗಳಿಗೂ ಅನ್ವಯಿಸುವುದಾದರೂ, ನಂಬರ್ 1 ಪಟ್ಟ ಹೊಂದಿದ ನಮ್ಮ ತಂಡಕ್ಕೆ ಇದು ಹೆಚ್ಚು ಅನ್ವಯಿಸುತ್ತದೆ. ಹಾಗೆಯೇ ಎದುರಾಳಿ ಬ್ಯಾಟ್ಸ್‌ಮನ್‌ಗಳಿಗೆ ನಿದ್ದೆಕೆಡಿಸುವಂತಹ ಆಕ್ರಮಣಕಾರಿ ಬೌಲಿಂಗ್ ಕೂಡ ನಮ್ಮದ್ದಲ್ಲ. ಆದ್ದರಿಂದಲೇ ಭಾರತ ನಂಬರ್ 1 ರ್‍ಯಾಂಕಿಂಗ್ ತಂಡವೆನ್ನುವುದು ಹಾಗೂ ಸದ್ಯಕ್ಕೆ ಅತ್ಯುತ್ತಮ ತಂಡಗಳಲ್ಲೊಂದಾದುದು ನಿಜವಾದರೂ ಇದನ್ನೇ ಸಾರ್ವಕಾಲಿಕ ಶ್ರೇಷ್ಠ ತಂಡ ಎಂದು ಹೇಳುವಂತಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಭಾರತ, ಇಂಗ್ಲೆಂಡ್ ಹಾಗೂ ದಕ್ಷಿಣಾ ಆಫ್ರಿಕಾ ಹೆಚ್ಚು ಕಡಿಮೆ ಒಂದೇ ಬಗೆಯ ಸಾಮರ್ಥ್ಯ ಪಡೆದಿದೆ.



ಇನ್ನು ಡಿಸೆಂಬರ್ 16 ರಿಂದ ಪ್ರಾರಂಭವಾಗುವ ದಕ್ಷಿಣ ಆಫ್ರಿಕಾ ವಿರುದ್ಧದ ಅತ್ಯಂತ ಮಹತ್ವದ ಟೆಸ್ಟ್ ಸರಣಿಯನ್ನು ಭಾರತ ಗೆಲ್ಲುವುದೇ ಎಂಬ ಪ್ರಶ್ನೆ ಕ್ರೀಡಾಪ್ರೇಮಿಗಳನ್ನು ಕಾಡುತ್ತಿದೆ. ಗೆಲ್ಲಲಿ-ಬಿಡಲಿ; ಭಾರತವಂತೂ ಹಿಂದೆಂದಿಗಿಂತಲೂ ಹೆಚ್ಚಿನ ಆತ್ಮವಿಶ್ವಾಸ ಹಾಗೂ ಭರವಸೆಯೊಂದಿಗೆ ಆಫ್ರಿಕಾ ಖಂಡಕ್ಕೆ ಪ್ರಯಾಣಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಫಾರ್ಮ್‌ನಲ್ಲಿರುವ ನಮ್ಮ ಅನುಭವಿ ಬ್ಯಾಟಿಂಗ್ ಪಡೆ ಹಾಗೂ ಜಾಹೀರ್ ಖಾನ್ ನೇತೃತ್ವದ ಮಧ್ಯಮ ವೇಗಿಗಳು ಈ ಬಾರಿ ಇಪ್ಪತ್ತು ವಿಕೆಟ್ ಕೀಳುವ ಸಾಮರ್ಥ್ಯ ಪಡೆದಿದ್ದಾರೆ ಎಂಬ ಆಶಾಭಾವನೆ. ತಂಡದ ಕೋಚ್ ಆಫ್ರಿಕಾದವನೇ ಆದ ಗ್ಯಾರಿ ಕರ್ಸ್ಟನ್ ಆಗಿರುವುದರಿಂದ ಆಫ್ರಿಕಾದ ವೀಕ್‌ನೆಸ್‌ಗಳನ್ನು ಈ ಬಾರಿ ನಮ್ಮ ತಂಡ ಚೆನ್ನಾಗಿ ಉಪಯೋಗಿಸಿಕೊಳ್ಳಬಹುದು ಎಂಬ ಆಶಾಭಾವನೆಯೂ ಮೀಮಾಂಸಕರಲ್ಲಿದೆ. ಆದರೆ ಕಾಗದದ ಮೇಲೆ ಹೇಳಿದಷ್ಟು ಈ ಸರಣಿ ಗೆಲುವು ಸುಲಭವೇನಲ್ಲ. ಸ್ವತಃ ನಾಯಕ ದೋನಿ ಹಾಗೂ ಕೋಚ್ ಕರ್ಸ್ಟನ್‌ಗೂ ಇದರ ಅರಿವಿದೆ.

ಏಕೆಂದರೆ, ಮೊದಲನೆಯದಾಗಿ ಭಾರತದ ಬ್ಯಾಟ್ಸ್‌ಮನ್‌ಗಳು ಪುಟಿದೇಳುವ ಬೌನ್ಸಿ ಅಂಕಣಗಳಲ್ಲಿ ತಮ್ಮ ಬ್ಯಾಟಿಂಗ್ ಸಾಮರ್ಥ್ಯ ತೋರಬೇಕು. ತಲೆತಲಾಂತರದಿಂದ ಶಾರ್ಟ್‌ಪಿಚ್ ಬೌಲಿಂಗನ್ನು ನಮ್ಮ ಬ್ಯಾಟ್ಸ್‌ಮನ್‌ಗಳು ಎದುರಿಸುವಲ್ಲಿ ವಿಫಲವಾಗಿರುವ ಇತಿಹಾಸವಿರುವುದರಿಂದ ಪ್ರಾಯಶಃ ಆಫ್ರಿಕಾ ತಂಡ ಬೌನ್ಸಿ ವಿಕೆಟ್‌ಗಳನ್ನೇ ತಯಾರಿಸಬಹುದು. ನಮ್ಮ ಯುವ ಪಡೆಯಂತೂ ನಿಜವಾದ ವೇಗದ ಬೌಲಿಂಗ್ ಎದುರು ಸಂಪೂರ್ಣ ಸೋತು ಶರಣಾಗಿರುವುದರಿಂದ ಅನುಭವಿ ಆಟಗಾರರಾದ ಸೆಹ್‌ವಾಗ್, ಗಂಭೀರ್, ದ್ರಾವಿಡ್, ತೆಂಡೂಲ್ಕರ್ ಹಾಗೂ ಲಕ್ಷ್ಮಣ್ ಮೇಲೆ ಹೆಚ್ಚಿನ ಒತ್ತಡ ಬಿದ್ದೇ ಬೀಳುತ್ತದೆ. ಇವರು ಬಾರಿ ಮೊತ್ತವನ್ನು ಪೇರಿಸಿದರೆ ಮಾತ್ರ ಬೌಲರ್‌ಗಳಿಗೆ ಒತ್ತಡ ಕಡಿಮೆಯಾಗುತ್ತದೆ. ಮುಖ್ಯವಾಗಿ ಡೇಲ್‌ಸ್ಟೈನ್ ಹಾಗೂ ಮಾನಿ ಮಾರ್ಕೆಲ್‌ರ ಆರಂಭಿಕ ದಾಳಿಯನ್ನು ಭಾರತ ಸಮರ್ಥವಾಗಿ ಎದುರಿಸಿದರೆ ಉಳಿದ ಬ್ಯಾಟ್ಸ್‌ಮನ್‌ಗಳಿಗೆ ಅನುಕೂಲವಾಗುವುದು. ಪ್ರಮುಖ ಬ್ಯಾಟ್ಸ್‌ಮನ್‌ಗಳು ತಮ್ಮ ತಾಂತ್ರಿಕ ಕೌಶಲ್ಯವನ್ನು ತೋರಿಸಿ ಒತ್ತಡವಿಲ್ಲದೆ ಆಟವಾಡಬೇಕಾಗುತ್ತದೆ. ಈ ಮಾತು ಏಕೆಂದರೆ ಕಳೆದ ಸರಣಿಯಲ್ಲಿ ತೆಂಡೂಲ್ಕರ್ ಬಹಳ ಸಾಮಾನ್ಯ ಸ್ಪಿನ್ನರ್ ಆಗಿದ್ದ ಪಾಲ್ ಹ್ಯಾರಿಸ್‌ನನ್ನು ವಿಪರೀತ ಎಚ್ಚರಿಕೆಯಿಂದ ಆಡಿ ತಂಡವನ್ನು ಬಾರೀ ಒತ್ತಡಕ್ಕೆ ನೂಕಿದ್ದ. ಈ ಬಾರಿ ಈ ತರಹದ ಒತ್ತಡ ನಿರ್ಮಾಣವಾಗಬಾರದೆಂಬ ಎಚ್ಚರ ಭಾರತದ ಅನುಭವಿಪಡೆಗಿರಬೇಕಾಗುತ್ತದೆ. ಇಲ್ಲದಿದ್ದರೆ ಭಾರತದಂತೆಯೇ ಪ್ರಬಲವಾದ ಜಾಕ್‌ಕಾಲೀಸ್, ಹಶೀಮ್ ಆಮ್ಲಾ ನೇತೃತ್ವದ ಆಫ್ರಿಕಾದ ಬ್ಯಾಟಿಂಗ್ ಪಡೆ ಕೂಡ ದೊಡ್ಡಮೊತ್ತವನ್ನು ಪೇರಿಸಿ ನಮ್ಮ ಬೌಲರ್‌ಗಳಿಗೆ ತಲೆನೋವು ತರುತ್ತದೆ.

ಭಾರತಕ್ಕೆ ಈ ಬಾರಿ ಆಶಾಭಾವನೆ ಹೆಚ್ಚಾಗಲು ಇನ್ನೂ ಒಂದು ಕಾರಣವಿದೆ. ಟೀವಿ ನೇರ ಪ್ರಸಾರದ ದೆಸೆಯಿಂದ ಈಗ ಪ್ರಪಂಚದಾದ್ಯಂತ ಪಿಚ್‌ಗಳು ಬಹುತೇಕ ಬ್ಯಾಟ್ಸ್‌ಮನ್ ಸ್ನೇಹಿಯಾಗಿರುತ್ತದೆ (ಐದು ದಿನವೂ ಆಟ ನಡೆದು ತಮಗೆ ಜಾಹೀರಾತಿನ ಸಮಯ ಹೆಚ್ಚು ಸಿಗಲಿ ಎಂಬ ಕುತರ್ಕ). ಇದಕ್ಕೆ ಆಫ್ರಿಕಾ ಕೂಡ ಹೊರತಲ್ಲ, ಹಾಗೆಯೇ ಆಫ್ರಿಕಾದ ಬೌಲಿಂಗ್ ದಾಳಿಗೆ ಅಲನ್ ಡೊನಾಲ್ಡ್, ಶಾನ್ ಪೊಲ್ಲಾಕ್ ಹಾಗೂ ಮಕಾಯ ಎಂಟೀನಿ ಯವರ ನಿವೃತ್ತಿಯ ನಂತರ ವಿಕೆಟ್ ಕೀಳುವ ಸಾಮರ್ಥ್ಯ ಕಡಿಮೆ ಯಾಗಿದೆ. ಮೊನ್ನೆ ತಾನೇ ಪಾಕಿಸ್ತಾನದ ವಿರುದ್ಧದ ಸರಣಿಯಲ್ಲಿ ಬೌಲರ್‌ಗಳು 20 ವಿಕೆಟ್ ಕೀಳಲು ಪರದಾಡಿಬಿಟ್ಟರು. ಇದು ಭಾರತಕ್ಕೆ ವರವಾಗಬಹುದು.

ಗೆಲುವು ಯಾರ ಪರವಾಗಿದ್ದರೂ, ಆಫ್ರಿಕಾ-ಭಾರತದ ನಡುವಣ ಸರಣಿ ಭಾರೀ ಕುತೂಹಲವನ್ನಂತೂ ಮೂಡಿಸಿದೆ. ಒಂದು ಕಡೆ ಬಲ ಕಳೆದುಕೊಂಡ ಆಸ್ಟ್ರೇಲಿಯಾ ಇಂಗ್ಲೆಂಡ್ ವಿರುದ್ಧ ಹೀನಾಯಕಾರಿ ಸೋಲನ್ನನುಭವಿಸುತ್ತಿದ್ದಂತೆ ನಂಬರ್ 1 ಹಾಗೂ 2 ಪಟ್ಟಕ್ಕಾಗಿ ಆಫ್ರಿಕಾ-ಭಾರತದ ನಡುವಿನ ಭಾರೀ ಪೈಪೋಟಿಯ ಸರಣಿ ಪ್ರೇಕ್ಷಕರ ಕುತೂಹಲವನ್ನು ಹಿಡಿದಿಡುವುದು ಖಚಿತ.

● ಟಿ. ಅವಿನಾಶ್

ಮತಾಂಧತೆಯ ಮಲದಲ್ಲಿ ನಿರಂತರ ಪ್ರತಾಪ!

ಮತಾಂಧತೆಯ ಮನಸ್ಥಿತಿ ಯಾವ ಧರ್ಮದಲ್ಲಿ ಹರಳುಗಟ್ಟಿದರೂ ಅಪಾಯವೇ. ಅಂತಹುದೊಂದು ಅಪಾಯವನ್ನ ಆಪಾದಮಸ್ತಕ ಹೊದ್ದುಕೊಂಡು ಅದನ್ನೇ ಹರಡಲೆತ್ನಿಸುತ್ತಿರುವವನು ಪ್ರತಾಪ ಸಿಂಹ. ಈತನ ಬರವಣಿಗೆಗಳ ಪ್ರಮುಖ ಆದ್ಯತೆ ಧರ್ಮ ಹಾಗೂ ದಗಲ್ಬಾಜಿಗಳೇ ಹೊರತು, ಸಾಮಾಜಿಕ ಕಾಳಜಿಯಲ್ಲ. ಹೀಗೆ ಮತಾಂಧತೆಯ ಮಲದಲ್ಲಿ ಉಳ್ಳಾಡುತ್ತಾ ಅದನ್ನೇ ಅಕ್ಷರವಾಗಿಸುವ ಸಿಂಹ ಪ್ರತೀವಾರ 'ಬೆತ್ತಲೆ ಜಗತ್ತು' ತುಂಬಿಸುತ್ತಾನೆ. ಹಿಂದುತ್ವದ ಹೊರತಾಗಿ ಆಲೋಚಿಸುವ ಶಕ್ತಿಯೇ ಇಲ್ಲದ ಈತ ಒಂದಷ್ಟು ಜನಪರವಾಗಿ ವರ್ತಿಸುವ ಅನೇಕರನ್ನ ತಡವಿಕೊಳ್ಳುತ್ತಾನೆ. ಇಂಥಾ ತೆವಲಿಗೆ ಅನಂತಮೂರ್ತಿ, ಚಂಪಾ ಮೊದಲಾದವರನ್ನೆಲ್ಲಾ ತಿವಿದು ವಿಕೃತಾನಂದ ಅನುಭವಿಸಿದ್ದಾನೆ. ಇಂಥವನಿಗೆ ನರಹಂತಕ ನರೇಂದ್ರ ಮೋದಿ ತುಳಿದ, ಯಾರೂ ನಡೆಯಬಾರದ ಹಾದಿ ಯಾರೂ ನಡೆಯದ, ನಡೆಯಲಾರದ ಅದ್ಭುತವೆನ್ನಿಸುತ್ತದೆ. ಸಾಮರಸ್ಯ ಕಂಡರೆ ಕರುಳಿಗೆ ಸೂಜಿ ಚುಚ್ಚಿದಂತೆ ಒದ್ದಾಡುವ ಸಿಂಹ ಅದಕ್ಕಾಗಿ ಹಂಬಲಿಸುವವರನ್ನೆಲ್ಲ ದೇಶದ್ರೋಹಿಗಳಂತೆ ಬಿಂಬಿಸುತ್ತಾನೆ. ಇವನ ಪಾಲಿಗೆ ಮುಸ್ಲಿಮರೆಲ್ಲ ಸಾರಾಸಗಟಾಗಿ ಭಯೋತ್ಪಾದಕರು ಮತ್ತು ಕ್ರಿಸ್ಚಿಯನ್ನರೆಂದರೆ ಮತಾಂತರ ನಡೆಸುವವರು! ಇನ್ನು ಸಂಘ ಪರಿವಾರದ ಲಾಡಿ ಅಮಾಯಕರ ಬುಡಕ್ಕೆ ಹೆಟ್ಟಿಕೊಂಡರೂ ಪ್ರತಾಪನ ಪಾಲಿಗದೇ ಕ್ರಾಂತಿ!

ಇಂಥಾ ಸಿಂಹ ಸಂಘಪರಿವಾರಕ್ಕಾದರೂ ನಿಷ್ಠನಾಗಿದ್ದಾನಾ ಅಂತ ನೋಡಹೋದರೆ, ಈತನ ಸಕಲ ನಿಷ್ಠೆಗಳೂ ಮುದಿ ಸಂಘಿಯ ಸೊಂಟದಲ್ಲಿ ನಿಲ್ಲಲಾರದ ಚೆಡ್ಡಿಯಂತೆಯೇ ಚಂಚಲ! ಇದಕ್ಕೆ ಈಗ್ಗೆ ನಾಲ್ಕೈದು ವರ್ಷಗಳ ಹಿಂದೆ ನಡೆದೊಂದು ಘಟನೆ ಪಕ್ಕಾ ಉದಾಹರಣೆ.

ಈಗ ಕೈ ತುಂಬಾ ಕಾಸೆಣಿಸುತ್ತಿರುವ ಪ್ರತಾಪ ಆಗ ಶುದ್ಧ ಅಬ್ಬೇಪಾರಿ. ಅವರಿವರ ಮನೆಯಲ್ಲಿ ಠಾವು ಹುಡುಕಿಕೊಂಡಿದ್ದವನು. ಅಂಥಾ ಸಂದರ್ಭದಲ್ಲಿ ಅನಾರೋಗ್ಯಗೊಂಡ ಸಿಂಹ ಬಿದ್ದುಕೊಳ್ಳಲೊಂದು ಜಾಗದ ತಲಾಷಿನಲ್ಲಿದ್ದ. ಅದರನ್ವಯ ಕೇಶವ ಕೃಪಾಕ್ಕೆ ಬಂದವನೇ ಜಾಗ ಕೊಡುವಂತೆ ವಿನಂತಿಸಿಕೊಂಡ. ಕೇಶವ ಕೃಪಾದ ಮಂದಿಗೆ ಈತನ ಮೇಲೆ ಎಂಥಾ ಸಿಟ್ಟಿತ್ತೋ ಅಂತೂ ಧೂಳು ತುಂಬಿದ ಕೋಣೆಯೊಂದನ್ನು ತೋರಿಸಿದರು.

ಇದರಿಂದ ಅವಮಾನಿತನಾಗಿ ಸ್ನೇಹಿತನೊಬ್ಬನ ಮನೇಲಿ ಸುಧಾರಿಸಿಕೊಂಡು ಬಂದ ಸಿಂಹ ಸಂಘದ ವಿರುದ್ಧವೇ ತೆಳುವಾಗಿ ಕುಟುಕುಲಾರಂಭಿಸಿದ! ಇದು ಆತನ ನಿಷ್ಠೆಗೊಂದು ಸ್ಯಾಂಪಲ್ ಅಷ್ಟೇ.

ಇಂಥ ಬರಗೆಟ್ಟ ಪ್ರತಾಪ ಸಂವೇದನೆಗಳನ್ನೇ ಕಳೆದುಕೊಂಡಿದ್ದಾನೆ. ಹಿಂದೂ ಸಮುದಾಯದ ಅನೇಕರು ಹೊತ್ತಿನ ತುತ್ತಿಗೂ ಪರದಾಡುತ್ತಿದ್ದರೆ ಇವನಿಗದು ಯಾವ ಭಾವವನ್ನೂ ಹುಟ್ಟಿಸುವುದಿಲ್ಲ. ಆದರೆ ಧರ್ಮ-ದೇವರ ಹೆಸರಲ್ಲಿ ಬೆಂಕಿ ಹಚ್ಚಲು ತುದಿಗಾಲಲ್ಲಿ ನಿಲ್ಲುತ್ತಾನೆ.

ಇದು ಪ್ರತಾಪ ಸಿಂಹನ ನಿಜವಾದ ಬಣ್ಣ...



ಸಂತೆಶಿವರದ ಭೈರಪ್ಪ ಗುಜರಾತಿಗೆ ಗಂಟುಮೂಟೆ ಕಟ್ಟ್ತನಂತೆ!

ಪಂಚಾಯ್ತಿ ಆಫೀಸಿನಲ್ಲಿ ನಡೆದ ಚರ್ಚೆಯನ್ನು ಹೋಟೆಲಿನಲ್ಲೂ ಮುಂದುವರಿಸಿದ ಜುಮ್ಮಿ ಗಡ್‌ಕರಿ ಹೆಸರನ್ನು ಜ್ಞಾಪಿಸಿಕೊಳ್ಳುತ್ತಾ

"ಅವುನ್ಯಾರೋ ಗುಡಗೇರಿ ಅನ್ನೋನು ಬಂದು ಎಡೂರಪ್ಪನ್ನ ಹೊಗಳಿ ಅಟ್ಟಕೇರಿಸಿದನಂತಲ್ಲಾ ಉಗ್ರಿ?" ಅಂದಳು.

"ಏ, ಆವನು ಗಡ್ಕರಿ ಅಂತ ಕಣೆ. ಬಿಜೆಪಿ ಅಧ್ಯಕ್ಷ. ಹನುಮ ಆಗಟ್ರು ಶ್ರೀನಾಥನಂಗೆ ಕಾಣ್ತನೆ. ಆದ್ರು ಒಂಥರಾ ಕೆಟ್ಟಿದ್ದಂಗವುನೆ. ಅವುನು ಬಂದು ಎಡೂರಪ್ಪನಿಗೆ ಬುದ್ಧಿ

ಬಯಲುಸೀಮೆ

ಕಟ್ಟೆಪುರಾಣ

ಬಿ. ಚಂದ್ರೇಗೌಡ

ಹೇಳ್ತನೆ ಅಂತ ಯಲ್ಲ ಕಾದಿದ್ರು. ಆದರೆ ಎಡೂರಪ್ಪನಂಥ ಮುಖ್ಯಮಂತ್ರಿನೇಯಿಲ್ಲ, ಮುಂದೂ ಅವುನೇ ಇರತನೆ, ಅವುನಿಗೆ ಹೊಂದಿಕಂಡೋಗಿ ಅಂತ ಹೇಳಿಬುಟ್ಟೋದ."

"ಎಡೂರಪ್ಪನ ಕ್ಯಲಸ ನೋಡಿ ಅಂಗ್ಯಾಕಂದ ಅವುನು?" ಅಂದ ಸೀರ.

"ಈ ಗಡಕರಿ ಅನ್ನೋನು ಕೋಟ್ಯಾಂತರುಪಾಯಿ ಖರ್ಚು ಮಾಡಿ ಮಗನ ಮದುವೆ ಮಾಡಿದನಂತೆ ಕಣಮಾವ. ಆ ಮದುವಿಗೆ ಎಡೂರಪ್ಪ ದುಡ್ಡು ಕೊಟ್ನಂತೆ. ಅದ್ಕೆ ಅವುನು ಬಂದು ಹಿಗ್ಗಾಮುಗ್ಗ ಹೊಗಳಿಬುಟ್ಟಿ ಹೋದನಂತೆ."

"ತಗ್ಗಳಪ್ಪ. ಅಂಗರೆ ಮುಯ್ಯಾಕಿದ ರುಣ ತೀರಿಸಿಬುಟ್ಟೊದ ಅನ್ನು" ಎಂದ ಸೀರ.

"ಕೋಟ್ಯಾಂತ್ರುಪಾಯ ಮುಯ್ಯಿ ಅಂತೀಯಲ್ಲೊ."

"ಇನ್ನೇನನ್ನ ಕಾದತ್ಲ? ಇವುನು ಅವುನ ಮಗನ ಮದಿವಿಗೋಗಿ ಮುಯ್ಯಾಕ್ತನೆ. ಅವನು ಬಂದು ಬೇಸ್ ಕಣಯ್ಯ, ನಿನ್ನಂಥೋನಿಲ್ಲ ಅಂತನೆ. ಅಲ್ಲಾ ಎಡೂರಪ್ಪನಂಥೋನ್ನು ಹೊಗಳತನೆ ಅಂದ್ರೆ ಅವುನಿನ್ನಂಥಾ ಮನುಸ ಲ್ಯಕ್ಕ ಹಾಕು."

"ನೋಡು ಮತ್ತೆ, ಇಡೀ ಬಿಜೆಪಿನೆ ಗಡಕರಿಯಂಗಿದ್ರೆ ಈ ಎಡೂರಪ್ಪನ್ನ ಯಾವನಾರ ಅಳ್ಳಾಡಸಕ್ಯಾಗತೇನೊ?"

"ಆಗದಿಲ್ಲ ಬುಡು. ಸುಮ್ಮನೆ ಇವು ಮುಕಳರಿಯ ಕಿರಿಚದ್ದೆ ಬತ್ತು."

"ಕಿರಿಚಿ ಕಿರಿಚಿ ಸುಮ್ಮನಾಗ್ಯೋದ್ರಪ್ಪ ಅತ್ತಗೆ. ನೀನ್ಯಾವುದು ಸರಿ ಅಂತಿಯೋ ಆದ ಬಿಜೆಪಿಗಳು ತಪ್ಪು ಅಂತವೆ. ನೀನ್ಯಾವುದು ಅಕ್ರಮ ಅಂತಿಯೋ ಅದ ಸಕ್ರಮ ಅಂತವೆ. ಕ್ಯಂಗಲ್ ಹನುಮಂತಯ್ಯ ಕಟ್ಟಿರೋ ವಿಧಾನಸೌಧಕಿಂತ ಸುತ್ತೂರು ಮಠ ಚನ್ನಾಗ್ಯದೆ ಅಂತವೆ. ಕೋರ್ಟುಗಳು ಕೂಡ ಅವುರ ಪರವಾಗೇ ತೀರ್ಪು ಕೊಟ್ರೆ ಒಪ್ಪಿಗತ್ತವೆ. ಸಂವಿಧಾನ ಸರಿಯಾಗಿಲ್ಲ ಅದಕೊಂದು ದಾರಕಟ್ಟಬೇಕು ಅಂತವೆ. ಈ ಬಿಜೆಪಿಗಳು ಆಡಳತ ಮಾಡಕ್ಕೆ ಅಯೋಗ್ಯರು ಕಣಮಾವ. ಅದೂ ಹೋಗ್ಲಿ, ಬಿಜೆಪಿಗಳೇನೊ ಅಂಗವೆ ಅಂತ ಅನ್ನಕೋದ್ರೆ, ಆ ಸಂತೆ ಶಿವರದ ಭೈರಪ್ಪನಿಗೇನಾಗ್ಯದಪ್ಪ? ಅವುನೂ ತಲಿಕಟ್ಟಂಗೆ ಮಾತಾಡ್ತನೆ."

"ಅವುನೇನು ಮಾತಾಡಿದ್ದನ್ಲ?"

"ಕರ್ನಾಟಕದವ್ಕಲ್ಲ ತರ್ಲೆಗಳು, ಗುಜರಾತಿನ ಜನ ತುಂಬಾ ವಳ್ಳೆ ಜನ, ಅವುರ ನೋಡಿ ಕಲಿಬೇಕು, ಅದರಲ್ಲೂ ಮುಖ್ಯಮಂತ್ರಿ ಮೋದಿಯಂಥೋನು ಈ ದೇಸದಲ್ಲೇ ಇಲ್ಲ, ನಾವು ಅಂಥೊನೊಬ್ಬನ್ನ ತಯಾರು ಮಾಡಕ್ಯಾಗಲಿಲ್ಲ ಅಂತ ಆಡಿಕಂಡವುನೆ ಕಣಮಾವ."

"ಭೈರಪ್ಪ ಅಂದ್ರೆ, ತುರುವೇಕ್ಕರೆ ಯಮ್ಮೆಲ್ಲೆ ಆಗಿದ್ದ ಅಲವೇನ್ಲ?" ಎಂದ ಸೀರ.

"ಥೂ, ಅವುನಲ್ಲ ಕಣೊ. ಅವುನಿಗೆ ಅಕ್ಕಪಕ್ಕದ ತಾಲೋಕೇ ಗೊತ್ತಿರಲಿಲ್ಲ. ಅಂಗೆ ಬದುಕಿ ಸತ್ತ. ಇವುನು ಸಂತೆಶಿವರದೋನು. ಶ್ಯಾನುಬಾಗರ ಪೈಕಿ. ಕಂತೆ ಭಿಕ್ಷ ಮಾಡಿ ಓದಿ ಮೈಸೂರಿಗೆ ಸೇರಿಕಂಡು ಬೇಕಾದೋಟು ಕತೆ ಬರದವುನೆ. ಮಾಭಾರತನೂ ಬರದು ಕುಲಗೆಡಿಸಿ ಮಡಿಗ್ಯವುನೆ. ಏನೋ ಬರಕಂಡು ಹಾಳುಬಿದ್ದೊಗ್ಲಿ ಅಂತ ಸುಮ್ಮನಿದ್ರೆ ಅಂದಿರೋ ಮಾತನೋಡು."

"ಅದ್ಯಾಕಂಗನ್ನಕ್ಕೋದ?"

"ಅದ್ಯಾಕೆ ಅಂದ್ರೆ ಕೆಲುವುರು ಹೇಳೋ ಪ್ರಕಾರ ಅವುನಿಗೆ ತಲಿ ಕೆಟ್ಟೊಗ್ಯದಂತೆ. ಇನ್ನ ಕೆಲವರು ಹೇಳೊ ಪ್ರಕಾರ ಮನೆ ರೂಮಿಗ್ಯಲ್ಲ ಬೀಗ ಹಾಯ್ಕಂಡು, ಗೇಟು ಬಾಗಲಾಯ್ಕಂಡು, ಬೀಗದ ಕೈಯ ಚೀಲಕ್ಕೆ ತುಂಬಿಕಂಡು ತಿರುಗ್ತನಂತೆ. ಯಾಕೆ ಅಂದ್ರೆ ಕರ್ನಾಟಕದಲ್ಲಿ ಕಳ್ರು ಜಾಸ್ತಿ ಜನ ಅವುರೆ ಅದ್ಕೆ ಅಂತನಂತೆ. ಅಂತೂ ಕರ್ನಾಟಕದ ಜನ ಅವುನಿಗೆ ಕಳ್ರು, ತರ್ಲೆ ಜನಗಳಂಗೆ ಕಾಣ್ತರೆ. ಅದೇ ಗುಜರಾತಿನ ಜನ ತುಂಬಾ ವಳ್ಳೆ ಜನಗಳಂಗೆ ಕಂಡರಂತೆ."

"ಸರಿ, ಇಲ್ಯಾಕೆ ಇದ್ದಾನೆ, ಗುಜರಾತಿಗೇ ಹೋಗಲೇಳು" ಎಂದ ಸೀರ.

"ಗುಜರಾತಲ್ಲಿ ಇವುನ್ಯಾವ ಲ್ಯಕ್ಕ? ಆದ್ರೂ ಇಲ್ಲಿನ ಅನ್ನ ತಿಂದು ಆಡಿರೊ ಮಾತು ನೋಡು" ಎಂದು ಉಗ್ರಿ ಭೈರಪ್ಪನ ಮಾತನ್ನು ಗಂಭೀರವಾಗಿ ಪರಿಗಣಿಸಿ ಯೋಚಿಸಿದ. ಕಾಳಮಾವ ಒಂದು ನಿಟ್ಟುಸಿರು ಬಿಟ್ಟು,

"ಅಲ್ಲಾ ಕಂಡ್ಯ, ಇವುನಂದಿರೊ ಮಾತ ಆ ಮರಾಠಿ ಜನ, ತಮುಳುನಾಡಿನ ಜನ ಕೇಳಿಸಿಗಂಡ್ರೆ ನಮ್ಮ ಕತಿಯೇನೊ" ಎಂದ.

"ನಾನು ಅದ್ನೆ ಯೋಚನೆ ಮಾಡತಿದ್ದೆ ಕಣಮಾವ. ಮದ್ಲೆ ಆ ಮರಾಠಿ ಜನ ಯಾವಾಗ್ಲು ಗಡಿ ವಿಷಯ ತಗದು ಗಲಾಟಿ ಮಾಡ್ತರೆ. ಅವುರ ಸಮಸ್ಯೆ ನೆನ್ನೆಮೊನ್ನೆಯದಲ್ಲ, ಟಿಪ್ಪು ಸುಲ್ತಾನ್ ಕಾಲ್ದಲ್ಲೇ ಶೃಂಗೇರಿ ಗುಡಿಮ್ಯಾಲೆ ದಾಳಿ ಮಾಡಿ, ವಿಗ್ರಹ ಕಿತ್ಕ ಕ್ವಳ್ಳೆ ವಡಕಂಡೋಗಿದ್ರು. ಅವತ್ತಿಂದ ಇವತ್ತಿನವರಿಗೂ ಅವುರ ನಮ್ಮ ಸಮುಂದ ಅಷ್ಟಕಷ್ಟೆಯಾ. ಆ ದರಿದ್ರ ನನ್ನ ಮಕ್ಕಳಿಗೆ ಈ ಭೈರನ ಮಾತೇನಾರ ತಲುಪಿದ್ರೆ 'ಕರ್ನಾಟಕದ ಜನ ಯಂಥೋರು ಅಂತ ನಾವೇಳದೇನು ಬ್ಯಾಡಿ. ಅಲ್ಲಿದ್ದಕಂಡು ಪುಸ್ತಕ ಬರಿಯೋ ಸಾಯಿತಿನೆ ಹೇಳಿಬುಟ್ಟವುನೆ ಅವುರು ತರ್ಲೆ 'ಜನ ಅಂತವ' ಅನ್ನೊ ಮಾತ ಮುಂದಿಟಗಂಡು ಹೋರಾಡದಿಲವೆ ಅಂತ."

"ನಿಜ ಕಂಡ್ಯ. ಇಂಥೋರಿಗ್ಯಲ್ಲ ಅನ್ನ ಹಾಯ್ಕಂಡು ಇಟಗಂಡಿದ್ದೀವಲ್ಲ ಹೇಳು."

"ಯಾರಿಗನ್ನ ಹಾಯ್ಕಂಡು ಇಟಗಂಡಿದ್ದಿ ದ್ವಡಪ್ಪ?" ಎಂದು ವಾಟಿಸ್ನೆ ಬಂದ.

"ಅವುನ್ಯಾರೊ ಸಂತೆಶಿವುರದ ಭೈರಪ್ಪಾ ಅನ್ನೊನು ನಮ್ಮನ್ಯಲ್ಲ ಬೋದಿದ್ದನಂತೆ ಕಂಡ್ಯ. ಅದ್ಕೆ ಕಾಳಮಾವ ಸಿಟ್ಟಾಗ್ಯವನೆ" ಅಂದಳು ಜುಮ್ಮಿ.

"ಸಿಟ್ಟಾಗಬ್ಯಾಡ ದ್ವಡಪ್ಪ ಅವುನು ಬೋದಿರದು ರಾಜಕಾರಣಿಗಳನಂತೆ."

"ಗೂಸು ಬೀಳ್ತವೆ ಅಂತ ಗೊತ್ತಾದ ಮ್ಯಾಲೆ ಮಾತು



ಬದ್ಲಾಸ್ಯವುನೆ ಕಣೊ."

"ಮಿಸ್ಟರ್ ಉಗ್ರಿ. ನಾವು ಕತೆಪತೆ ಬರಕಂಡು ವಟ್ಟೆವರಿಯೋ ಸಾಯಿತಿಗಳ ಮ್ಯಾಲೆ ಕೈ ಮಾಡೊವಷ್ಟು ಸಣ್ಣ ಜನಗಳಲ್ಲ. ಹೋಗ್ಲಿ, ಮಿಸ್ಟರ್ ಭೈರಪ್ಪ ಹೇಳೊ ತರ ತರ್ಲೆ ಜನಗಳಾಗಿದ್ರೆ ಇಷ್ಟೊತ್ತಿಗೆ ಗುಜರಾತಿಗೆ ಗಂಟುಮೂಟೆ ಕಟ್ಟುಸ್ಸಿದ್ರೊ, ಆದ್ರು ಸುಮ್ಮನಿದ್ದಿವಿ, ಯಾಕೇಳು?"

"ನೀನೆ ಹೇಳಪ್ಪ"

"ಯಾಕೆ ಅಂದ್ರೆ ಈ ಬೈರಪ್ಪ ಮೊಟ್ಟಮೊದಲ ಕಾದಂಬರಿ ಬರದನಲ್ಲ ಏನಪ್ಪ ಅದರೆಸರೂ. ಧರ್ಮಶ್ರೀ ಅಂತ. ಅದ ಓದಿದಾಗ್ಲೆ ಇವುನ ತಲೆ ಸರಿಲ್ಲ ಅಂತ ಗೊತ್ತಾಯ್ತು, ಆ ತರ ಯೋಚನೆ ಮಾಡೊ ತಲೆ ಇವತ್ತು ಈ ಮಟ್ಟ ತಲುಪಿರೋದ್ರಲ್ಲಿ ಯಾವ ಆಶ್ಚರ್ಯನೂ ಇಲ್ಲ, ಮಾತುಮಾತಿಗೆ ಮೋದಿ ಉದಾರಣೆ ಕೊಡೊ ಇವುನೊ ಅವುನ ಬರದಿರೊ ಅಷ್ಟೂ ಕಾದಂಬರಿಲಿ ಗಾಂಧೀಜಿಗೇ ಜಾಗ ಕೊಟ್ಟಿಲ್ಲ, ಅದೂ ದಾಟು ಕಾದಂಬರಿಲಿ ಒಂದು ನಾಕು ಸಾಲು ಬರದವುನೆ."

"ಏನಂತ ಬರದವುನೇ?"

"ಆಡಿನಾಲು ಕುಡುದು, ಕಡಲೆಕಾಯಿ ತಿಂದು, ಗಾಂಧಿಗೆ ಪಿತ್ಥ ನೆತ್ತಿಗೇರಿ ಅಂಗಂದ ಅಂದ್ರೆ ಅಂತ ಒಂದು ಪಾತ್ರ ಹೇಳ್ತದೆ. ಅದು ಇವುನ ಮಾತೆ ಅಲವೇನೊ ಉಗ್ರಿ?"

"ಇನ್ಯಾರ ಮಾತು ಅದೂ, ಇವುನ ಮಾತೆಯಾ."

"ಅಂಗೆ ಚಿಡ್ಡಿಪಿತ್ತ ತಲಿಗೇರಿದ ಸಾಯಿತಿಗೆ, ಗುಜರಾತು ಸ್ವರ್ಗದಂಗೆ ಕಾಣಬವುದು. ಎಡೂರಪ್ಪನಿಗೆ ತೊಂದ್ರೆ ಕೊಡೊ ಜನ ತರ್ಲೆ ರಾಜಕಾರಣಿಗಳಾಗಿ ಕಾಣಬವುದು. ಅದೋಗ್ಲಿ, ಈ ಭೈರನ ಮಾತಿಂದ ಇನ್ನೊಂದು ಡ್ಯಾಮೇಜಾಗ್ಯದೆ."

"ಏನು ಡ್ಯಾಮೇಜಪ್ಪ?"

"ವರುಸ ವರುಸ ತಮುಳನಾಡಿನೋರು ನೀರು ಕೇಳತಿದ್ರು. ಇಲ್ಲ ಅನ್ನಿ ಸಿಗತಿದ್ರು. ಅವುರಿಗೀಗ ರಾಷ್ಟ್ರಮಟ್ಟದಲ್ಲಿ ಹೇಳಿಕಳಕೆ ಒಂದು ಸರಿಯಾವ ಮಾತು ಸಿಕ್ತು, ಅದ್ಯಾವುದಪ್ಪ ಅಂದ್ರೆ, ಕರ್ನಾಟಕದೋರು ತರ್ಲೆ ಜನ, ಕೇಳಿದ್ರೆ ನೀರು ಕೊಡದಿಲ್ಲ, ಅವುರು ತರ್ಲೆಗಳು ಅಂತ ಅವುರ ಸಾಯಿತಿನೇ ಹೇಳಿದ್ರು ಅಂತರೆ. ಆಗ ಏನು ಮಾಡದು, ನೀನೆ ಹೇಳು ದ್ವಡಪ್ಪ."

"ಏನೇಳನ್ನ, ಓದಿರೋರು ತಿಳಕಂಡಿರೋರು ಇಂತ ಮಾತಾಡಿದ್ರೆ ಏನೇಳನ?"

"ನಾನು ಹೇಳ್ತಿನಿ ದ್ವಡಪ್ಪ, ಮುಂದೆ ಕರ್ನಾಟಕದ ಜನ ತರ್ಲೆ ಜನ ಅಂತ ಕಾದಂಬರಿಕಾರ ಭೈರಪ್ಪನೇ ಹೇಳ್ಯವುನೆ, ಇದಕೇನೇಳ್ತಿರಿ ಅಂತ ಯಾರಾದ್ರು ಅಂದ್ರೆ, ಸದರಿ ಭೈರಪ್ಪ ನಮ್ಮೋನಲ್ಲ, ಗುಜರಾತಿಂದ ಬಂದೋನು. ಬೇಕಾದ್ರೆ ಚೆಕ್ ಮಾಡಿ ಅಂತಿನಿ. ಅಮ್ಯಾಲೆ ಅವುನು ಆರೆಸಿಸ್ಸಿನೋನು. ಆರೆಸೆಸ್ಸು ಒಂದು ಮತಾಂಧ ಪಡೆನೆವರತು ಅದೆಂದೂ ಕರ್ನಾಟಕದ ಜನನ ಪ್ರತಿನಿಧಿಸೊಲ್ಲ. ಸಾಮಾನ್ಯವಾಗಿ ಯಾವುದೇ ಧರ್ಮದ ಮತಾಂಧರಿಗೆ ತಲೆ ಕಡಮೆ ಇರುತ್ತೆ. ಸರಿಯಾಗ್ಯೂ ಇರದಿಲ್ಲ. ರಿಪೇರಿಗೂ ಬರದಿಲ್ಲ. ಆದ್ರಿಂದ ಭೈರನ ಮಾತು ಬುರ್ನಾಸು ಅಂತಿನಿ. ಡೋಂಟ್ ವರಿ!" ●



ಕನ್ನಡಪ್ರಭ ಮತ್ತು ಇತರ ದಿನಪತ್ರಿಕೆಗಳು

ನಾನು ಚಿಕ್ಕವನಾಗಿದ್ದಾಗ ನಿತ್ಯ ಕೇಳುತ್ತಿದ್ದುದ್ದೇ ಹೆಮ್ಮಿಂಗ್ವೇ ತರಹದ ಲೇಖಕರು ಪತ್ರಕರ್ತರಾಗಿ ಎರಡನೇ ಜಾಗತಿಕ ಯುದ್ಧದಲ್ಲಿ ವರದಿ ಮಾಡಿದ ಸಾಹಸಗಳ ಬಗ್ಗೆ, ಆ ಪತ್ರಕರ್ತರು ಸೈನಿಕರಷ್ಟೇ ಧೈರ್ಯಶಾಲಿಗಳಾಗಿದ್ದರು. ಜನಪರ ಹೋರಾಟ, ಕ್ರಾಂತಿಕಾರಿ ನಿಲುವು ಒಬ್ಬ ಒಳ್ಳೆಯ ಲೇಖಕನ ಲಕ್ಷಣಗಳಲ್ಲಿ ಮುಖ್ಯವಾದವು. ಹಾಗೆಯೇ ಆಗಿನ ಪತ್ರಿಕಾವೃತ್ತಿ ಕೂಡ. ಇಂಗ್ಲೆಂಡಿನ ಬೆವರ್‌ಬ್ರೂಕ್, ಅಮೆರಿಕಾದ ಹಸ್ಟರ್ ಮುಂತಾದವರು, ಮಗರಿಜ್, ಮೆಂಕೆನ್ ಮುಂತಾದವರು ನಮ್ಮ ಕಲ್ಪನೆಯನ್ನು ಉದ್ದೀಪಿತವಾಗಿ ಮಾಡುತ್ತಿದ್ದರು. ಪತ್ರಕರ್ತ, ವರದಿಗಾರ ಎಂದರೆ ಏನೆಂದು ಇವತ್ತು ಅನೇಕರಿಗೆ ಗೊತ್ತಿಲ್ಲ, ಆಗಿನ ಪತ್ರಕರ್ತ ಬಡತನಕ್ಕೆ ಅಂಜುತ್ತಿರಲಿಲ್ಲ; ಶ್ರೀಮಂತರು, ಮಧ್ಯವರ್ತಿಗಳು, ಸುಲಿಯುವವರು, ಘಟಿಂಗ ರಾಜಕಾರಣಿಗಳು, ಅವ್ಯವಹಾರಿಗಳು–ಇವರೆಲ್ಲ ನಿಜವಾದ ಪತ್ರಕರ್ತನ ತಾತ್ಸಾರಕ್ಕೆ ಒಳಗಾಗುತ್ತಿದ್ದರು. ಹಗಲಿರುಳು ದುಡಿಯುವ ಪತ್ರಕರ್ತ ಸೇದುತ್ತಿದ್ದ ಕುಡಿಯುತ್ತಿದ್ದ ಸಾಹಸಿಯಾಗಿದ್ದ ಹೋರಾಟಗಾರನಾಗಿದ್ದ ಆಗಿನ ಸಂಪಾದಕರು, ಸಬ್‌ಗಳೂ ಅಷ್ಟೆ. ಸುದ್ದಿ ಮುಖ್ಯ, ಅದನ್ನು ಓದುಗನಿಗೆ ಒದಗಿಸಬೇಕಾದ್ದು ಅವನ ಕರ್ತವ್ಯ. ಈಗಿನಂತೆ ಫ್ಯಾಕ್ಸ್, ಸ್ಪೀಡ್‌ಪೋಸ್ಟ್, ಟಿವಿ ಇಲ್ಲದಿದ್ದ ಆಗ ಫೋನ್ ಮೂಲಕ, wire ಮೂಲಕ ಸಂಪರ್ಕಿಸಲಾಗುತ್ತಿತ್ತು. ಮುಖ್ಯ ಸುದ್ದಿಯನ್ನು ಓದುಗರಿಗೆ ಮುಟ್ಟಿಸಲು ರಾತ್ರಿಯೆಲ್ಲ ಕಾಯುತ್ತಿದ್ದ ಪತ್ರಕರ್ತರಿದ್ದರು.

ಇದನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ ಮೊನ್ನೆ ನಡೆದ ವಿಂಬಲ್ಡನ್ ಟೆನ್ನಿಸ್ ಪಂದ್ಯ, ವಿಶ್ವಕಪ್ ಫುಟ್‌ಬಾಲ್ ಪಂದ್ಯವನ್ನು ನಮ್ಮ ಪತ್ರಕರ್ತರು ವರದಿ ಮಾಡಿದ ರೀತಿ ಅಸಹ್ಯವಾಗಿತ್ತು. ಇಷ್ಟೊಂದು ಆಧುನಿಕ ತಂತ್ರ, ಸವಲತ್ತುಗಳಿರುವಾಗ ಈ ಜನ ಒಂದೂವರೆ ದಿನ ತಡವಾಗಿ ಸುದ್ದಿಗಳನ್ನು ಅಚ್ಚು ಮಾಡುತ್ತಿದ್ದರು! ಇವರಿಗೆ ತಮ್ಮ ಕರ್ತವ್ಯವಾಗಲಿ, ಅದಕ್ಕೆ ಚ್ಯುತಿ ಬಂದಾಗ ನಾಚಿಕೆಯಾಗಲಿ ಇರುವಂತಿರಲಿಲ್ಲ. ನೀವು ಗಮನಿಸಿರಬಹುದು ಇಡೀ ಕರ್ನಾಟಕದ ದಿನಪತ್ರಿಕೆಗಳಲ್ಲಿ 'ಕನ್ನಡಪ್ರಭ' ಮಾತ್ರ ಫುಟ್‌ಬಾಲ್ ಫಲಿತಾಂಶಕ್ಕಾಗಿ ಕಾದು ಅವತ್ತೇ ಪ್ರಕಟಿಸುತ್ತಿತ್ತು. 'ಕನ್ನಡಪ್ರಭ'ದಿಂದಾಗಿ ಇಲ್ಲಿಯ ಎಕ್ಸ್‌ಪ್ರೆಸ್ ಪ್ರಕಟಿಸಿತು. ಅತ್ಯಧಿಕ ಪ್ರಸಾರದ ಪತ್ರಿಕೆ ಎಂದು ಹೇಳಿಕೊಳ್ಳುವ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಸೋಂಭೇರಿ ಗುಮಾಸ್ತರ ಪತ್ರಿಕೆಗಳಂತೆ ಕಂಡುಬಂದವು!

ಯಾಕೆ ಗೊತ್ತೆ? 'ಕನ್ನಡಪ್ರಭ'ದಲ್ಲಿ ಇವತ್ತಿಗೂ ಹಳೇಕಾಲದ ಸಾಹಸಿಗಳಲ್ಲಿ ಕೆಲವರು ಇದ್ದಾರೆ; 'ಪ್ರಜಾವಾಣಿ', 'ಸಂಯುಕ್ತ ಕರ್ನಾಟಕ', 'ಉದಯವಾಣಿ' ಇತ್ಯಾದಿಯ ಬಗ್ಗೆ ಹೇಳಬೇಕಾದ್ದೇ ಇಲ್ಲ, ಅನ್ನ ತಿಳಿಸಾರು ಸಿಕ್ಕರೆ ಅದೇ ಅಲ್ಲಿಯ ಕ್ರಾಂತಿ ಎನ್ನಿಸುತ್ತದೆ.

–ಆಗಸ್ಟ್ 10, 1994




ಮರೆಯುವ ಮುನ್ನ

ಪಿ. ಲಂಕೇಶ್

ಕಂಸ ಕರುಣೆ

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಕಂಸ ಯಾರಿಗೆ ಗೊತ್ತಿಲ್ಲ?

ಜಾಮಿಟ್ರಿಯ 'ಕಂಸ'ದ ಅರಿವಿಲ್ಲದವರಿರಬಹುದು. ಆದರೆ ಮಹಾಭಾರತದ ಕಂಸನ ಹೆಸರನ್ನು ಕೇಳದವರೇ ಇಲ್ಲ.

ಪುರಾಣ ಯುಗದಲ್ಲಿ ಒಂದು ಅನುಕೂಲ ಇತ್ತು, ಸಾವು ಯಾರಿಂದ ಸಂಭವಿಸುತ್ತದೆಂದು ಅಶರೀರವಾಣಿಯ ಮೂಲಕ ತಿಳಿಸಿ ಜೀವನಪರ್ಯಂತ ಸಾವಿನ ನೆರಳಿನಲ್ಲೇ ಭಯದಿಂದ ದುಷ್ಕರ್ಮಿಗಳು ನರಳುವಂತೆ ಮಾಡಲಾಗುತ್ತಿತ್ತು. ಒಂದು ರೀತೀಲಿ 'ಸಿಗರೇಟಿನಿಂದ ಸಾವು ಖಚಿತ' ಎನ್ನುವ ಆಧುನಿಕ ವೈದ್ಯರ ವಾಣಿಯಂತೆಯೇ ಇದೂನು ಅನ್ನಬಹುದು ಇರಲಿ. ದುರ್ಬೀಜದಿಂದ ಜನಿಸಿದ ಕಂಸನು ರಾಕ್ಷಸಗುಣಗಳ ತೌರಾಗಿರುವುದು ಸಹಜವೇ ಆಗಿತ್ತು, ಆದರೂ ಅಗ್ರಜನ ಕರ್ತವ್ಯವನ್ನು ಮರೆಯಲಿಲ್ಲ, ತನ್ನ ಚಿಕ್ಕಪ್ಪನ ಮಗಳಾದ ದೇವಕಿಯನ್ನು ವಸುದೇವನಿಗೆ ಕೊಟ್ಟು ವೈಭವದಿಂದ ಮದುವೆ ಮಾಡಿದ. ವಿವಾಹ ನೆರವೇರಿದ್ದೇ ತಡ, ಅಶರೀರವಾಣಿಯು 'ಇವರ ಗರ್ಭವು ನಿನ್ನನ್ನು ಕೊಲ್ಲುವುದು' ಎಂದಿತು! ಭಯಗೊಂಡ ಕಂಸ ನೂತನ ದಂಪತಿಗಳನ್ನು ಸೆರೆಮನೆಗೆ ತಳ್ಳಿದ. ಇಷ್ಟೆಲ್ಲ ಮುಂಜಾಗರೂಕತೆ ವಹಿಸಿದ್ದರೂ ದೇವಕಿ ಗರ್ಭ ಧರಿಸಿದಳು! ಭಯದಿಂದ ನಡುಗಿದ ಕಂಸ. ಆ ಮಗುವನ್ನು ಹುಟ್ಟಿದ ಕೂಡಲೇ ಸಾಯಿಸಿದ. ಮನಸ್ಸಿಗೆ ಎಂತಹದ್ದೋ ಸಮಾಧಾನ ಆಯಿತು. ಅದು ಬಹಳ ದಿನ ಉಳಿಯಲಿಲ್ಲ, ಮತ್ತೆ ದೇವಕಿ ಗರ್ಭವತಿ ಆದಳು! ಇತರರ ಪ್ರಾಣಕ್ಕಿಂತ ತನ್ನ ಪ್ರಾಣ ಮುಖ್ಯ ತಾನೆ. ಅದನ್ನೂ ಕೊಂದ ಕಂಸ ಮಹಾರಾಜ. ಇದೇ ಕತೆ ಮುಂದುವರೆಯಿತು.

ಗಂಡಹೆಂಡತಿ ಸೆರೆಮನೆಯಲ್ಲಿದ್ದಾಗಲೂ ಹೀಗೆ ಗರ್ಭ ಧರಿಸಬೇಕಾದರೆ ಆ ಭಗವಂತನ ಪವಾಡವೇ ಇರಬೇಕು ಎಂದು ಕೆಲವು ಆಸ್ತಿಕ ಮಹಾಶಯರ ಮನಸ್ಸಿಗೆ ಬಂದು, ಆ ದಯಾಮಯನಾದ ಭಗವಂತನ ನಾಮಸ್ಮರಣೆ ಮಾಡುತ್ತಾ ಕೆನ್ನೆಗೆ ಹೊಡೆದುಕೊಳ್ಳಬಹುದು. ಇಲ್ಲಿ ಅಂತಹ ಯಾವ ಪವಾಡವೂ ನಡೆದಿರಲಿಲ್ಲ. ವಸುದೇವ-ದೇವಕಿಯರು ಸೆರೆಮನೆಯಲ್ಲಿದ್ದರೂ ಒಂದೇ ಕೋಣೆಯಲ್ಲಿ ಇರುವ ಅವಕಾಶ ಕಲ್ಪಿಸಲಾಗಿತ್ತು! ಆಧುನಿಕ ಮನಸ್ಸಿನವರಿಗೆ ಇದು ಕಂಸನ ಮೂರ್ಖತನವಾಗಿ ತೋರಬಹುದು. ಹಲವಾರು ಕಂದಮ್ಮಗಳನ್ನು ಹೀಗೆ ಸಾಯಿಸುವುದಕ್ಕಿಂತ ಗಂಡಹೆಂಡತಿಯನ್ನು ಪ್ರತ್ಯೇಕ ಕೋಣೆಯಲ್ಲಿರುವ ವ್ಯವಸ್ಥೆ ಮಾಡಬಾರದಿತ್ತಾ ಎಂದು ತರ್ಕಿಸಬಹುದು. ಕಂಸನೂ ತರ್ಕ ನಿಪುಣನೆ. ಅವನಿಗೆ ದ್ವೇಷ ಇದ್ದದ್ದು ತಂಗಿಯ ಮಕ್ಕಳ ಮೇಲೆ, ತಂಗಿಯ ಮೇಲಲ್ಲ, ವಸುದೇವನ ಮೇಲೂ ಅಲ್ಲ. ಅವರು ಯೌವ್ವನಸ್ಥರು. ಆ ವಯಸ್ಸಿನ ಒತ್ತಡಗಳನ್ನು ಬಲ್ಲವನಾಗಿದ್ದ ಎಂದೇ ಒಂದೇ ಕೋಣೆಯಲ್ಲಿರಲು ಅವಕಾಶ ನೀಡಿದ್ದ. ಇದನ್ನೇ 'ಕಂಸ ಕರುಣೆ' ಅನ್ನೋದು!

ಈ ಕಂಸ ಪುರಾಣ ಯಾಕೆ ಒದರ್‍ತಿದೀಯೋ ಮಾರಾಯ ಅಂದರೆ...

ಲಿಂಗ ತಾರತಮ್ಯ ಅನ್ನೋದು ಭಾರತದಲ್ಲಿ ಅತಿ ಹೆಚ್ಚಿದೆ ಎಂದು ಮಾಧ್ಯಮಗಳು ವರದಿ ಮಾಡ್ತಿವೆ. ಪಾಕಿಸ್ತಾನ, ಬಾಂಗ್ಲಾಕ್ಕಿಂತ ಅಧಿಕ ಅಂತಿದಾವೆ. ಇದು ಪುರುಷ ಪ್ರಧಾನ ಸಮಾಜ ಅಂತೆಲ್ಲ ಹೀಯಾಳಿಸ್ತಿದಾವಲ್ಲ ಅವರಿಗೆ ನಿಜಸಂಗತಿ ಅರಿವಿಲ್ಲ. ಮಹಿಳೆಯರೂ ಪುರುಷರಷ್ಟೇ ಪ್ರಮುಖರು ಅನ್ನೋದನ್ನು ಇತ್ತೀಚಿನ ಪುರಾವೆಗಳು ಎತ್ತಿ ಹಿಡಿಯುತ್ತಿವೆ.

ಯಡ್ಯೂರಪ್ಪನವರನ್ನೇ ಮಹಾಭ್ರಷ್ಟ ಅಂತಿದ್ರಲ್ಲಾ... ಅವರ ಮಕ್ಕಳೇನೂ ಕಡಿಮೆ ಇಲ್ಲ, ಲಿಂಗ ಭೇದವಿಲ್ಲದೆ ಸನ್ಮಾನ್ಯರ ಸಂತಾನಭಾಗ್ಯವೆಲ್ಲ ತಮ್ಮ ಅಳಿಲುಸೇವೆ ಮಾಡ್ತಿದಾರೆ. ಮೇಟೀನೇ ಹಿಂಗಾದ ಮೇಲೆ ನಮ್ದೇನು ಅಂತಾವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಅವರ ಹೆಂಡತಿ, ಮಗ ಎಲ್ಲ ಭ್ರಷ್ಟಾಚಾರ ಧುರೀಣ, ಭ್ರಷ್ಟಾಚಾರ ಧುರೀಣೆ ಬಿರುದಿಗೆ ಅನುರೂಪವಾಗುವಷ್ಟು ಪ್ರಾವೀಣ್ಯತೆ ಪಡೆದಿದ್ದಾರೆ. ಭ್ರಷ್ಟಾಚಾರಕ್ಕೆ ಲಿಂಗಭೇದ ಇಲ್ಲ ಅನ್ನುವುದೇ ಸಮಾಧಾನದ ಸಂಗತಿ!

ಸನ್ಮಾನ್ಯ ಯಡ್ಯೂರಪ್ಪನವರಲ್ಲಿ ಒಂದು ವಿನಂತಿ:

ಸ್ವಾಮಿ ತಾವು ಹೇಗಿದ್ದರೂ ಕಾಂಗ್ರೆಸ್, ಜೆಡಿಎಸ್ ನಾಯಕರ ವಾಸಕ್ಕಾಗಿ ಸುಸಜ್ಜಿತ ಶ್ರೀಕೃಷ್ಣ ಜನ್ಮಸ್ಥಾನವನ್ನು ನಿರ್ಮಿಸುವುದಾಗಿ ಹೇಳುತ್ತಲೇ ಬಂದಿದ್ದೀರಿ. ತಮ್ಮ ಹಾಗೂ ತಮ್ಮ ಸಂತಾನದ ಭ್ರಷ್ಟಾಚಾರ ಭರಾಟೆ ನೋಡಿದರೆ ತಾವೂ ಸೇರಿದಂತೆ ತಮ್ಮ ಕುಟುಂಬದ ಸದಸ್ಯರೇ ಸರದಿಯಲ್ಲಿ ಮುಂದಿರುವಂತಿದೆ. ಶ್ರೀಕೃಷ್ಣ ಜನ್ಮಸ್ಥಾನ ಅಂದ ಮೇಲೆ ಕಂಸ ಬರಲೇಬೇಕು ತಾನೇ? ಅವನಂತೆಯೇ ತಾವೂ ಸಹ 'ಕಂಸ ಕರುಣೆ' ತೋರಿಸಿ ಉದ್ದೇಶಿತ ಆಧುನಿಕ ಜೈಲುಗಳಲ್ಲಿ 'ಫ್ಯಾಮಿಲಿ ಸೆಲ್'ಗಳಿರುವಂತೆ ಏರ್ಪಾಡು ಮಾಡಿದರೆ ಇಡೀ ಕುಟುಂಬ ಒಂದೇ ಕಡೆ ಇದ್ದು 'ಸಂಸಾರ ಸುಖ'ಕ್ಕೆ ಅಡಚಣೆಯುಂಟಾಗದಂತಾಗುತ್ತದೆ. ಈ 'ಕಂಸ ಕರುಣೆ' ನಿಮಗೆ ಬರಲೆಂದು ಬಯಸುತ್ತೇನೆ.



ತರ್ಲೆ ಕನ್ನಡಿಗರು!

ಕನ್ನಡಿಗ ಅಂತ ಹೇಳಿಕೊಳ್ಳುವುದಕ್ಕೇ ನಾಚಿಕೆ ಆಗುತ್ತೆ, ಅಂತಹ ಪೆದ್ದು ಮುಂಡೇವು ಅವು. ಪಾಪ ನಮ್ಮ ಎಸ್.ಎಲ್. ಭೈರಪ್ಪನೋರು-ಅದೇ ನಮ್ಮ ಸಾಹಿತಿ ಭೈರಪ್ಪನೋರು-ಬಡಕೊಂಡ್ರಂತೆ 'ಮುಂಡೇಮಕ್ಳ ಈ ಬಡಾವಣೆಗೆ ಕುವೆಂಪುನಗರ ಅಂತ ಕರಿಬೇಡ್ರೋ ಈಗಿರುವಂತೆ ತೊಣಚಿ ಕೊಪ್ಪಲು ಅಂತಾನೆ ಇರ್‍ಲಿ, ಗ್ರಾಮೀಣ ಸಂಸ್ಕೃತಿ ಸೊಗಡಿದೆ ಅದ್ಕೆ' ಅಂತಾವ. ಅದೇನು ಕುವೆಂಪು ದೆವ್ವ ಬಡಿದಿತ್ತೋ ಕಾಣೆ. ಇವರ ಮಾತು ಅವರ ಕಿವಿಗೆ ಬೀಳಲೇ ಇಲ್ಲ, ಮೊದಲೆ ಪೆದ್ದರಲ್ಲವಾ. ಕುವೆಂಪು ನಗರ ಅಂತಾನೆ ಕರ್‍ದ್ರೂ, ಇದೂ ಹಾಳಾಗಲಿ. ಅಲ್ಲಿನ ರಸ್ತೆಗಳ ಹೆಸರುಗಳೋ ಆ ದೇವರಿಗೇ ಪ್ರೀತಿ. ಹೆಸರಿಡುವುದಕ್ಕೂ ಒಂದು ರೀತಿನೀತಿ ಬೇಡವಾ. 'ಪುಷ್ಪರಾಶಿ' ಅಂತೆ. ಔಷಧಿಗೂ ಒಂದು ಹೂವಿಲ್ಲ, 'ಪಂಚಮಂತ್ರ' ಅಂತಾರೆ. ಅಲ್ಲಿ ಹಾಳು ವಾಹನಗಳ ಗಲಾಟೆ ಸದ್ದು ಬಿಟ್ರೆ ಇನ್ನೊಂದು ಕೇಳ್ಸೋಲ್ಲ, 'ನವಿಲು ರಸ್ತೆ'.... ಆಹಾಹಾ.. ಕೆಂಬೂತ ರಸ್ತೆ ಅಂದ್ರೆ, ಬಲೇ ಪಸಂದಾಗಿರೋದು. ದುಡ್ಡಿಲ್ಲ ಕಾಸಿಲ್ಲ ಹೆಸರು ಮಾತ್ರ ಸಂಪತ್ತಯ್ಯಂಗಾರ್ ಅನ್ನೋ ಹಂಗಾಗಿದೆ ಹೆಸರಿನ ಕತೆ. ಅಲ್ಲಿ ಕನ್ನಡ ಸಾಹಿತ್ಯಕ್ಕೆ ಎಂತೆಂಥ ಮಹಾನುಭಾವರೆಲ್ಲ ಕೊಡುಗೆ ನೀಡಿದಾರೆ. ಅವರ ಸಾಹಿತ್ಯದಲ್ಲಿ ಎಂತೆಂಥ ಸುಂದರ ಹೆಸರುಗಳಿದಾವೆ. ಬ್ಯಾಡ ಭೈರಪ್ಪನವರ ಕಾದಂಬರೀಲಿ ಎಷ್ಟೊಂದು ಮನಮೋಹಕ ಹೆಸರುಗಳಿವೆ. ಅವನ್ನ ಇಡ್ರಪ್ಪ ಅಂದ್ರೆ ಅವೈ ಆಗಲ್ವಂತೆ. ಕುವೆಂಪುದ್ದೇ ಇಡ್ರಿಸಬೇಕಂತೆ! ಇಟ್ಕಂಡು ಹಾಳಾಗ್ಲಿ ಅಂದ್ರೆ ಕುವೆಂಪು ನಮ್ಮ ಸಾಂಸ್ಕೃತಿಕ ನಾಯಕ ಅಂತ ಹುಚ್ಚು ಹಿಡಿದೋರಂಗೆ ಐಲುಪೈಲಾಗಿ ಆಡ್ತಿವೆ. ಇದರಲ್ಲೇ ಅರ್ಥ ಆಗೋಲ್ವೆ ಅವರ ಸಂಸ್ಕೃತಿ ಯಾವ ಮಟ್ಟದ್ದು ಅಂತಾವ. ಅಲ್ಲ ಕನ್ನಡ ತಾಯಿ ಸೇವೇಯ ಇನ್ನಾರೂ ಮಾಡೊಲ್ವ ಅಂತಾವ. ಎಸ್.ಎಲ್. ಭೈರಪ್ಪನವರನ್ನೇ ತೆಗೆದುಕೊಳ್ಳಿ...

ಪುರಾತನ ಸಂಸ್ಕೃತಿ ಪುನರುತ್ಥಾನಕ್ಕಾಗಿ ಎಷ್ಟೊಂದು ಶ್ರಮಿಸುತ್ತಿಲ್ಲ, ಅದು ಅವರ ಕಣ್ಣಿಗೇ ಬೀಳವಲ್ದು, ಬಿದ್ದರೂ ಅವರ ಮೇಧಾವಿತನದ ಕಳಕಳಿ ಅವ್ಕೆ ಅರ್ಥ ಆಗುವಲ್ದು ಬಿಡಿ. ಅದೇನಿದ್ದರೂ ಅನಿವಾಸಿ ಭಾರತೀಯರಿಗೇ ಸರಿ. ವಿದೇಶಕ್ಕೆ ಹಾರಿ ಕನ್ನಡ ಸೇವೆ ಮಾಡ್ತಿರೋರಿಗೆ ಅವರನ್ನ ಕಂಡ್ರೆ ಏನು ಗೌರವ, ಪ್ರೀತಿ, ವಿಶ್ವಾಸ ಅಂತೀರಿ. ಛೀ ಅದರ ಕಥೆಯೇ ಬೇರೆ. ಇಲ್ಲಿ ನೋಡಿ. ಅಗಾಧ ಸಂಶೋಧನೆ ಮಾಡಿ ರಚಿಸಿದ ಕೃತಿ ಈ ಮೂರ್ಖ ಮುಂಡೇವಕ್ಕೆ ಮತಾಂಧತೆಯ ದುರ್ವಾಸನೆ ಬಡಿಯುತ್ತಂತೆ! ಹಿಂದೂ ಸಂಸ್ಕೃತಿ ಪರಂಪರೆ ಕುರಿತು ಬರೆದ ಕಾದಂಬರಿ ಮಹಿಳೆ ಮೇಲಿನ ದೌರ್ಜನ್ಯವಾಗಿ ತೋರುತ್ತಂತೆ! ಸಂಸ್ಕೃತಿ ಇಲ್ಲದ ಚಾಂಡಾಳರ ಪಂಚೇಂದ್ರಿಯಗಳ ತಪಾಸಣೆ ಮಾಡಬೇಕಾಗಿದೆ ಅಷ್ಟೆ! ಇಂತಹ ಕುಬುದ್ಧಿ ಜನ ಇರೋ ಹೊತ್ಗೆ ಕರ್ನಾಟಕ ಅನ್ನೋದು ಇನ್ನೂ ಹೀನಾಯಸ್ಥಿತಿಯಲ್ಲೇ ಬಿದ್ದು ಕೊಳೆತು ನಾರುತ್ತಿದೆ. ಅದೇ ಗುಜರಾತ್ ನೋಡಿ. ನರೇಂದ್ರ ಮೋದಿ ಅಂತಹ ಮನುಷ್ಯ ಇಡೀ ದೇಶದಲ್ಲೇ ಹುಡುಕಿದರೂ ಸಿಗೋಲ್ಲ, ಈ ಮಾತೇಳಿದ್ರೆ ಗೋದ್ರ ನರಮೇಧ ಅಂತಾವೆ ತಲೇಲಿ ಅಮೇಧ್ಯ ತುಂಬ್ಕೊಂಡಿರೋವು. ಏನೋ ಬಂಡಲಾಕು ನಾಲ್ಕು ಸಾವಿರ ಜನ ಸತ್ತದ್ದೇ ದೊಡ್ಡದು ಅಂತಾವೆ. ಈ ಸಾಬಿ ಬಡ್ಡೆತ್ತವ್ಕೆ ಅದೇನ್ ಸಂತಾನಶಕ್ತಿ ಇದ್ದತ್ತೋ, ಸತ್ರೆ ಹುಟ್ಟುಸ್ತಾರೆ ಬಿಡ್ರಿ ಅಂದ್ರೂ ಅದೇ ಮಾತಾಡ್ತವೆ. ಕೆಲಸಕ್ಕೆ ಬಾರದ ಇಂತಹ ಮಾತಾಡ್ತವೇ ಹೊರತು ಮೋದಿ ಮಾಡಿರುವ ಆರ್ಥಿಕಾಭಿವೃದ್ಧಿ ತಿಳಿಕೊಳೋಕೆ ಪ್ರಯತ್ನಾನೆ ಮಾಡಲ್ಲ, ಅವರು ರೈತರ ಹತ್ತಿರ ಹೋಗಿ 'ಕಾರ್ಖಾನೆ ಮಾಡಕೆ ಜಮೀನು ಬೇಕು' ಅಂದ್ರೆ ಸಾಕು. 'ತಕಳಿ' ಅಂತ ಕೊಡ್ತಾರೆ. ಇಲ್ಲಿ ನೋಡಿ. ಯಡ್ಯೂರಪ್ಪ ಅಭಿವೃದ್ಧಿ ಪಥ ಹಿಡಿಯೋಣ ಅಂತ ಹೊರಟ್ರೆ ಕಾಲೆಳೆಯೋರೆ ಜಾಸ್ತಿ, 'ಜಮೀನು ಕೊಡ್ರಪ್ಪ ಕಾರ್ಖಾನೆ ಮಾಡ್ತೀನಿ' ಅಂದ್ರೆ ರೈತ ಮುಂಡೇಮಕ್ಳು 'ಕೊಡಲ್ಲ' ಅಂತಾರೆ. ಕಾಲು ಕೆರಕೊಂಡು ಜಗಳಕ್ಕೆ ನಿಲ್ತಾರೆ. ಭೂಹಗರಣ ಅಂತ ದಿನಾ ನಾಯಿನರಿ ತರ ಕಚ್ಚಾಡ್ತವೆ. ಯಾವಾಗ ನೋಡಲಿ ಜಗಳ, ಜಗಳ, ಜಗಳ. ಇದೆಲ್ಲ ವಿಶ್ಲೇಷಿಸಿದ ಭೈರಪ್ಪನೋರ್‍ಗೆ ರೋಸತ್ತು ಹೋಗಿರಬೇಕು. ಕರ್ನಾಟಕದೋರು ತರ್ಲೆ ಜನ ಅಂತ ಉಗಿದವ್ರೆ. ತಿಳಿದೋರು ಬೈದು ಬುದ್ಧಿ ಹೇಳವ್ರೆ ಅನ್ನೋದನ್ನ ಅರಿತುಕೋಬಾರದ. ಮೊದಲೇ ತರ್ಲೆ ಬಡ್ಡೆತ್ತವು. ಬುದ್ಧಿ ಹೇಳಿದ ಭೈರಪ್ಪನವರನ್ನೇ ಕ್ಷಮೆ ಯಾಚಿಸಿ ಅಂತ ಕುಂತವೆ! ಹಂಗೆ ಮಾಡದೇ ಹೋದ್ರೆ ಮಕ್ಕಕ್ಕೆ ಮಸಿ ಬಳೀತವಂತೆ; ಮೈಗೆ ಸಗಣಿ ಸುರೀತಾವಂತೆ! ಪೆದ್ದ ಮುಂಡೇವು ಹಂಗೆ ಮಾಡಿದ್ರೂ ಮಾಡೋವೇಯ. ಭೈರಪ್ಪನವರು ಇಂತಹ ತರ್ಲೆ ಜನಗಳ ಮಧ್ಯೆ ಇರೋದಕ್ಕಿಂತ ಅವರನ್ನ ಅರ್ಥಮಾಡಿಕೊಳ್ಳೋ ವಿದೇಶಕ್ಕೆ ಹೋದರೇ ಉತ್ತಮವೇನೋ!

ಭೈರಪ್ಪನವರು ಕನ್ನಡಿಗರ ಕ್ಷಮೆಯಾಚಿಸಲಿ

"ಕನ್ನಡಿಗರ ಮನಸ್ಥಿತಿಯಲ್ಲೇ ತರ್ಲೆತನ" ಎಂಬ ಭೈರಪ್ಪನವರ ಹೇಳಿಕೆಯನ್ನ ನೋಡಿ ನಮ್ಮ ಮನಸ್ಸಿಗೆ ಖೇದವುಂಟಾಯಿತು.

ಫ್ರಾನ್ಸ್ ಇದ್ದಹಾಗೆ ಇಂಗ್ಲೆಂಡ್ ಇರಬೇಕಾಗಿಲ್ಲ, ಅದರಂತೆ ಅಮೆರಿಕಾದಂತೆ ಜಗತ್ತು ಇರಬೇಕಿಲ್ಲ, ಯಾವುದೇ ಒಂದು ಪ್ರದೇಶವನ್ನು ಆಧಾರವನ್ನಾಗಿಟ್ಟುಕೊಂಡು ಮತ್ತೊಂದು ಪ್ರದೇಶದ ಅಭಿವೃದ್ಧಿಯನ್ನ ಅಳೆಯುವುದು ತಪ್ಪು. ಭೈರಪ್ಪನವರಂತೆ ಕನ್ನಡಿಗರು ಅಭಿವೃದ್ಧಿಯನ್ನ ಸಹಿಸದ ತರ್ಲೆ ಮನಸ್ಸಿನವರಾಗಿದ್ದರೆ ಕರ್ನಾಟಕ ಅಭಿವೃದ್ಧಿಯಲ್ಲಿ ಎರಡನೆ ಸ್ಥಾನದಲ್ಲಿ ಇರುತ್ತಿರಲಿಲ್ಲ. ನಾವು ಗುಜರಾತಿನ ಅಭಿವೃದ್ಧಿಯನ್ನ ಸಾರಾಸಗಟಾಗಿ ಪ್ರಶ್ನಿಸುತ್ತಿಲ್ಲ, ಆ ರಾಜ್ಯ ತನ್ನದೇ ರೀತಿಯಲ್ಲಿ ಸಾಧನೆ ಮಾಡಿದ್ದು ನಿಜ ಆದರೆ ಇಲ್ಲಿ ಭೂಹಗರಣ, ಭ್ರಷ್ಟಾಚಾರದಂತೆ, ಅಲ್ಲಿಯೂ ಹಗರಣ ಮುಕ್ತ ಅಂತಾ ಅರ್ಥವಲ್ಲ, ಯಾವುದೋ ಒಂದು ಮನಸ್ಥಿತಿಯಲ್ಲಿ ಕನ್ನಡಿಗರ ಸ್ವಾಭಿಮಾನವನ್ನು ಒಂದೇ ಮಾತಿನಲ್ಲಿ ಹೀಗಳೆಯುವುದು ಭೈರಪ್ಪನಂತವರಿಗೆ ಶೋಭೆಯಲ್ಲ, ಭೈರಪ್ಪನವರು ಕನ್ನಡಿಗರ ಕ್ಷಮೆಯಾಚಿಸಲಿ...

- ರಾಜ್ಯ ವಕೀಲರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಜಯ ಅಮೃತರಾಜ್ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ನರಗುಂದ, ವಕೀಲರು, ಕೊಪ್ಪಳ

ಹಗರಣಗಳ ದೇಶವೇ ಭಾರತ ಎನಿಸುತ್ತಿದೆ ಈಗಿನ ದೊಡ್ಡ ಮೊತ್ತದ ಹಗರಣಗಳನ್ನು ನೋಡಿದರೆ. ಇತ್ತೀಚೆಗೆ ನನ್ನ ಮೊಬೈಲ್‌ಗೆ ಒಂದು ಎಸ್ ಎಮ್ ಎಸ್ ಬಂತು. ಅದರಲ್ಲಿ ಈ ವಿವರಣೆಗಳಿದ್ದವು: ಬೋಫೋರ್ಸ್ ಹಗರಣ- 64 ಕೋಟಿ, ಯೂರಿಯಾ ಹಗರಣ- 133 ಕೋಟಿ, ಮೇವು ಹಗರಣ- 950 ಕೋಟಿ, ಸ್ಟಾಕ್ ಮಾರ್ಕೆಟ್ ಹಗರಣ- 4000 ಕೋಟಿ, ಸತ್ಯಂ ಹಗರಣ - 7000 ಕೋಟಿ, ಛಾಪಾ ಕಾಗದ ಹಗರಣ- 43,000 ಕೋಟಿ, ಕಾಮನ್ ವೆಲ್ತ್ ಹಗರಣ - 70,000 ಕೋಟಿ, 2ಜಿ ಸ್ಪೆಕ್ಟ್ರಮ್ ಹಗರಣ- 1.76 ಲಕ್ಷ ಕೋಟಿ. ಇದೀಗ ಆಹಾರ-ಧಾನ್ಯ ಹಗರಣ - 2 ಲಕ್ಷ ಕೋಟಿ!!

ಆಹಾ, ಮೇರಾ ಭಾರತ್ ಮಹಾನ್!!

-ಓರ್ವ ಭಾರತೀಯ

ಕೇವಲ ಅರ್ಧ ಗಂಟೆಗೆ ಉಪೇಂದ್ರ ಅವರ 'ಸೂಪರ್' ಸಿನಿಮಾದಿಂದ ಹೊರನಡೆದೆ. ಅದೆಂತಹ ದೇಶಪ್ರೇಮವೋ ನಾನರಿಯೆ.

ಅಳು, ಅಕ್ಕರೆಯ ದೇಶವೇ!

-ಸಂವರ್ತ ಸಾಹಿಲ್, ಉಡುಪಿ

ಹೊಗಳಿಕೆ ತೆಗಳಿಕೆ


'ಯಡಿಯೂರಪ್ಪನಿಗೆ ಜೈ' ಎಂಬ ಎಸ್ ಎಂ ಎಸ್ ಅನ್ನು ಹತ್ತು ಜನರಿಗೆ ಫಾರ್ವರ್ಡ್ ಮಾಡಿದರೆ ನಿಮಗೆ ದೇವನಹಳ್ಳಿ ವಿಮಾನ ನಿಲ್ದಾಣದ ಹತ್ತಿರ ಒಂದು ಸೈಟನ್ನು ನೀಡಲಾಗುತ್ತದೆ. ಇದನ್ನು ನೀವು ನಿರ್ಲಕ್ಷಿಸಿದರೆ ನಿಮ್ಮನ್ನೇ ಯಡ್ಡಿ ಡಿನೋಟಿಫೈ ಮಾಡಿಬಿಡುತ್ತಾರೆ!!

- ವಿಜಯ್‌ಕುಮಾರ್, ಬೆಂಗಳೂರು

ಕುಲಪತಿಗಳ ನಿವೃತ್ತಿ ವಯಸ್ಸನ್ನು ಹೆಚ್ಚಳ ಮಾಡಿರುವ ಯಡಿಯೂರಪ್ಪನವರ ಕಲ್ಯಾಣಗುಣವನ್ನು ಬಯಲು ಮಾಡುವ ಆತುರದಲ್ಲಿ ಬಾಗಿಲಗದ್ದೆಯವರು ಕುರುಬರನ್ನು ಲಿಂಗಾಯತರನ್ನಾಗಿ ಮಾಡಿದ್ದಾರೆ. ಬಾಗಿಲಗದ್ದೆಯವರು ತಮ್ಮ ವರದಿಯಲ್ಲಿ ವಿವಿಯ ಕುಲಪತಿ ಡಾ. ಮಹೇಶಪ್ಪರವರು ಲಿಂಗಾಯತರು ಎಂದು ಬರೆದಿದ್ದಾರೆ. ಕೆಲವಾರಗಳ ಹಿಂದೆಯೂ ಸಹ ನಿಮ್ಮ ಪತ್ರಿಕೆಯಲ್ಲಿ ಮಹೇಶಪ್ಪನವರನ್ನು ಲಿಂಗಾಯತರು ಎಂದೇ ಬರೆಯಲಾಗಿತ್ತು, ಆದರೆ ವಾಸ್ತವವಾಗಿ ಮಹೇಶಪ್ಪನವರು ಕುರುಬ ಜನಾಂಗದವರು ಎಂಬ ಮಾಹಿತಿ ಇದೆ. ನೀವು (ಪತ್ರಿಕೆಯವರು) ಒಮ್ಮೆ ಪರಿಶೀಲಿಸಿ ನೋಡಿ.

-ಬೂಕೆಗೌಡ, ಕುರುಬರಹಳ್ಳಿ, ಮೈಸೂರು

ಮಧು ಈಗ ಹೀರೋ



ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ನಾಯಕನಟನ ಆಗಮನವಾಗಿದೆ. ಆತನ ಹೆಸರು ಮಧು ಬಂಗಾರಪ್ಪ. ಆಶ್ಚರ್ಯವಾಯಿತೇ? ಹೌದು ಇವರು ನೀವಂದುಕೊಂಡಂತೆ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪನವರ ಎರಡನೆ ಸುಪುತ್ರ. ಈಗಾಗಲೇ ಬಂಗಾರಪ್ಪನವರ ಮೊದಲ ಪುತ್ರ ಕುಮಾರ್ ಬಂಗಾರಪ್ಪ ಕನ್ನಡ ಚಿತ್ರರಂಗದಲ್ಲಿ ಒಂದು ರೌಂಡ್ ಆಕ್ಟಿಂಗ್ ಮುಗಿಸಿ ರಾಜಕೀಯದತ್ತ ಹೋಗಿರುವುದು ನಿಮಗೆ ಗೊತ್ತೇ ಇದೆ. ಆದರೆ ಮಧು ಬಂಗಾರಪ್ಪ ಕುಮಾರನಿಗೆ ತದ್ವಿರುದ್ಧವಾಗಿ ಮೊದಲು ರಾಜಕೀಯರಂಗದಲ್ಲಿ ಒಂದು ಸುತ್ತುಹಾಕಿ ಇದೀಗ ಸಿನಿಮಾ ರಂಗಕ್ಕೆ ಆರ್ರಂ ಗ್ರೇಟಂ ಮಾಡುತ್ತಿದ್ದಾರೆ!

ಡಿ. 12ರ ಭಾನುವಾರದಂದು ಮೈಸೂರಿನಲ್ಲಿ ಇವರು ನಾಯಕನಾಗಿ ನಟಿಸಲಿರುವ 'ರೇವ' ಚಿತ್ರ ಸೆಟ್ಟೇರಲಿದೆ. ಮಧುಗೆ ನಾಯಕಿಯಾಗಿ ಸ್ನೇಹ ಉಲ್ಲಾಲ್ ಎಂಬ ಹಿಂದಿ ಬೆಡಗಿ ಆಯ್ಕೆಯಾಗಿದ್ದಾಳೆ. ಈಕೆ ಹಿಂದಿಯ ಖ್ಯಾತ ನಟ ಸಲ್ಮಾನ್ ಖಾನ್‌ನ ಶೋಧ. ವಿಶ್ವಸುಂದರಿ ಐಶ್ವರ್ಯ ರೈ ಜೊತೆ ಸಲ್ಮಾನ್ ರಂಪ ಮಾಡಿಕೊಂಡ ನಂತರ ಆಕೆಯ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಆಕೆಯ ತದ್ರೂಪಿಯಂತಿರುವ ಸ್ನೇಹ ಉಲ್ಲಾಲ್‌ಳನ್ನು ಹುಡುಕಿ ಆಕೆಯನ್ನು ತನ್ನ ಚಿತ್ರದ ನಾಯಕಿ ಮಾಡಿದ್ದ. ಅದಾದನಂತರ ತೆಲುಗಿನಲ್ಲಿ ಬಂದ 'ಉಲ್ಲಾಸಂಗ, ಉತ್ಸಾಹಂಗ' ಚಿತ್ರದ ಮುಖಾಂತರ ಸ್ನೇಹ ಆಂಧ್ರದಾದ್ಯಂತ ಜನಪ್ರಿಯಳಾಗಿದ್ದಳು. ಇದೀಗ ಅದೇ ಸ್ನೇಹ ಕನ್ನಡದ ಮಧು ತೆಕ್ಕೆಗೆ ಬಿದ್ದಿದ್ದಾಳೆ. ಅಂದಹಾಗೆ ಸ್ನೇಹ ಮುಂಬೈಯಲ್ಲಿ ಬೆಳೆದಿದ್ದರೂ ಮೂಲತಃ ಆಕೆ ಮಂಗಳೂರಿನ ಹುಡುಗಿ ಎಂಬುದನ್ನು ಗಮನಿಸಬೇಕು.

ಮಧು ಬಂಗಾರಪ್ಪ ಈ ಚಿತ್ರಕ್ಕಾಗಿ ಸುಮಾರು 14 ಕೆ.ಜಿ. ತೂಕವನ್ನಿಳಿಸಿ ಈಗ ಹೊಸ ರೂಪದಲ್ಲಿ ರಾರಾಜಿಸುತ್ತಿದ್ದಾರೆ. ಈಶ್ವರ್ ಬಾಳೆಗುಂದಿ ಎಂಬ ಉದಯೋನ್ಮುಖ ಯುವ ನಿರ್ದೇಶಕ ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಮಳವಳ್ಳಿ ಸಾಯಿಕೃಷ್ಣ ಇದರ ಕಥೆ-ಸಂಭಾಷಣೆ ಜವಾಬ್ದಾರಿ ಹೊತ್ತುಕೊಂಡಿದ್ದರೆ, ಮುಸ್ಸಂಜೆ ಶ್ರೀಧರ್ ಈ ಚಿತ್ರದ ಸಂಗೀತ ನಿರ್ದೇಶಕರು.

ಇವೆಲ್ಲಕ್ಕಿಂತ ಮುಖ್ಯವಾಗಿ ಮಧು ಬಂಗಾರಪ್ಪ ಇಷ್ಟು ತಡವಾಗಿ ಯಾಕೆ ಮುಖಕ್ಕೆ ಬಣ್ಣ ಹಚ್ಚಿಕೊಳ್ಳುತ್ತಿದ್ದಾರೆ ಎಂಬುದೇ ಕುತೂಹಲ. ಯಾಕೆಂದರೆ ಕಳೆದ ಹಲವಾರು ವರ್ಷಗಳಿಂದ ಚಿತ್ರರಂಗದೊಂದಿಗೆ ನಿಕಟ ಸಂಬಂಧವಿಟ್ಟುಕೊಂಡಿರುವ ಮಧುಗೆ ಈ ಹಿಂದೆ ಅನೇಕ ಆಫರ್‌ಗಳು ಬಂದಿದ್ದವು. ಆದರೆ ಅದ್ಯಾವುದರ ಬಗ್ಗೆಯೂ ಆಸಕ್ತಿ ತೋರಿಸದ ಮಧು ತನ್ನ ಆಕಾಶ್ ಆಡಿಯೋ ಕಂಪೆನಿಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದರು. "ಏನೇ ಆದರೂ ಆಕ್ಟಿಂಗ್ ನನ್ನಂತವರಿಗೆ ಹೇಳಿಮಾಡಿಸಿದ್ದಲ್ಲ" ಎಂದು ಅದರ ಬಗ್ಗೆ ನಿರ್ಲಕ್ಷ್ಯತನ ತೋರಿಸುತ್ತಿದ್ದರು.

ಆದರೆ ಈಗ ದಿಢೀರನೆ ಮಧು ನಾಯಕನಟನಾಗಲು ಹೊರಟಿರುವುದರ ಹಿಂದೆ ಅನೇಕ ಆಯಾಮಗಳು ಇವೆಯಂತೆ. ಈಗಾಗಲೇ ಸಿನಿಮಾ ನಟನೆಯ ಜನಪ್ರಿಯತೆಯಿಂದ ಶಾಸಕನಾಗಿ ಮೆರೆಯುತ್ತಿರುವ ತನ್ನ ಸಹೋದರ ಕುಮಾರ್ ಬಂಗಾರಪ್ಪ ವಿರುದ್ಧ ಮುಂದಿನ ಚುನಾವಣೆಯಲ್ಲಿ ತಾನು ಸರಿಸಮನಾಗಿ ನಿಲ್ಲಬೇಕಾದರೆ ತಾನು ಕಲಾವಿದ ಎನಿಸಿಕೊಳ್ಳಬೇಕು ಎಂಬ ತೀರ್ಮಾನಕ್ಕೆ ಮಧು ಬಂದಂತಿದೆ ಎನ್ನುತ್ತಾರೆ ಗಾಂಧಿನಗರದ ಜನ.

ಅಂದಹಾಗೆ, ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಕೂಡಾ ಒಂದು ಕಾಲದಲ್ಲಿ ನಾಯಕನಟನಾಗಲು ಪ್ರಯತ್ನಿಸಿದ್ದರು ಎಂಬುದನ್ನಿಲ್ಲಿ ಸ್ಮರಿಸಿಕೊಳ್ಳಬೇಕು. ಬಹಳ ವರ್ಷಗಳ ಹಿಂದೆ - ಅಂದರೆ ಅವರು ಮುಖ್ಯಮಂತ್ರಿಯಾಗಿದ್ದಾಗ - ಕುಮಾರ್ ಬಂಗಾರಪ್ಪನನ್ನು ಹೀರೋ ಆಗಲು ಹೊರಟಾಗ ಬಂಗಾರಪ್ಪ "ನನ್ನ ಕನಸನ್ನು ನನ್ನ ಮಗ ಈಡೇರಿಸುತ್ತಿದ್ದಾನೆ" ಎಂದು ಹೇಳಿದ್ದರು. ಇದೀಗ ಅವರ ಮತ್ತೊಬ್ಬ ಪುತ್ರ ಅಪ್ಪನ ಕನಸನ್ನು ನನಸುಮಾಡಲು ಹೊರಟಿದ್ದಾರೆ.

ಒಂದು ಕಡೆ ಭಾವ ಶಿವರಾಜ್‌ಕುಮಾರ್, ಮತ್ತೊಂದುಕಡೆ ಸಹೋದರ ಕುಮಾರ್ ಬಂಗಾರಪ್ಪ ಹಾಗೂ ಇನ್ನು ಅನೇಕಾನೇಕ ಸಂಬಂಧಿಗಳು ಇದೇ ಉದ್ಯಮದಲ್ಲಿ ಇರುವುದರಿಂದ ಮಧು ಪಾಲಿಗೆ ಕಲಾವಿದನಾಗಿ ಪ್ರಯಾಣ ಕಷ್ಟಕರವಾಗಲಾರದು....



'ಡೇಟಿಂಗ್' ಡೈಸಿ!

'ಮಾಯಾ' ಚಿತ್ರದ ಮುಹೂರ್ತ ಮೊನ್ನೆ ಕಂಠೀರವದಲ್ಲಿ ನಡೆದಾಗ ಅದರ ನಾಯಕಿ ಡೈಸಿ ಬೋಪಣ್ಣ ತನ್ನ ಬೋಲ್ಡ್ ಮಾತು ಮತ್ತು ಉಡುಪುಗಳಿಂದ ಪತ್ರಕರ್ತರನ್ನು ಬೆಚ್ಚಿಬೀಳಿಸಿದರು. ತನ್ನ ಸುಂದರ ಮೈಮಾಟವನ್ನು ಯಾವುದೇ ಮುಜುಗರವಿಲ್ಲದೆ ಪ್ರದರ್ಶಿಸುವ ಡೈಸಿಗೆ ಪತ್ರಕರ್ತರು 'ನಿಮ್ಮ ಮದುವೆ ಯಾವಾಗ' ಎಂದು ಸಹಜವಾಗಿ ಕಿಚಾಯಿಸಿದರು.

ಈ ಪ್ರಶ್ನೆಗೆ ಡೈಸಿ ಗಂಭೀರವಾಗಿ ಉತ್ತರ ನೀಡಿದ್ದು ಹೀಗೆ:


"ನಾನೀಗ ಒಬ್ಬನ ಜೊತೆಗೆ ಕಳೆದ ಒಂದು ವರ್ಷದಿಂದ ಡೇಟಿಂಗ್ ಮಾಡುತ್ತಿದ್ದೇನೆ. ಆತನ ಜೊತೆ ನನಗೆ ಹೊಂದಾಣಿಕೆಯಾದರೆ ಖಂಡಿತಾ ಅವನನ್ನು ಮದುವೆ ಮಾಡಿಕೊಳ್ಳುತ್ತೇನೆ. ಆಗ ನಿಮಗೆಲ್ಲರಿಗೂ ಆಹ್ವಾನ ನೀಡುತ್ತೇನೆ" ಎಂದುತ್ತರಿಸಿದಳು.

ಕನ್ನಡದ ನಟಿಯೊಬ್ಬಳು ಯಾವತ್ತೂ ಇಷ್ಟೊಂದು ಬೋಲ್ಡ್ ಆಗಿ ಮದುವೆ ಮತ್ತು ಡೇಟಿಂಗ್ ಬಗ್ಗೆ ಮಾತಾಡಿದ್ದೇ ಇಲ್ಲ. ಸಾಧಾರಣವಾಗಿ ಮದುವೆ ಪ್ರಸ್ತಾಪ ಬಂದಾಗ ನಾಚಿ ನೀರಾಗುವ ನಾಯಕಿಯರು ಹಾರಿಕೆಯ ಮಾತುಗಳನ್ನಾಡಿ ತಪ್ಪಿಸಿಕೊಳ್ಳುವುದೇ ಹೆಚ್ಚು. ಅಂತಹವರ ಸಾಲಿಗೆ ಸೇರದ ಡೈಸಿ ಬೋಪಣ್ಣ ತಾನು ಕೊಡಗಿನ ದಿಟ್ಟ ಹುಡುಗಿ ಎಂದು ಮಾತಿನಲ್ಲಿ ತೋರಿಸಿದ್ದಾಳೆ.

ಅಂದಹಾಗೆ 'ನೀವು ಯಾವ ಹುಡುಗನ ಜೊತೆ ಡೇಟಿಂಗ್ ಮಾಡುತ್ತಿದ್ದೀರಿ?' ಎಂಬ ಪ್ರಶ್ನೆಗೆ ಮಾತ್ರ ಡೈಸಿ ಉತ್ತರ ನೀಡಲಿಲ್ಲ!

ಸೆಲೆಬ್ರೇಟಿ ಲೀಗ್

ಕನ್ನಡಕ್ಕೆ ಕಿಚ್ಚನ ನಾಯಕತ್ವ



ಇನ್ನುಮುಂದೆ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದ್ದ ಸ್ಟಾರ್ ನಟರು ಕ್ರಿಕೆಟ್ ಗ್ರೌಂಡಿನಲ್ಲೂ ಕಾಣಸಿಗುತ್ತಾರೆ. ಈ ಮೂಲಕ ಸಿನಿಮಾ ಮತ್ತು ಆಟ ಎರಡರ ಮೂಲಕ ನೋಡುಗರನ್ನು ರಂಜಿಸಲಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ ಭರ್ಜರಿ ಹಣ ಬಾಚಿಕೊಳ್ಳುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಭಾರತೀಯ ಚಿತ್ರರಂಗ ತನಗೂ ಒಂದು ಲೀಗ್ ಬೇಕೆಂದು ಹುಟ್ಟು ಹಾಕಿರುವ ಟ್ವೆಂಟಿ-20 ಲೀಗ್ ಇದು. ಹೆಸರು 'ಸೆಲೆಬ್ರಿಟಿ ಕ್ರಿಕೆಟ್ ಲೀಗ್' (ಸಿಸಿಎಲ್). ಕನ್ನಡ, ಹಿಂದಿ, ತಮಿಳು, ತೆಲುಗು ಮತ್ತು ಮಲಯಾಳಂ ಚಿತ್ರರಂಗಗಳನ್ನೊಳಗೊಂಡ ಐದು ತಂಡಗಳು ಈ ಸಿಸಿಎಲ್‌ನಲ್ಲಿರುತ್ತವೆ. ಇದರ ಹಿಂದೆ ಹಣ ಮಾಡುವ ತಂತ್ರವೂ ಅಡಗಿದೆ. ಐಪಿಎಲ್‌ನಲ್ಲಿರುವಂತೆ ಇಲ್ಲೂ ತಂಡಗಳ ಬಿಡ್ಡಿಂಗ್ ನಡೆಯುತ್ತದೆ. ಆದರೆ ಆಟಗಾರರ ಹರಾಜಿನ ಬದಲು ಆಯ್ಕೆ ಮಾಡಲಾಗುತ್ತದೆ.

ಕರ್ನಾಟಕದ ತಂಡಕ್ಕೆ ಕಿಚ್ಚ ಸುದೀಪ್ ಕ್ಯಾಪ್ಟನ್ ಆಗಿ ಆಯ್ಕೆಗೊಂಡಿದ್ದಾರೆ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಉಪ ನಾಯಕ. ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಸ್ಟಾರ್ ಐಕಾನ್ ಪ್ಲೇಯರ್. ಉಳಿದಂತೆ ತಂಡದಲ್ಲಿ ಚಾಲೆಂಜಿಂಗ್ ಸ್ಟಾರ್ ದರ್ಶನ್, ಗೋಲ್ಡನ್ ಸ್ಟಾರ್ ಗಣೇಶ್, ರಿಯಲ್ ಸ್ಟಾರ್ ಉಪೇಂದ್ರ ಸೇರಿದಂತೆ ಒಟ್ಟು 15 ಮಂದಿ ನಾಯಕ ನಟರಿರುತ್ತಾರೆ. ಶೀಘ್ರದಲ್ಲೇ ಅಂತಿಮ ಪಟ್ಟಿಯನ್ನು ಪ್ರಕಟಿಸುವುದಾಗಿ ಅಂಬರೀಶ್ ಆಣೆ ಮಾಡಿದ್ದಾರೆ.

ಸ್ಯಾಂಡಲ್‌ವುಡ್ ಸಿಸಿಎಲ್ ತಂಡಕ್ಕೆ 'ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ' ಕೂಡ ಸಾಥ್ ನೀಡುತ್ತಿದೆ. ಇತ್ತೀಚೆಗೆ ರಾಜ್ಯ ಕ್ರಿಕೆಟ್ ಮಂಡಳಿಗೆ ಆಯ್ಕೆಯಾದ ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಸಹಕಾರ ನೀಡಲು ಒಪ್ಪಿದ್ದಾರೆ. ವೆಂಕಟೇಶ್ ಪ್ರಸಾದ್ ಕೋಚ್ ಆಗುವ ಸಾಧ್ಯತೆಗಳಿವೆ.



ಸಿಸಿಎಲ್ ಅನ್ನು ಕನಿಷ್ಠ 10 ವರ್ಷಗಳಾದರೂ ನಡೆಸುವ ಯೋಚನೆ ಇದೆ ಎಂದಿದ್ದಾರೆ.


17 ಕೋಟಿ ರೇಟು!

ಸ್ಯಾಂಡಲ್‌ವುಡ್ ಟೀಮನ್ನು ಯಾರು ಬೇಕಾದರೂ ಖರೀದಿಸಬಹುದಾಗಿದೆ. ಅದಕ್ಕಾಗಿ ಬಿಡ್ ಕರೆಯಲಾಗಿದೆ. ಡಿಸೆಂಬರ್ 10ರಿಂದ 15ರವರೆಗೆ ಬಿಡ್ಡಿಂಗ್‌ಗೆ ಅವಕಾಶವಿರುತ್ತದೆ. ಕನಿಷ್ಠ ಬಿಡ್ಡಿಂಗ್ ಮೌಲ್ಯ 17 ಕೋಟಿ ರೂಪಾಯಿಗಳು. ಐದೂ ತಂಡಗಳ ಹರಾಜು ಮುಗಿದ ಬಳಿಕ ಟೂರ್ನಮೆಂಟ್ ಆರಂಭವಾಗುತ್ತದೆ. ಜನವರಿ 22ರ ಉದ್ಘಾಟನಾ ಪಂದ್ಯ ಮತ್ತು 23ರ ಎರಡನೇ ಪಂದ್ಯಗಳು ಬೆಂಗಳೂರಿನಲ್ಲೇ ನಡೆಯಲಿವೆ. ಜನವರಿ 29 ಮತ್ತು 30ರಂದು ಹೈದರಾಬಾದಿನಲ್ಲಿ ಫೈನಲ್ ಪಂದ್ಯ ನಡೆಯುತ್ತದೆ. ಚೆನ್ನೈಯಲ್ಲೂ ಕೆಲವು ಪಂದ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಜನವರಿ 22ರಂದು ನಡೆಯುವ ಮೊದಲ ಪಂದ್ಯದಲ್ಲಿ ಸ್ಯಾಂಡಲ್‌ವುಡ್ ಮತ್ತು ಬಾಲಿವುಡ್ ತಂಡಗಳು ಮುಖಾಮುಖಿಯಾಗಿ ಸೆಣಸಾಡಲಿವೆ ಎಂಬುದು ಸದ್ಯದ ಸುದ್ದಿ.

"ಎಲ್ಲರೂ ತಪ್ಪದೆ ಅಭ್ಯಾಸದಲ್ಲಿ ಭಾಗವಹಿಸಿದರೆ ನಮ್ಮ ಟೀಮ್ ಖಂಡಿತವಾಗಿ ಗೆಲ್ಲುತ್ತದೆ. ನನಗೆ ನಾಯಕನ ಜವಾಬ್ದಾರಿಯನ್ನು ವಹಿಸಿದ್ದಾರೆ. ಅದನ್ನು ಶ್ರದ್ಧೆಯಿಂದ ಮಾಡುತ್ತೇನೆ" ಎಂದು ಕಿಚ್ಚ ಸುದೀಪ್ ಕೆಚ್ಚೆದೆಯ ಮಾತಾಡಿದ್ದಾರೆ. ರಿಯಲ್ ಸ್ಟಾರ್ ಉಪ್ಪಿ "ನನಗೆ 11ನೇ ಬ್ಯಾಟ್ಸ್‌ಮನ್ ಸ್ಥಾನವನ್ನಾದರೂ ಕೊಡಿ" ಎಂದು ಕಿಚಾಯಿಸಿದ್ದಾರೆ.

ಬಾಲಿವುಡ್ ತಂಡ ಈಗಾಗಲೇ ಮಾರಾಟಗೊಂಡಿದ್ದು ಸಲ್ಮಾನ್ ಖಾನ್ ಅವರ ಸಹೋದರ ಸೊಹೈಲ್ ಖಾನ್ ಅದನ್ನು ಪಡೆದುಕೊಂಡಿದ್ದಾರೆ. ಸುನಿಲ್ ಶೆಟ್ಟಿ ನಾಯಕತ್ವದ ಈ ತಂಡದಲ್ಲಿ ರಿತೇಶ್ ದೇಶ್‌ಮುಖ್, ಸಲ್ಮಾನ್ ಖಾನ್, ಹರ್ಮನ್ ಬಾವೇಜ, ಅಫ್ತಾಬ್ ಶಿವದಾಸನಿ, ಶ್ರೇಯಸ್ ತಾಲ್ಪಡೆ, ಕುನಾಲ್ ಖೇಮು, ಅರ್ಬಾಜ್ ಖಾನ್, ಆಶಿಶ್ ಚೌಧರಿ, ಸೊಹೈಲ್ ಖಾನ್, ಮಹೇಶ್ ಮಾಂಜ್ರೇಕರ್, ಸೋನು ಸೂದ್, ಮಕರಂದ್ ದೇಶಪಾಂಡೆ, ಶಬ್ಬೀರ್ ಅಹ್ಲುವಾಲಿಯಾ, ವಿಕಾಸ್ ಕಲಂತ್ರಿ, ಇರ್ಫಾನ್ ಖಾನ್, ಅಂಗದ್ ಬೇಡಿ, ಅಂಕುಶ್ ಚೌಧರಿ, ಅಪೂರ್ವಾ ಲಾಖಿಯಾ, ಕಬೀರ್ ಸದಾನಂದ್ ಇದ್ದಾರೆ. ಈ ತಂಡಕ್ಕೆ 'ಮುಂಬೈ ಹೀರೋಸ್' ಎಂದು ಹೆಸರಿಡಲಾಗಿದೆ. ಆದರೆ ಎಷ್ಟು ಕೋಟಿ ರೂಪಾಯಿಗಳಿಗೆ ತಂಡವನ್ನು ಖರೀದಿಸಲಾಗಿದೆ ಎಂಬ ಗುಟ್ಟು ಇನ್ನೂ ರಟ್ಟಾಗಿಲ್ಲ.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 22-12-2010 RNI No. KARKAN2005



ರಮ್ಯಾ ಸಂದೇಶ

ಮೊದಲೆಲ್ಲಾ ಶೂಟಿಂಗ್‌ಗೆ ಕೈಕೊಡುವ ಸಂದರ್ಭದಲ್ಲಿ "ನಾನು ಎಸ್ಸೆಂ ಕೃಷ್ಣ ಅವರ ಜೊ ಕ್ಯಾಬಿನೆಟ್ ಮೀಟಿಂಗ್ ಅಟೆಂಡ್ ಮಾಡಿದ್ದೆ... ನನ್ನ ಬ್ಯುಸೀ ಶೆಡ್ಯೂಲ್ ಮಧ್ಯಾನೂ ನಾನು ಕೃಷ ಅವರ ಜೊತೆ ಪಾಲಿಟಿಕ್ಸ್ ಡಿಸ್ಕಷನ್ ಮಾಡ್ತೀನಿ...' ಎಂದೆಲ್ಲಾ ಬೂಸಿ ಬಿಡುತ್ತಿದ್ದಳು ರಮ್ಯಾ.

"ಸೋಷಿಯಲ್ ವರ್ಕು ಮಾಡಿದರೆ, ವಿಜಯ್‌ಮಲ್ಯ ಅವರ ಥರಾ ಮಾಡ್ಬೇಕು. ಪಾಪ, ಜನರ ಉಪಯೋಗಕ್ಕಾಗಿ ಅವರು ಕಿಂಗ್‌ಫಿಷರ್ ಏರ್‌ಲೈನ್ಸ್ ಮಾಡಿ ಎಷ್ಟೊಂದು ಜನಸೇವೆ ಮಾಡಿದ್ದಾರೆ ನೋಡಿ..." ಅಂತೆಲ್ಲಾ ತನ್ನ ಅಜ್ಞಾನವನ್ನು ಮೆರೆಯುತ್ತಿದ್ದ ರಮ್ಯಾಳಲ್ಲಿ ಈಗ ಒಂದಿ ಅರಿವು ಮೂಡುತ್ತಿರುವಂತಿದೆ.

ಇತ್ತೀಚೆಗೆ ತನ್ನ ಟ್ವಿಟ್ಟರ್ ಪೇಜ್‌ನಲ್ಲಿ ರಮ್ಯಾ "ಬಿಜೆಪಿ ಸರ್ಕಾರ ತೊಲಗಬೇಕು. ಕರ್ನಾಟಕದ ಬಿಜೆಪಿ ಸರ್ಕಾರ ಪ್ರತೀ ದಿನ ಹೊಸ ಹೊಸ ಹಗರಣಗಳಿಂದ ಸುದ್ದಿಯಾಗುತ್ತಿದೆ. ಇದು ಸಾಮಾ ಜನರಲ್ಲಿ ವಾಕರಿಕೆ ಹುಟ್ಟಿಸುತ್ತಿದೆ. ಮತ ನೀಡಿ ಈ ಸರ್ಕಾರವನ್ನು ಅಸ್ತಿತ್ವಕ್ಕೆ ತಂದ ನಮಗೆ ಈಗಲಾದರೂ ನಾಚಿಕೆಯಾಗಬೇಕು" ಎಂದು ಬಿಜೆಪಿ ಸರ್ಕಾರವನ್ನು ಮನಸೋ ಇಚ್ಛೆ ಝಾಡಿಸಿದ್ದಾಳೆ. ಜೊತೆಗೆ "ಲಂಚ ನೀಡಿ ರಾಜಕಾರಣಿಗಳನ್ನು ಬೆಳೆಸುತ್ತಿರುವವರನ್ನೂ ಶಿಕ್ಷೆಗೆ ಗುರಿಪಡಿಸಬೇಕು" ಎಂದು ನೆಟ್ ನೋಡುಗರಿಗೆ ಸಂದೇಶ ರವಾನಿಸಿದ್ದಾಳೆ...!


90 ಹೊಡೆಯಲು ರೆಡಿ!

'90' ಎಂಬ ಅಂಕಿ ಈಗ ಸಿನಿಮಾದ ಟೈಟಲ್ಲು. 'ಜಮಾನಾ' ಚಿತ್ರವನ್ನು ನಿರ್ದೇಶಿಸಿದ್ದ ಲಕ್ಕಿ ಶಂಕರ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. 'ನಂ.1' ಚಿತ್ರದ ನಂತರ ನಿರ್ಮಾಣದಿಂದ ದೂರವಾಗಿ ನಿರ್ದೇಶನ, ಸಂಗೀತ ನಿರ್ದೇಶನ ಹಾಗು ನಟನೆಯಲ್ಲೇ ಫುಲ್ ಬ್ಯುಸಿಯಾಗಿದ್ದ ಸಾಧು ಕೋಕಿಲಾ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈ ಹಿಂದೆ ಒಂದೆರಡು ಕನ್ನಡ ಚಿತ್ರಗಳಲ್ಲೂ ನಟಿಸಿದ್ದ ಮಲಯಾಳಂನ ನೀಲಿ ಚಿತ್ರಗಳ ನಾಯಕಿ ಶಕೀಲಾ ಈ ಚಿತ್ರದ ನಾಯಕಿ!



ಕನ್ನಡದ ಬಹುತೇಕ ಕಾಮಿಡಿ ನಟರು ಈ ಚಿತ್ರದಲ್ಲಿ ಒಟ್ಟೊಟ್ಟಿಗೇ ನಟಿಸುತ್ತಿದ್ದಾರೆ. ಈ ಹಿಂದೆ 'ಐತ್ತಲಕಡಿ' ಚಿತ್ರದಲ್ಲೂ ಕನ್ನಡದ ಬಹುತೇಕ ಹೀರೋಗಳು, ಕಾಮಿಡಿ ಸ್ಟಾರ್‌ಗಳು ಕಾಣಿಸಿಕೊಂಡಿದ್ದರು. ಆದರೆ ಆ ಚಿತ್ರ ಒಂದು ವಾರದಲ್ಲೇ ಥಿಯೇಟರ್‌ನಿಂದ ಗೋತಾ ಹೊಡೆದಿತ್ತು. ಈ ಬಾರಿ '90' ಹೊಡೆದವರ ಕತೆ ಏನಾಗುತ್ತೋ ಗೊತ್ತಿಲ್ಲ.

ಹುಚ್ಚು ಗೆಲುವು!



ತಮಿಳು ನಟ ವಿಕ್ರಮ್ ಮತ್ತೊಮ್ಮೆ ಹುಚ್ಚನಾಗಿದ್ದಾರೆ.

ವಿಕ್ರಮ್ ನಾಯಕನಾಗಿ ನಟಿಸಿದ್ದ ಮೊದಲ ಚಿತ್ರ 'ಸೇತು' ಸೂಪರ್‌ಹಿಟ್ ಆಗಿ ಆತನಿಗೆ ಸ್ಟಾರ್‌ಪಟ್ಟ ತಂದುಕೊಟ್ಟಿತ್ತು. ಬಾಲಾ ನಿರ್ದೇಶಿಸಿದ್ದ 'ಸೇತು' ಕನ್ನಡದಲ್ಲೂ 'ಹುಚ್ಚ'ನಾಗಿ ರಿಮೇಕುಗೊಂಡು ಸುದೀಪ್‌ಗೆ ಕೂಡಾ ಬ್ರೇಕ್ ನೀಡಿತ್ತು. ಆ ಚಿತ್ರದಲ್ಲಿ ವಿಕ್ರಮ್ ಬುದ್ಧಿಮಾಂದ್ಯನ ಪಾತ್ರದಲ್ಲಿ ಮನೋಜ್ಞವಾಗಿ ನಟಿಸಿದ್ದರು. ನಂತರ ಮಲ್ಟಿಪಲ್ ಪರ್ಸನಾಲಿಟಿ ಡಿಸಾರ್ಡರ್ ರೋಗಿಯಾಗಿ ವಿಕ್ರಮ್ ಕಾಣಿಸಿಕೊಂಡಿದ್ದ 'ಅನ್ನಿಯನ್' ಕೂಡಾ ಸೂಪರ್‌ಡೂಪರ್ ಹಿಟ್ ಆಗಿ ಹೊಸ ಸಂಚಲನವೆಬ್ಬಿಸಿತ್ತು. ದುರಾದೃಷ್ಟಕ್ಕೆ, 'ಅನ್ನಿಯನ್'ನಂತರ ವಿಕ್ರಂ ನಟಿಸಿದ ಚಿತ್ರಗಳೆಲ್ಲವೂ ಶೋಚನೀಯವಾಗಿ ಸೋತು ಮಲಗಿದ್ದವು.

ಇದೆಲ್ಲದರಿಂದಾಗಿ ವಿಕ್ರಮ್ 'ಹುಚ್ಚನಾದರೆ ಮಾತ್ರ ಗೆಲುವು ಸಾಧ್ಯ' ಎಂದುಕೊಂಡಿದ್ದಾರೇನೋ ತಮಿಳು ಚಿತ್ರರಂಗದವರು. ಏಕೆಂದರೆ ಈಗ 'ದೀವಾ ಮಗನ್' ಎಂಬ ಹೊಸ ಚಿತ್ರದಲ್ಲೂ ವಿಕ್ರಮ್ ಹುಚ್ಚನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ.

ಈ ಚಿತ್ರಕ್ಕೆ ಕನ್ನಡತಿ ರಮ್ಯಾ ನಾಯಕಿ ಎಂಬ ಸುದ್ದಿಕೇಳಿಬಂದಿತ್ತು. ಆದರೆ ಅದು ಸುಳ್ಳು ಎಂದು ಸ್ವತಃ ರಮ್ಯಾಳೇ ಹೇಳಿಕೆ ನೀಡಿದ್ದಾಳೆ. ಈಗ ಈ ಚಿತ್ರದ ನಾಯಕಿಯಾಗಿ ಮತ್ತೋರ್ವ ಕನ್ನಡತಿ ಅನುಷ್ಕಾ ಶೆಟ್ಟಿ ಆಯ್ಕೆಯಾಗಿರುವುದು ಖಚಿತವಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajaji...